ಸಂಚಿಕೆ

೧೦೭



ಸಂಚಯ

ಕನ್ನಡ ಸಾಹಿತ್ಯ, ಸಂಸ್ಕೃತಿ ಪತ್ರಿಕೆ

ಸಂಚಿಕೆಯ ಗ್ಯಾಲರಿ




ಕಾಲೇಜಿನಲ್ಲಿ ಸೀಟು ಸಿಗದೆ ಇದ್ದರೆ, ಮನೇಲಿ ಊಟಮಾಡೊಲ್ಲ ಅನ್ನುತ್ತಾನೆ ಅಂದ್ರೆ

ಖ್ಯಾತ ವ್ಯಂಗ್ಯಚಿತ್ರಕಾರ
ಆರ್.ಕೆ. ಲಕ್ಷ್ಮಣ್ ಅವರಿಗೆ

ಶ್ರದ್ಧಾಂಜಲಿ







■ ಸಂಚಿಕೆ: ೧೦೬

ಸಂಚಯ

ಕನ್ನಡ ಸಾಹಿತ್ಯ, ಸಂಸ್ಕೃತಿ ಪತ್ರಿಕೆ

■ ತ್ರೈ ಮಾಸಿಕ ■ ಜನವರಿ-ಮಾರ್ಚ್ ೨೦೧೫

ಎತ್ತೆತ್ತು ತೆರೆದಿರುವ ಹತ್ತು ಕಿಟಕಿಗಳಿಂದ
ಒತ್ತೊತ್ತಿ ಬರುತ್ತಿರುವ ನೋಟಗಳನು
ಎಷ್ಟು ದಿವಸನುಭವಿಸಿ ಕಡೆಗೆ ಕಳೆಯಲುಬಹುದು
ಸೃಷ್ಟಿ ಚದುರಿಯ ಮಾಟ ಮಾಟಗಳನು

ದ.ರಾ. ಬೇಂದ್ರೆ
(ಮನಸುಖರಾಯನ ಮಗಳು)

ಸಂಪಾದಕ :
ಡಿ.ವಿ. ಪ್ರಹ್ಲಾದ್

ಸಂಪರ್ಕ ವಿಳಾಸ
ನಂ. ೧೦೦, ೨ನೇ ಮುಖ್ಯರಸ್ತೆ,
೬ನೇ ಬ್ಲಾಕ್, ೩ನೇ ಹಂತ, ೩ನೇ ಘಟ್ಟ
ನಶಂಕರಿ, ಬೆಂಗಳೂರು - ೫೬೦ ೦೮೫
ಫೋನ್‌ನಂ.:೦೮೦-೨೬೭೯೧೯೨೫
ಮೊಬೈಲ್: ೯೮೪೪೦ ೬೩೫೧೪
email:
sanchaya.sahityapatrike@gmail.com

● ಮುಖಪುಟ ಕಲಾಕೃತಿ: ಎಸ್.ಜಿ. ವಾಸುದೇವ, ಪುಟವಿನ್ಯಾಸ: ಎಂ.ಆರ್. ಗುರುಪ್ರಸಾದ್

ಚಂದಾವಿವರ | ● ಬಿಡಿಪ್ರತಿ : ರೂ. ೭೫/- ● ವರ್ಷಕ್ಕೆ (ನಾಲ್ಕು ಸಂಚಿಕೆಗಳು) : ರೂ. ೩೦೦/-

ಚೆಕ್/ಡಿ.ಡಿ. ಮೂಲಕ ಚಂದಾ ಕಳಿಸುವವರು 'ಸಂಚಯ', ಬೆಂಗಳೂರು ಎಂಬ ಹೆಸರಿಗೆ ಕಳುಹಿಸಿ ಅಥವಾ **ಕೆನರಾಬ್ಯಾಂಕ್**, ಬೆಂಗಳೂರಿನ ಗಿರಿನಗರ ಶಾಖೆ ಉಳಿತಾಯ ಖಾತೆ ಸಂ.: **1821101004682**ಗೆ **ಐಎಫ್‌ಎಸ್‌ಸಿ ಕೋಡ್**: CNRB 0001821 - ಜಮಾ ಮಾಡಬಹುದು.

ಹೊಳೆದದ್ದು ತಾರೆ ಉಳಿದದ್ದು ಆಕಾಶ!

ಪ್ರಿಯ ಓದುಗರೆ

ಮತ್ತೊಂದು ಹೊಸ ಕ್ಯಾಲೆಂಡರ್ ವರ್ಷ. ಹಾಗೆ ನೋಡಿದರೆ ಈ ಸಂಚಿಕೆ ಯಶವಂತ ಚಿತ್ತಾಲರ ಸಾಹಿತ್ಯ ಕುರಿತು ವಿಶೇಷಾಂಕವಾಗಿ ಪ್ರಕಟಗೊಳ್ಳಬೇಕಿತ್ತು. ನಮ್ಮ ಲೇಖಕ ಬಳಗದ ನಿರಾಸಕ್ತಿ ಹಾಗೂ ಉಡಾಫೆತನಗಳು ಅದನ್ನು ಮುಂದೂಡಿದೆ. ಯಾಕೆ ಹೀಗಾಗುತ್ತದೆ ಬರೆದರೂ ನಡೆಯುತ್ತೆ, ಬರೆಯದೇ ಉಳಿದರೂ ನಡೆಯುತ್ತೆ ಅನ್ನುವ ಧೋರಣೆಯೆ? ಮುಖ್ಯವಾಗಿ ಸಾಹಿತ್ಯ ಬರವಣಿಗೆಯಾಗಲಿ, ಪುಸ್ತಕ ಪತ್ರಿಕೆಯ ಪ್ರಕಟಣೆಯಾಗಲಿ ನಮ್ಮ ಲೇಖಕ ಓದುಗ ಸಮುದಾಯಕ್ಕೆ ತುಂಬಾ ಗಂಭೀರವಾದ ಚಟುವಟಿಕೆಗಳೇನಲ್ಲ. ಅದೇ ಕಾರಣಕ್ಕೆ ಹಲವು ಚಟುವಟಿಕೆಗಳ ನಡುವೆ ಬರವಣಿಗೆ ಸಾಹಿತ್ಯಕ ಜವಾಬ್ದಾರಿ ಇತ್ಯಾದಿಗಳು ಉಳಿದ ವೃತ್ತಿ ಜೀವನದ ನಡುವಿನ ಪ್ರಮುಖವಲ್ಲದ ಖಯಾಲಿಗಳೇ ಆಗಿವೆ. ಸಾಹಿತ್ಯ ನಂಬಿಕೊಂಡು ಅಥವಾ ಬರೆದೇ ಬದುಕುವ, ಬರವಣಿಗೆಯಿಂದ ಅನ್ನ ಹುಟ್ಟುವ ಸ್ಥಿತಿ ನಮ್ಮಲ್ಲಿ ಇಲ್ಲ- ಅವತ್ತಿಗೂ, ಇವತ್ತಿಗೂ. ವೃತ್ತಿಯೊಂದರ ನಡುವಿನ ಹವ್ಯಾಸವಾಗಷ್ಟೇ ಸಾಹಿತ್ಯ ಪ್ರಕಟಣೆ ಇತ್ಯಾದಿಗಳು. ಇದು ನಮ್ಮ ಮನೋಭಾವವನ್ನು ಸಾಹಿತ್ಯದ ಜವಾಬ್ದಾರಿಯನ್ನು ತೀವ್ರವಾಗಿ ಪ್ರಭಾವಿಸಿದೆ.

ನಮ್ಮ ಲೇಖಕರು ಸಾಮಾಜಿಕ ಬದ್ಧತೆಯನ್ನು ಮಾತಾಡಿದಷ್ಟು ತೀವ್ರವಾಗಿ ಬದುಕುತ್ತಾರಾ ಅಂತ ಕೇಳಿದರೆ, ಪ್ರಶ್ನೆಗೆ ಖಚಿತ ಉತ್ತರ ದೊರಕುವುದಿಲ್ಲ. ಸಾಮಾಜಿಕ ಬದ್ಧತೆಯ ಮಾತೂ ಸಾಹಿತ್ಯಕ ಯಶಸ್ಸಿನ ಏಣಿಮೆಟ್ಟಿಲಾಗುತ್ತಿರುವುದು ದುರಂತ. ನಮ್ಮಂಥ ಕಿರುಪತ್ರಿಕೆಗಳಾಗಲಿ ಅಥವಾ ದೊಡ್ಡ ಪತ್ರಿಕೆಗಳಾಗಲಿ ನಮ್ಮ ಲೇಖಕ ಸಮುದಾಯಕ್ಕೆ ಬರೆಯಬೇಕಾದ ಒತ್ತಡವನ್ನು ರೂಪಿಸುವಲ್ಲಿ ಸೋಲುತ್ತಿದ್ದೇವೆ.

ಕಳೆದವಾರ ಧಾರವಾಡದಲ್ಲಿ 'ಸಾಹಿತ್ಯ ಸಂಭ್ರಮ'. ಎಲ್ಲವೂ ವ್ಯವಸ್ಥಿತ ಅಚ್ಚುಕಟ್ಟು ಹಾಗೂ ಒಂದು ಶಿಸ್ತಿನಲ್ಲೇ ಜರುಗಿತು. ಅದರ ಆಶಯಗಳು ಹಾಗೂ ಆಚರಣೆಗಳ ಬಗ್ಗೆ ಹಲವು ಪ್ರಶ್ನೆಗಳನ್ನು ಎತ್ತಬಹುದಾದರೂ ಅದಕ್ಕಿದು ಸಂದರ್ಭವಲ್ಲ. ಅಪರೂಪಕ್ಕೆ ಸಾಹಿತ್ಯ ಪತ್ರಿಕೆಗಳ ಬಗ್ಗೆ ಒಂದು ಗೋಷ್ಠಿ. ಈ ಸಂಪಾದಕನನ್ನೂ ಒಳಗೊಂಡು ಇಬ್ಬರು ಮಾಜಿ ಸಂಪಾದಕರಿಗೂ ಗೋಷ್ಠಿಯಲ್ಲಿ

ಭಾಗವಹಿಸಲು ಆಹ್ವಾನಿಸಲಾಗಿತ್ತು. ತಿಂಗಳ ಮೊದಲಿಗೇ ಗೋಷ್ಠಿಯ ವಿಷಯ ವ್ಯಾಪ್ತಿ ತಿಳಿಸಲಾಗಿತ್ತು. ಆದರೆ, ಗೋಷ್ಠಿ ಆರಂಭಕ್ಕೆ ಕೆಲ ನಿಮಿಷಗಳ ಮೊದಲು ಅದರ ನಿರ್ವಾಹಕರು ನವೋದಯ, ನವೋದಯ ಪೂರ್ವ, ನವ್ಯ-ನವ್ಯೋತ್ತರ ಇತ್ಯಾದಿಗಳ ಸ್ವರೂಪ ಹೇಳಿ ಗಲಿಬಿಲಿ ಹುಟ್ಟಿಸಿದರು. ಬರಬೇಕಿದ್ದ ಒಬ್ಬರ ಬದಲಿಗೆ ಮತ್ತೊಬ್ಬ ಕವಿಗಳು ಭಾಗವಹಿಸುತ್ತಾರೆಂದರು. ನನಗೆ ಆಶ್ಚರ್ಯ, ಸಾಹಿತಿಗಳು ತಮಗೆ ಗೊತ್ತಿಲ್ಲದ ಎಷ್ಟೊಂದು ವಿಷಯಗಳ ಬಗ್ಗೆ ಹಾಗೇ ಸುಮ್ಮನೆ ಮಾತನಾಡಬಲ್ಲ ಶಕ್ತಿ ಕುರಿತು ಜೊತೆಗೆ ನಿರಾಸೆ; ಸಂಘಟಕರ 'ಹೇಗಿದ್ದರೂ ನಡೆಯುತ್ತದೆ' ಎಂಬ ಮನೋಭಾವ ಕುರಿತು. ಒಂದು ಗಂಟೆಯ ಇಡೀ ಗೋಷ್ಠಿ ಹಳೆಯ ಪತ್ರಿಕೆಗಳ ಕುರಿತ ಅರೆಬರೆ ಮಾಹಿತಿಯಲ್ಲಿ ಹೆಸರು ಹೇಳುವಲ್ಲಿ ಮತ್ತೆ ಕೆಲವು ಸಂಪಾದಕರು ತಮ್ಮ ಬಾವುಟ ಹಾರಿಸಿಕೊಳ್ಳುವ ಬಾಲಿಶತನದಲ್ಲಿ ಮುಗಿದುಹೋಗಿತ್ತು. ಸಾಹಿತ್ಯದ ಬೆಳವಣಿಗೆಯಲ್ಲಿ ಕಿರುಸಾಹಿತ್ಯ ಪತ್ರಿಕೆಗಳ ಪಾತ್ರ, ಅವುಗಳ ಅಂದಿನ ಹಾಗೂ ಇಂದಿನ ಸ್ವರೂಪ ಸವಾಲುಗಳನ್ನು ಕುರಿತು ಚರ್ಚಿಸಬೇಕಿದ್ದ ಗೋಷ್ಠಿ; ನನ್ನ ಪದ್ಯ ನಾನು ಆ ಕಾಲಕ್ಕೆ ಓದಿದ ಪತ್ರಿಕೆಗಳು, ನನ್ನ ಪತ್ರಿಕೆ, ನನ್ನ ಪತ್ರಿಕೆಗೆ ಚಂದಾ ಕೊಡಿ ಎಂಬ ಕೋಡಂಗಿ ಕುಣಿತವಾಗಿಬಿಟ್ಟಿತು. ಇಲ್ಲೂ ಪ್ರಧಾನವಾಗಿದ್ದು ಹೇಗಿದ್ದರೂ ನಡೆಯುತ್ತದೆ ಎಂಬ ಮನೋಭಾವ.

ಈ ತನಕ ಸಾಹಿತ್ಯ ಪರಿಷತ್ತಿನ ಯಾವ ಸಮ್ಮೇಳನದಲ್ಲೂ ಸಾಹಿತ್ಯ ಪತ್ರಿಕೆಗಳ ಬಗ್ಗೆ ಒಂದೂ ಗೋಷ್ಠಿ ನಡೆಸಿಲ್ಲ. ಕೆಲವು ವರ್ಷಗಳ ಕೆಳಗೆ ನಾವುಗಳು ಒತ್ತಾಯ ಮಾಡಿದಾಗ ಮಾಧ್ಯಮ ಗೋಷ್ಠಿಯಲ್ಲಿ ಸಾಹಿತ್ಯ ಪತ್ರಿಕೆಗಳ ಬಗ್ಗೆ ಒಂದು ಭಾಷಣ, ಅದೂ ಇಂಗ್ಲಿಷ್ ಪತ್ರಕರ್ತರೊಬ್ಬರಿಂದ. ಅಲ್ಲೂ ನಡೆದದ್ದು ಪತ್ರಿಕೆಗಳ ಹೆಸರುಗಳ ಉರುಳಾಟ. ರಾಜಕಾರಣಿಗಳನ್ನು, ಹುಸಿ ಲೇಖಕರನ್ನು ಮುಂದಿಟ್ಟುಕೊಂಡ ದೊಡ್ಡ ದೊಡ್ಡ ಸಮಾರಂಭದಲ್ಲಿ ಸಣ್ಣ ಪತ್ರಿಕೆಗಳ ಮೇಲು ಮಾತಿಗೆ ಜಾಗವಿಲ್ಲ. ಆದರೆ, ಸಣ್ಣ ಪತ್ರಿಕೆಗಳು ತಾವು ತಲುಪಿಸಬೇಕಾದ ಮಾತನ್ನು ತಲುಪಿಸಬೇಕಾದವರಿಗೆ ಖಂಡಿತಾ ತಲುಪಿಸುತ್ತವೆ; ನಿಜವನ್ನು ತೋರಿಸುತ್ತವೆ. ಈ ದೊಂಬರಾಟಗಳಿಂದ ಅವುಗಳಿಗೇನೂ ಆಗಬೇಕಿಲ್ಲ.

ಕಳೆದ ಕ್ಯಾಲೆಂಡರ್ ವರ್ಷದಲ್ಲಿ (೨೦೧೪) ಮೂರು ಸಂಚಿಕೆಗಳು ಮಾತ್ರ ಪ್ರಕಟಗೊಂಡವು. ಈ ವರ್ಷದಿಂದ 'ಸಂಚಯ' ತ್ರೈಮಾಸಿಕವಾಗಿದೆ. ೨೦೧೫ರ ಸಾಲಿನಲ್ಲಿ ನಾಲ್ಕು ಸಂಚಿಕೆಗಳು ಹೊರಬರಲಿವೆ. ಚಂದಾದರ ಮುನ್ನೂರು ರೂಪಾಯಿಗೆ ಇಳಿಸಲಾಗಿದೆ. ಬಿಡಿಪತ್ರಿ ರೂ. ೭೫/-. ಈಗ ಕಳೆದ ವರ್ಷ (೨೦೧೪) ಚಂದಾ ಕೊಟ್ಟವರು ಇನ್ನು ಮೂರು ಸಂಚಿಕೆಗಳಿಗೆ (೧೦೫-೧೦೭ನೇ ಸಂಚಿಕೆಯ ತನಕ) ಚಂದಾ ಕೊಡಬೇಕಿಲ್ಲ. ೧೦೮ನೇ ಸಂಚಿಕೆಗೆ ಅವರು ಚಂದಾ ನವೀಕರಿಸಿದರೆ ಸಾಕು. ಉಳಿದ ಹೊಸಬರ ಚಂದಾ ನಾಲ್ಕು ಸಂಚಿಕೆಗಳಿಗೆ.

ವ್ಯವಹಾರದ ಮಾತುಗಳನ್ನು ಮೊಟಕುಗೊಳಿಸಿ, ಚಿತ್ತಾಲರ ಬಗೆಗಿನ ಮುಂದಿನ ವಿಶೇಷಾಂಕ ೧೦೭ ನಿರೀಕ್ಷಿಸಿ. ಏಪ್ರಿಲ್‌ಗೆ.

ಮತ್ತೆ ಮುಂದಿನ ಸಂಚಿಕೆಗೆ

ಸಂಪಾದಕ

ಈ ಸಂಚಿಕೆಯಲ್ಲಿ...

ಕಥೆ

ಉತ್ತಪ್ಪನ ಬಾವಿ ೫

■ ಮಲಯಾಳಂ ಮೂಲ: ಕರೂರ ನೀಲಕಂಠ ಪಿಳ್ಳೈ
ಇಂಗ್ಲಿಷ್ ಅನುವಾದ: ಸಾಮ್ಯುಯಲ್ ಮಥಾಯ್,
ಕನ್ನಡ ಅನುವಾದ: ಎನ್.ಎಸ್. ಶಾರದಾ ಪ್ರಸಾದ್

ಬೇಂದ್ರೆ ಓದಿನ ಗುಚ್ಛ

ಅಂತಃಸ್ಫುರಣದಿಂದ ಬಂದ ಕವಿತೆಗಳು ೧೧

ಬೇಂದ್ರೆ ಅವರ ಜೋಗಿ ಮತ್ತು
ಕುರುಡು ಕಾಂಚಾಣ ೧೯

■ ಕುಸುಮಾಕರ ದೇವರಗೇಣ್ಣೂರ

ಬೇಂದ್ರೆಯವರ 'ಅನಂತ ಪ್ರಣಯ' ೩೫

■ ವಿಶ್ವ ಸ್ಯಾನ್‌ರಮೋನ್, ಕ್ಯಾಲಿಫೋರ್ನಿಯಾ

ಸಮಾಜ ನಿಷ್ಠೆ ಎಂದರೇನು? ೪೩

■ ಮೂಲ : ದ.ರಾ. ಬೇಂದ್ರೆ
ಕನ್ನಡಕ್ಕೆ : ಆನಂದ ಝುಂಜರವಾಡ

ದಲಿತ ಹೋರಾಟ ಮತ್ತು
ಜಾತಿ ಪ್ರಶ್ನೆಯ ಚರ್ಚೆಗಳು ೪೬

■ ನಟರಾಜ ಕೆ.ಎಸ್.

'ಯಾನ'ದಲ್ಲಿ ಒಂದು ಸುತ್ತು ೫೨

■ ಡಾ.ಸಂತೋಷ್‌ಕುಮಾರ್ ಪಿ.ಕೆ

ಸಂಚಯ ಸಾಹಿತ್ಯ ಸ್ಪರ್ಧೆ ೨೦೧೪ ೫೭

■ ಕಾವ್ಯಾ ಸಂತೋಷ ನಾಗರಕಟ್ಟೆ ■ ಗಿರಿಯಪ್ಪ ಆಸಂಗಿ ■ ಚನ್ನಪ್ಪ ಅಂಗಡಿ ■ ದೀಪ್ತಿ ಭದ್ರಾವತಿ ■ ಪದ್ಮನಾಭ ಭಟ್ ■ ಮಧು ಬಿರಾದಾರ ■ ಮಹಂತೇಶ ಪಾಟೀಲ ■ ರಾಮಪ್ಪ ಕೋಟಿಹಾಳ್ ■ ರೂಪಾ ಕೋಟೇಶ್ವರ ■ ರೇಣುಕಾ ಎ ಕಠಾರಿ ■ ಎನ್.ಆರ್. ರೂಪಶ್ರೀ ■ ಸತ್ಯಮಂಗಲ ಮಹದೇವ

ಉತ್ತಪ್ಪನ ಬಾವಿ

■ ಮಲಯಾಳಂ ಮೂಲ: **ಕರೂರ ನೀಲಕಂಠ ಪಿಳ್ಳೈ**
ಇಂಗ್ಲಿಷ್ ಅನುವಾದ: **ಸಾಮ್ಯುಯಲ್ ಮಥಾಯ್**,
ಕನ್ನಡ ಅನುವಾದ: **ಎಸ್.ಎಸ್. ಶಾರದಾ ಪ್ರಸಾದ್**

ಮೈಸೂರಿನ ಎಸ್.ಎಸ್. ಶಾರದಾ ಪ್ರಸಾದ್ (೨೦-೦೫-೧೯೪೬) ೨೦-೦೧-೨೦೧೫ ರಂದು ವಿಧಿವಶರಾದರು. ಮೈಸೂರು ವಿಶ್ವವಿದ್ಯಾಲಯದ ಅನುವಾದ ವಿಭಾಗದಲ್ಲಿದ್ದು ನಿವೃತ್ತರಾದರು. 'ಭಾರತದ ಪ್ರೌಢ ಇತಿಹಾಸ' ಎಂಬ ಬೃಹತ್ ಗ್ರಂಥ ಅನುವಾದಿಸಿದ್ದರು. ಜೊತೆಗೆ 'ಭಾರತೀಯ ಕತೆಗಳು' (೧೯೮೫) ಇತರ ಅನುವಾದಿತ ಪುಸ್ತಕಗಳೂ ಪ್ರಕಟಗೊಂಡಿತ್ತು. ಅವರ ಐವತ್ತು ಅನುವಾದಿತ ಭಾರತೀಯ ಕತೆಗಳ ಸಮಗ್ರ ಸಂಪುಟ 'ಸಂಚಯ'ದ ಮೂಲಕ ಪ್ರಕಟಣೆಗೆ ಸಿದ್ಧಗೊಳ್ಳುತ್ತಿದೆ. ಜನವರಿ ೩೧ರ, 'ಕವಿದಿನ'ದಂದು ಅವರನ್ನು ಗೌರವಿಸುವ ಕಾರ್ಯಕ್ರಮ ಯೋಜಿಸಲಾಗಿತ್ತು. ಅವರ ಹಠಾತ್ ನಿರ್ಗಮನ ಅವರ ಕುಟುಂಬದವರಿಗೆ, ಅಪಾರವಾದ ಗೆಳೆಯರಿಗೆ, ಬಂಧು-ಬಳಗದವರಿಗೆ ತೀವ್ರವಾದ ಶೋಕ ಉಂಟುಮಾಡಿದೆ. ಅವರಿಗೊಂದು ಶ್ರದ್ಧಾಂಜಲಿಯಾಗಿ ಈ ಅಪ್ರಕಟಿತ ಅನುವಾದಿತ ಕತೆ 'ಸಂಚಯ' ಪ್ರಕಟಿಸುತ್ತಿದೆ.

ಉತ್ತಪ್ಪ ಆ ಸಣ್ಣ ಊರಿನಲ್ಲಿ ಎಲ್ಲ ಕಡೆ ಪ್ರತ್ಯಕ್ಷವಾಗುತ್ತಿದ್ದ: ಹೊಟೇಲುಗಳ ಬಾಗಿಲುಗಳಲ್ಲಿ, ಗಾಡಿಸ್ಟ್ಯಾಂಡಿನಲ್ಲಿ, ತನ್ನ ತೂಕಕ್ಕಿಂತಲೂ ಭಾರವಾಗಿರುವ ಹೊರೆಗಳಡಿಯಲ್ಲಿ, ಇಡೀ ಊರೇ ಮಲಗಿದ ಮೇಲೆ ಅಂಗಡಿಗಳ ವರಾಂಡದಲ್ಲಿ-ಹೀಗೆ ಸರ್ವಾಂತರ್ಯಾಮಿಯಾಗಿದ್ದ.

ಅವನು ತಾನು ಎಷ್ಟು ಶ್ರಮಪಡಬಹುದೋ ಅಷ್ಟೂ ಶ್ರಮಪಡುತ್ತಿದ್ದ ಮತ್ತು ತಾನು ಏನು ಸಂಪಾದಿಸುತ್ತಿದ್ದನೋ ಅಷ್ಟರಲ್ಲೇ ಜೀವನ ನಡೆಸುತ್ತಿದ್ದ. ಉತ್ತಪ್ಪನಿಗೆ ಯಾರೂ ಸಂಬಂಧಿಕರು ಇರಲಿಲ್ಲ; ಆದರೆ ಆ ಯುವಕ ತನಗೆ ಕೆಲವು ಜವಾಬುದಾರಿಗಳು, ಹೊಣೆಗಾರಿಕೆಗಳು ಇವೆ ಎಂದು ಭಾವಿಸಿದ್ದ.

ಅವನ ಜೀವನದ ಅಗತ್ಯಗಳು ಕಡಿಮೆಯಿದ್ದವಾದರೂ ಅವೇ ಅವನಿಗೆ ತುಂಬಾ ಭಾರವಾಗಿ ಹೊರೆಯಾಗಿ ಕಾಣುತ್ತಿದ್ದವು. ಆದರೆ ಆ ದಿನಗಳೂ ಕಳೆದುಹೋದವು. ಅವನ ಹೊಟ್ಟೆಯ ಆರ್ತದನಿಯೇ ಅವನಿಗೆ ಜೋಗುಳವಾಗಿತ್ತು. ಅವನ ಮನಸ್ಸಿಗೆ ಕೂಡ ತನ್ನದೇ ಆದ ದೂರುಗಳಿದ್ದವು. ಆದರೆ ಬೇರೆಯವಕ್ಕಾಗಿದ್ದವು; ಮರದ ಬುಡದಲ್ಲಿ ನೆರಳಿನಲ್ಲಿ ಕುಳಿತು ಭಿಕ್ಷೆ ಬೇಡುವ ಕುರುಡನಿಗಾಗಿ ಅವನ ಅನುಭೂತಿ, ರಸ್ತೆಬದಿಯಲ್ಲಿ ಚಳಿಯಲ್ಲಿ ನಡುಗುತ್ತಾ, ಬಿಸಿಲಿನಲ್ಲಿ

ಬೆವರುತ್ತ ಮತ್ತು ಮಳೆಯಲ್ಲಿ ನೆನೆಯುತ್ತ ದಿನಗಳೆಯುವ ಮಕ್ಕಳ ಬಗ್ಗೆ ಅನುಭೂತಿ; ಟೀ ಅಂಗಡಿಗೆ ಹೋಗಿ ಸ್ವಲ್ಪ ಬಿಸಿನೀರು ಬೇಕು ಎಂದು ಮುದುಕಿ ಕೇಳಿದಾಗ ಅವಳ ತಲೆಯ ಮೇಲೆ ಕುದಿಯುವ ನೀರು ಎರಚಿದುದರ ಬಗ್ಗೆ ಅನುಭೂತಿ. ಉತ್ತಪ್ಪ ತನ್ನ ಹೊಟ್ಟೆಯ ಕೂಗಿಗೆ ಎಂದೂ ಗಮನ ನೀಡಿದವನಲ್ಲ, ತನ್ನ ಹೃದಯದ ನೋವನ್ನು ಅವನು ಅಡಗಿಸಿಟ್ಟಿದ್ದ. ಅವನ ಪರಿಸ್ಥಿತಿಯಲ್ಲಿ ಅನುಕಂಪ, ಸಹಾನುಭೂತಿ ಕೂಡ ಅವನಿಗೆ ಮಹಾಪಾತಕವಾಗಿತ್ತು. ಸಮಾಜದವರೆಲ್ಲರಿಗೂ ಸಹಾಯ ಮಾಡುವ, ನೆರವು ನೀಡುವ ಬಯಕೆ ಅವನಿಗಿತ್ತು. ಆದರೆ ಹಾಗೆ ಮಾಡಲಾಗುತ್ತಿರಲಿಲ್ಲ.

ಅವನೂ ಬೆಳೆದು ದೊಡ್ಡವನಾದ. ಅವನಿಗೆ ತಾಯಿ-ತಂದೆ ಇದ್ದಿದ್ದರೆ ಅವನು ತಮಗೆ ಬೆಂಬಲವಾಗಿದಾನೆ ಎಂಬ ಆಲೋಚನೆಯಿಂದಲೇ ಅವನ ವಿರುದ್ಧ ತಿರುಗಿಬೀಳುತ್ತಿದ್ದರು ಎನಿಸುತ್ತದೆ.

ಅವನು ತನ್ನ ಬಿಡುವಿನ ವೇಳೆಯನ್ನು ಪ್ರಾರ್ಥನೆಗಳನ್ನು ಕೇಳುವುದರಲ್ಲಿ ಮತ್ತು ಸುವಾರ್ತೆ, ಧರ್ಮಬೋಧೆಗಳನ್ನು ಕೇಳುತ್ತ ಕಳೆದುಬಿಡುತ್ತಿದ್ದ. ಕ್ರಮೇಣ ರಸ್ತೆಬದಿಯಲ್ಲಿ ಮತ್ತು ಮಾರುಕಟ್ಟೆಯಲ್ಲಿ ಸುವಾರ್ತೆಗಳನ್ನು ಬೋಧಿಸುವುದು ಮತ್ತು ಮಕ್ಕಳಿಗೆ ಕ್ರಿಸ್ತನ ಕತೆಗಳನ್ನು ಹೇಳುವುದು ಅವನ ದಿನಚರಿಯ ಭಾಗವಾಗಿ ಹೋಯಿತು. ಹೀಗೇ ಕಾಲಚಕ್ರ ಉರುಳಿತು.

ಊರಿನ ಮೂಲೆಯಲ್ಲಿ ಹೊಸದಾಗಿ ನಿರ್ಮಿಸಲಾದ ರಸ್ತೆಯಿಂದಾಗಿ ಉಂಟಾದ ತ್ರಿಕೋನಾಕಾರದ ತುಂಡುಭೂಮಿಯನ್ನು ಖರೀದಿಸಲು ಸಾಕಾಗುವಷ್ಟು ಹಣ ಸಂಪಾದಿಸಿದ್ದ. ಅವನು ನಿವೇಶನದ ಮಾಲೀಕನಾದ. ಅವನು ತನ್ನ ನಿವೇಶನದಲ್ಲಿ ಕೆಲಸ ಮಾಡಲಾರಂಭಿಸಿದ. ಕೆಲಸ ಏನು ಅಂದರೆ ಬಾವಿ ತೋಡೋದು. ಆ ನಿವೇಶನ ಅದಕ್ಕೆ ಸರಿಯಾಗಿತ್ತು...ಎಲ್ಲಿಯವರೆಗೆ ಸಾಧ್ಯವೋ ಅಲ್ಲಿಯ ತನಕ ತಾನೇ ಬಾವಿ ತೋಡಿದ. ಅಗತ್ಯ ಎನಿಸಿದಾಗ ಕೆಲಸಗಾರರನ್ನು ನೇಮಿಸಿಕೊಂಡ. ಎಂಥ ಹುಚ್ಚನಪ್ಪಾ ಎಂದರು ಕೆಲವರು. ಏನೋ ನಿಧಿ ಸಿಗುತ್ತೆ ಅಂತ ಆಸೆಯಿಂದ ಭೂಮಿ ತೋಡ್ತಿದಾನೆ ಎಂದರು ಮತ್ತೆ ಕೆಲವರು. ಆಳ ಆಳಕ್ಕೆ ತೋಡಿದಂತೆಲ್ಲ ಉತ್ತಪ್ಪನ ಉತ್ಸಾಹ ಹೆಚ್ಚುತ್ತಿತ್ತು. ಮಣ್ಣಿನ ಪದರ ಹೋಗಿ ಕಲ್ಲುಬಂಡೆ ಕಾಣತೊಡಗಿತು. ಆಮೇಲೆ ಸುಣ್ಣಕಲ್ಲು ಬೆರೆತ ಮಣ್ಣು, ಆಮೇಲೆ ತೇವದ ಮಣ್ಣು ಕಾಣತೊಡಗಿತು. ಕಟ್ಟಕಡೆಗೆ ಜಲೋದ್ಭವವಾಯಿತು! ಉತ್ತಪ್ಪನ ಮನಸ್ಸಿಗೆ ಸಮಾಧಾನವಾಯಿತು.

ಅಸಹಾಯಕ ಮನುಷ್ಯ ದೇವರನ್ನು ಪ್ರಶಂಸಿಸಿದ. ಅವನ ಜೊತೆ ಕೆಲಸ ಮಾಡಿದ ಕೂಲಿಗೆ ದಿನ ಇನಾಮಾಗಿ ನಾಲ್ಕಾಣೆ ಭಕ್ಷೀಸು. ದಿನದ ಕೆಲಸ ಮುಗಿಸಿದ ಮೇಲೆ, ನೀರನ್ನು ನೋಡುತ್ತ ಬಹಳ ಹೊತ್ತು ಕಳೆದ. ಬಾವಿಯಲ್ಲಿನ ಕಿರುದೆರೆಗಳು ಉತ್ತಪ್ಪನ ಉದಾರ ಹೃದಯದಲ್ಲಿ ಬೃಹತ್ತರಂಗಗಳನ್ನು ಸೃಷ್ಟಿಸಿದವು. ಬಾವಿ ಆಳ ಆಳವಾಗುತ್ತ ಬಂದಿತು. ತನ್ನದೇ ಹೃದಯದ ಅತ್ಯಂತ ಕೆಳಸ್ತರವನ್ನು ಕಂಡುಹಿಡಿಯಲು ಪ್ರಯತ್ನಿಸುತ್ತಿದೆಯೋ ಎನ್ನುವಂತೆ. ಮಕ್ಕಳು ದಪ್ಪದಪ್ಪ ಕಲ್ಲುಗಳನ್ನು ಬಾವಿಗೆ ಹಾಕುತ್ತಿದ್ದರು ಮತ್ತು ಅದರ ಪ್ರತಿಧ್ವನಿ ಕೇಳಿ ಆನಂದಿಸುತ್ತಿದ್ದರು. ಆ ಪೀಡೆ ರಸ್ತೆ ಅಂಚಿನಲ್ಲಿ ಬಾವಿ ತೆಗೆದಿದಾನೆ. ದನ ಬೀದಿಗೆ ಬಿಟ್ಟಾಗ, ಹಾಗೆ ಮಕ್ಕಳ ಮೇಲೂ ಒಂದು ಕಣ್ಣಿಡಿ. ಅವು ಬಾವಿಗೆ ಬಿದ್ದುಬಿಟ್ಟಾವು ಎಂದು ಪಕ್ಕದ ಮನೆ ಮುದುಕಿಯೊಬ್ಬಳು ಗೊಣಗಿದಳು.

ಬಾವಿ ತನ್ನ ತಳ ತಲುಪಿದಂತೆ ಉತ್ತಪ್ಪನ ಹೃದಯದ ಅಂತರಾಳವನ್ನು ತಲುಪಿತು. ಈಗ ಬಾವಿ ಒಳಭಾಗದಲ್ಲಿ ಲೈನಿಂಗ್ ಕೆಲಸಕ್ಕೆ, ಬಾವಿ ತೋಡುವುದಕ್ಕಿಂತ ಕಠಿಣ ಪರಿಶ್ರಮ ಮತ್ತು ಹೆಚ್ಚಿನ ಸಮಯದ ಕೆಲಸ ಅಗತ್ಯವಾಯಿತು. ಆತ ಮೂವತ್ತು ದಿವಸಗಳ ಕೆಲಸದಿಂದ ಏನು ಉಳಿಸಿದ್ದನೋ ಅದರಲ್ಲಿ ಮೂರು ದಿನಗಳ ಲೈನಿಂಗ್ ಕೆಲಸವನ್ನು ಮಾತ್ರ ಪೂರೈಸಬಹುದಾಯಿತು. ಈ ರೀತಿಯಲ್ಲಿ ಬಾವಿಯಲ್ಲಿ ಐದಾರು ಸುತ್ತುವರಿಗಳು ಮತ್ತು ಮೇಲೆ ಎರಡು ಕಲ್ಲುಕಂಬಗಳನ್ನು ಇಟ್ಟು, ಅದರ ಮೇಲೆ ಅಡ್ಡಡ್ಡಲಾಗಿ ಕಲ್ಲಿನ ತೊಲೆ ಇಡಲಾಯಿತು. ಅದರ ಮೇಲೆ ಎರಡೂ ಕಡೆಗಳಲ್ಲಿ ಬನ್ನಿ ಇಲ್ಲಿ, ನೀವು ಇಲ್ಲಿ ವಿರಮಿಸಬಹುದು. ಎಂದು ಬರೆದ ಶಿಲುಬೆಯಾಕಾರಾದ ಕಲ್ಲಿಟ್ಟ. ಅದಕ್ಕೊಂದು ರಾಟೆ ಹಾಕಿದ, ಹಗ್ಗ ಮತ್ತು ಬಕೆಟ್ ಇಟ್ಟ. ತನಗೆ ತನ್ನದೇ ಆದ ಕುಟುಂಬವಿಲ್ಲದೆ ಇಷ್ಟೆಲ್ಲ ಮಾಡಿದ ಮನುಷ್ಯನಿಗೆ ಪ್ರಾಯಕ್ಕೆ ಬಂದ ಮಗಳ ಮದುವೆಯಲ್ಲಿ ಮಾಂಗಲ್ಯಧಾರಣೆಯಾದಾಗ ಆಗುವಷ್ಟೇ ಸಮಾಧಾನ, ತೃಪ್ತಿ ಉಂಟಾಗಿತ್ತು.

ಅವನ ಮೂರ್ಖತನದ ಬಗ್ಗೆ ಅನುಕಂಪ ವ್ಯಕ್ತಪಡಿಸುತ್ತ ಅಲ್ಲಿ ಒಂದು ಗುಡಿಸಲು ಕಟ್ಟಿ ಬಾಳೆಹಣ್ಣು ಪೂಟ್ಟು ಮಾರಿದ್ದರೆ ಅವನ ಜೀವನ ಸಾಗುತ್ತಿತ್ತು. ಎಂದರು ಕೆಲವರು.

ಮತ್ತೊಬ್ಬ ಸ್ವಲ್ಪ ಈರ್ಷ್ಯೆಯಿಂದಲೇ ಬಾವಿ ಮೇಲೆ 'ಉತ್ತಪ್ಪನಿಗೆ ಸೇರಿದ್ದು' ಎಂದು ಬರೆದುಕೊಂಡಿದ್ದರೆ ಅವನ ಕೀರ್ತಿ ಮತ್ತಷ್ಟು ಹೆಚ್ಚುತ್ತಿತ್ತು. ಎಂದ.

ಅವನೇ ನಿರ್ಗತಿಕನಾಗಿರೋದರಿಂದ ಅವನು ಬೀಳೋದಕ್ಕೆ ಬಾವಿ ಹುಡುಕಬೇಕಾಗಿಲ್ಲ ಎಂದು ಯಾರೋ ಅಪಹಾಸ್ಯ ಮಾಡಿದ್ದೂ ಉಂಟು.

ಆದರೆ ಅವನ ಕೆಲಸದ ಬಗ್ಗೆ ಗೌರವ ವ್ಯಕ್ತಪಡಿಸಿದವರೂ ಉಂಟು. ಬಾವಿಯ ಎರಡೂ ಕಡೆಗಳಿಂದ ನೀರು ಸೇದಿಕೊಳ್ಳೋದಕ್ಕಾಗಿ ಎರಡು ತೊಲೆಗಳು ಇದ್ದಿದ್ದರೆ ಚೆನ್ನಾಗಿರುತ್ತಿತ್ತು. ಇಲ್ಲಿ ಒಂದು ಕಲ್ಲಿನ ತೊಟ್ಟೀನೂ ನಾನು ಮಾಡಬೇಕು. ಜಾನುವಾರುಗಳೂ ನೀರು ಕುಡಿಯಲಿ. ಬಾವಿಯ ಮೇಲೆ ಒಂದು ಚಾವಣಿ ಕಟ್ಟಿಬಿಟ್ಟರೆ ಜನ ಮಳೆಯಲ್ಲಿ ಒದ್ದೆಯಾಗ್ದೇ ನೀರು ಸೇದಿಕೋಬಹುದು. ಎಂದು ಉತ್ತಪ್ಪನ್ ಸಾಮಾನ್ಯವಾಗಿ ಹೇಳುತ್ತಲೇ ಇದ್ದ.

ತಾವು ಬಾವಿ ತೋಡಿಕೊಳ್ಳಲಾಗದಿದ್ದ ನೆರೆಹೊರೆಯವರು ಈ ಸಾರ್ವಜನಿಕ ಬಾವಿಯಿಂದ ನೀರು ಸೇದಿಕೊಳ್ಳುತ್ತಿದ್ದರು. ಅನೇಕರು ಬಾವಿಯ ಬಳಿಯೇ ಸ್ನಾನ ಮಾಡಲಾರಂಭಿಸಿದರು. ಮಕ್ಕಳು ಬಾವಿಗೆ ಕಲ್ಲು-ಕಸ-ಕಡ್ಡಿ ಹಾಕಿ ಸಂತೋಷಪಡ್ತಾ ಇದ್ದರು. ದುರಾಶಾ ಪಾತಕನೊಬ್ಬ ಬಕೆಟ್ಟನ್ನೇ ಕದ್ದುಕೊಂಡು ಹೊರಟುಹೋದ; ಇನ್ನೊಬ್ಬ ರಾಟೇನೇ ತೆಗೆದುಕೊಂಡು ಹೊರಟುಹೋದ. ಅವರಿಗ್ಯಾರಿಗೂ ಉತ್ತಪ್ಪನ್ ಶ್ರಮ, ದುಡಿಮೆ ನೆನಪೇ ಇರಲಿಲ್ಲ. ಆ ಬಡಪಾಯಿ ಕಳೆದು ಹೋದ ವಸ್ತುಗಳನ್ನು ಮತ್ತೆ ತಂದ; ಅದು ಹಾಗೆ ಪುನರಾವರ್ತನೆಯಾಗದ ಹಾಗೆ ನೋಡಿಕೊಂಡ ಉತ್ತಪ್ಪನ್ ದಿನಕ್ಕೆ ಎರಡು ಸಲ ಬಾವಿ ಬಳಿ ಹೋಗಿ ಅದರ ಸುತ್ತಮುತ್ತ ಕ್ಲೀನ್ ಮಾಡಿ ಬರುತ್ತಿದ್ದ. ಅವನು ನೀರು ಸೇದಿ, ಬಾನಿ ತುಂಬಿ, ತಾನೂ ಸ್ವಲ್ಪ ನೀರು ಕುಡಿದು ಬರುತ್ತಿದ್ದ. ಬಾವಿಯ ಹತ್ತಿರ ಬರುತ್ತಿದ್ದವರನ್ನೆಲ್ಲ ಬಾವೀನಾ, ಪರಿಸರನಾ ಗಲೀಜು ಮಾಡಬೇಡಿರೆಂದು ಪ್ರಾರ್ಥಿಸುತ್ತಿದ್ದ. ಯಾರಾದರೂ ನೀರು ಸೇದಿ, ಅದನ್ನು ಕುಡಿದುದನ್ನು ನೋಡಿದಾಗ ಅವನಿಗೆ ಪರಮಾನಂದವಾಗುತ್ತಿತ್ತು-ಅದು ಅವನ ಸುದೀರ್ಘ ಶ್ರಮದ ಫಲ!

ಊರು ಬೆಳೆಯಿತು. ಜನಸಂಖ್ಯೆ ಹೆಚ್ಚಿತು. ಪಟ್ಟಣದ ಕಲ್ಯಾಣವನ್ನು ಗಮನಿಸುವ ವಿಷಯದಲ್ಲಿ ಮತ್ತು ಜನರ ಸ್ವಾತಂತ್ರ್ಯವನ್ನು ನಿರ್ಬಂಧಿಸುವಲ್ಲಿ, ನಿಯಂತ್ರಿಸುವಲ್ಲಿ ಪುರಸಭೆ ಜಾಗೃತವಾಗಿತ್ತು. ಕಲುಷಿತ ನೀರು ಸರಬರಾಜು ತಪ್ಪಿಸಲು ಮತ್ತು ಶುದ್ಧ ನೀರು ಸರಬರಾಜು ಮಾಡಲು ಅದು ಕಾರ್ಯಯೋಜನೆಗಳನ್ನು ಹಾಕಿಕೊಂಡಿತು.

ನೀರಿನ ಪೈಪುಗಳನ್ನು ಹಾಕಲು ನೆಲ ಅಗೆಯುತ್ತಿದ್ದ ಕೆಲಸಗಾರರು ಉತ್ತಪ್ಪನ್ ಬಾವಿಕಟ್ಟೆ ಸುತ್ತ ಕಟ್ಟೆಯ ಒಂದು ಭಾಗವನ್ನು ಕಿತ್ತುಹಾಕಿಬಿಟ್ಟರು. ಅದು ಅವನ ಮನಸ್ಸಿಗೆ ನೋವುಂಟು ಮಾಡಿತ್ತು. ಆ ಕಿತ್ತುಹಾಕಿದ್ದ ಭಾಗವನ್ನು ಮರುದಿನ ಸರಿಪಡಿಸುವವರೆವಿಗೆ ಅವನು ಚರ್ಚಿಗೂ ಹೋಗಲಿಲ್ಲ. ನೀರಿನ ಪೈಪು ಕೊಳವೆಗಳು ಕೆಲಸ ಮಾಡಲಾರಂಭಿಸಿದವು.

ತೆರೆದ ಎಲ್ಲ ಜಲಮೂಲಗಳನ್ನು ಮೂವತ್ತು ದಿನಗಳ ಒಳಗೆ ಮುಚ್ಚಬೇಕೆಂದೂ ಹಾಗೆ ಮಾಡಲಾಗದಿದ್ದಲ್ಲಿ ಪುರಸಭೆಯು ಆ ಕೆಲಸವನ್ನು ಮಾಡಿ ಖರ್ಚನ್ನು ಆ ಜಲಮೂಲ ಮಾಲೀಕರಿಂದ ವಸೂಲಿ ಮಾಡುವುದೆಂದೂ ತಮಟೆ ಹೊಡೆದು ಊರಲ್ಲೆಲ್ಲ ಪ್ರಸಾರ ಮಾಡಲಾಯಿತು.

ಉತ್ತಪ್ಪನ್ ಬಾವಿಯನ್ನೂ ಮುಚ್ಚಬೇಕಾಗಿತ್ತು. ಆತ ಅಧಿಕಾರಿಗಳಲ್ಲಿ ಹೋಗಿ ಮನವಿ ಸಲ್ಲಿಸಿದ. ಆದರೆ ಅವನಿಗೆ ನಿರಾಶೆ ಕಾದಿತ್ತು. ಹಳೆಯ ಆಲೋಚನೆಗಳ ಆ ಮನುಷ್ಯ ನೂತನ ಆಲೋಚನೆಗಳನ್ನು ಶಪಿಸಿದ. ಅವನು ಸ್ವಲ್ಪ ಕಾಲಾವಕಾಶ ಕೋರಿದ. ಆದರೆ ಅದರಿಂದೇನೂ ಪ್ರಯೋಜನವಾಗಲಿಲ್ಲ. ಆ ಮುದುಕ ಪುರಸಭೆಯ ಬಗ್ಗೆ ಕೋಪದಿಂದ ಹಲ್ಲು ಹಲ್ಲು ಕಡಿದ. ಸರ್ಕಾರಕ್ಕೆ ಮನವಿ ಸಲ್ಲಿಸಿದ. ಆದರೆ ನ್ಯಾಯ, ಧರ್ಮಬದ್ಧ ಸರ್ಕಾರ ಅವನ ಮನವಿಯಲ್ಲಿ ಯಾವುದೇ ನ್ಯಾಯವನ್ನು ಕಾಣಲಿಲ್ಲ. ಏನೇ ಆಗಲಿ, ತಾನು ಬಾವಿಯನ್ನು ಮುಚ್ಚುವುದಿಲ್ಲ ಎಂದು ಆ ವೃದ್ಧ ತೀರ್ಮಾನಿಸಿದ.

ಅಯ್ಯೋ ಉತ್ತಪ್ಪನ್‌ಗೆ ಹುಚ್ಚು ಹಿಡಿದುಬಿಟ್ಟಿದೆ ಎಂದರು ಕೆಲವರು. ಅವನನ್ನು ನೋಡಿದ್ರೆ ಹಾಗೇ ಅನ್ನಿಸುತ್ತೆ. ಒಬ್ಬ ಯುವಕನಂತೂ, ಅವನ ಕೊನೆ ಆ ಬಾವೀಲೇ ಅಂತ ಕಾಣುತ್ತೆ ಎಂದ. ಆ ಮುದುಕನ ಕಷ್ಟಕೋಟಲೆಗಳ ಬಗ್ಗೆ ಹೆಚ್ಚಿನವರು ಗಮನ ಹರಿಸಲೇ ಇಲ್ಲ. ಕೊಳಾಯಿ ನೀರು ಬರಲಾರಂಭಿಸಿದ ತಕ್ಷಣ ಬಾವಿಯನ್ನು ಎಲ್ಲರೂ ಮರೆತೇಬಿಟ್ಟರು. ಆದರೆ ಅದನ್ನು ಇನ್ನೂ ಮರೆಯದವರೂ ಕೆಲವರಿದ್ದರು–ಅವರೇ ಆ ಬಾವಿಗೆ ಕಲ್ಲೆಸೆದು ಆಟವಾಡುತ್ತಿದ್ದ ಮಕ್ಕಳು.

ಊರಿನಲ್ಲಿದ್ದ ಕೊಳಗಳು, ಬಾವಿಗಳು ಕಣ್ಮರೆಯಾಗಲಾರಂಭಿಸಿದವು. ಉತ್ತಪ್ಪನ್‌ನ ಗುಳಿಬಿದ್ದ ಕಣ್ಣುಗಳು ಅವುಗಳ ಸ್ಥಾನವನ್ನಾಕ್ರಮಿಸಿದವು. ಸ್ನೇಹಿತರು ಅವನನ್ನು ಸಮಾಧಾನಪಡಿಸಲೆತ್ನಿಸಿದರು ಮತ್ತು ಕೊಳಾಯಿ ನೀರು ಸರಬರಾಜಾಗುತ್ತಿರುವಾಗ ಬಾವಿಗಳ ಅಗತ್ಯವಿಲ್ಲ. ಉಪಯೋಗಿಸದೆ ಇರುವ ಬಾವಿ ಸೊಳ್ಳೆಗಳ ತಾಣವಾಗುತ್ತದೆ ಮತ್ತು ಸಾರ್ವಜನಿಕರ ಆರೋಗ್ಯಕ್ಕೆ ಹಾನಿಕರವಾಗುತ್ತದೆ ಎಂದು ಹೇಳುತ್ತ ಬಾವಿ ಮುಚ್ಚಿಸಲು ಅವನ ಮನ ಒಲಿಸುವ ಪ್ರಯತ್ನವನ್ನೂ ಮಾಡುತ್ತಿದ್ದರು. ಆ ಮುದುಕನ ಭರವಸೆಯ ಕೊನೆಯ ಕೊಂಡಿ ಕೂಡ ಕಳಚಿಕೊಂಡಿತು. ತನ್ನವರೇ ತನ್ನ ಶತ್ರುಗಳಾದರಲ್ಲ ಎಂದು ಆಲೋಚಿಸಲು ಅವನಿಗೆ ದುಃಖವೂ ಆಯಿತು.


ಅವನ ಹೃದಯ ಕುದಿಯಿತು, ಕರಗಿತು. ಕಣ್ಣುಗಳಿಂದ ಕಣ್ಣೀರು ಹರಿಯಲಾರಂಭಿಸಿತು.

ಅವನ ಎದೆಯನ್ನು ಮುಚ್ಚಿದ ಬಿಳಿಯಗಡ್ಡದ ಮೇಲೆ ತೊಟ್ಟಿಕ್ಕಲಾರಂಭಿಸಿತು. ಬಾವಿ ಮುಚ್ಚಲು ನೀಡಲಾಗಿದ್ದ ಗಡುವಿನ ದಿನ ಕಳೆದು ರಾತ್ರಿಯಾಯಿತು. ಎಲ್ಲೆಡೆ ನೀರವ ಮೌನ. ಇಡೀ ಊರು ವಿಶ್ರಾಂತಿಯನ್ನು ಬಯಸುತ್ತಿತ್ತು. ಅಕ್ಷುಬ್ಧ ಹೃದಯಿಗಳಿಗೆ ನಿದ್ರಾದೇವಿ ಒಲಿದಿದ್ದಳು.

ಉತ್ತಪ್ಪನ್ ಬಾವಿಯತ್ತ ಹೊರಟ. ಇಡೀ ಸ್ಥಳದ ಕಸಗುಡಿಸಿ, ಸ್ವಚ್ಛಗೊಳಿಸಿದ. ಅನೇಕ ಸಲ ಬಾವಿಯನ್ನು ಸುತ್ತು ಹಾಕಿದ. ತಾನು ಉಯ್ಯಾಲೆಯಲ್ಲಿ ಕುಳಿತಿರುವಂತೆ ಇತ್ತಿಂದತ್ತ, ಅತ್ತಿಂದಿತ್ತ ಠಳಾಯಿಸಿದ. ಅವನ ಮನಸ್ಸು ಸೂಚಿಸಿದಂತೆ ಸಾಗುತ್ತಿದ್ದ. ಆ ರೀತಿ ಎಷ್ಟು ಸಮಯ ಕಳೆಯಿತು ಎಂಬುದೇ ಅವನಿಗೆ ಗೊತ್ತಿರಲಿಲ್ಲ. ಜನರ ಅನುಕೂಲ ಸೌಕರ್ಯಗಳಿಗಾಗಿ ತನ್ನ ಶ್ರಮದ ಫಲ... ಅನೇಕ ಜೀವಿಗಳನ್ನು ಸಂತೃಪ್ತಪಡಿಸಿದ ಅಮೃತಕಲಶ... ಮೋಕ್ಷಕ್ಕೆ ಮಾರ್ಗವೆಂದು ತಾನು ಪರಿಗಣಿಸಿದ್ದ ಪವಿತ್ರ ವಸ್ತು ಆ ಬಾವಿಯನ್ನು ತೋಡಿದಂಥ ಕೈಗಳಿಂದಲೇ ಮುಚ್ಚಬೇಕಾದುದು ಮತ್ತು ಅದಾದ ಮೇಲೂ ಜೀವಿಸುತ್ತಿರಬೇಕಾದುದು, ಅದೂ ಒಳ್ಳೆಯತನಕ್ಕೆ ಅಡ್ಡಿಯಾಗುತ್ತಿರುವ ಕಾಲದಲ್ಲಿ! ಉಪಕಾರ ಸ್ಮರಣೆಯೇ ಇಲ್ಲದಿರುವಂಥವರ ನಡುವೆ! ಆ ಮುದುಕನ ಕಣ್ಣುಗಳು ನೀರಿನಿಂದ ತುಂಬಿಕೊಂಡವು.

ಅವನ ಯೋಚನೆಯ ಲಹರಿ ನಿಂತಾಗ ಆ ದುರ್ಬಲ ಮನುಷ್ಯನ ಕಾಲುಗಳೂ ಚಲಿಸುವುದು ನಿಂತವು. ಬಾವಿಕಟ್ಟೆಗೆ ಒರಗಿಕೊಂಡು ನಿಂತ. ಬಾವಿಕಟ್ಟೆಯ ಮೇಲೆ ಹತ್ತಿದ. ಸ್ವರ್ಗದಿಂದ ಚಂದ್ರ ಪ್ರಶ್ನಾರ್ಥಕ ಚಿಹ್ನೆಯಂತೆ ಗೋಚರವಾದ. ಬಿರಿಯುತ್ತಿದ್ದ ತನ್ನ ಎದೆಯನ್ನು ಶಿಲುಬೆಯಾಕಾರದ ಚಿಹ್ನೆಯ ಹತ್ತಿರಕ್ಕೆ ತೆಗೆದುಕೊಂಡು ಹೋದ. ಹಾಗೆಯೇ ನಿಂತ. ಎಷ್ಟು ಹೊತ್ತು ನಿಂತ! ಅವನು ಪ್ರಾರ್ಥನೆ ಮಾಡುತ್ತಿದ್ದನೇ? ಅವನ ಕತ್ತಿಗೆ ಅವನ ತಲೆಯ ಭಾರವನ್ನು ಹೊರುವ ಶಕ್ತಿಯಿರಲಿಲ್ಲ. ಅವನ ಕಣ್ಣುಗಳಿಂದ ಒಂದೇ ಒಂದು ತೊಟ್ಟು ಕಣ್ಣೀರೂ ಬರಲಿಲ್ಲ. ಅವನ ಗಂಟಲು ಒಣಗಿತ್ತು. ಅವನ ಹೃದಯ ನಗಾರಿಯಂತೆ ಬಡಿದುಕೊಳ್ಳುತ್ತಿತ್ತು. ಚರ್ಚಿನ ಗಂಟೆ ಒಂದೇ ಸಮನೆ ನಿಧಾನವಾಗಿ ಬಾರಿಸಲಾರಂಭಿಸಿತು. ಅದನ್ನು ಅವನು ಕೇಳಿದನೇ ಇಲ್ಲವೇ ಎಂಬುದು ತಿಳಿಯದು. ಆ ದಾನಿಯನ್ನು ಬನ್ನಿ ಇಲ್ಲಿ, ಇಲ್ಲಿ ನೀವು ವಿರಮಿಸಬಹುದು ಎಂದು ಯಾರಾದರೂ ಆಹ್ವಾನಿಸಿದರೇ? ಪರಿಶುದ್ಧವಾದ ನೀರು ತನ್ನ ವಕ್ಷಸ್ಥಲಕ್ಕೆ ಒತ್ತಿತು. ಆ ಬಾವಿ ತನ್ನನ್ನು ಸೃಷ್ಟಿಸಿದವನ ಮೇಲೇ ನೀರೆರೆಯಿತು. ಅವನು ತನ್ನದೇ ಆದ ಬಾವಿಯಿಂದ ಕಟ್ಟಕಡೆಯ ಬಾರಿಗೆ ನೀರು ಕುಡಿದ. ಪಕ್ಕದ ಮನೆಯ ನಾಯಿಯೊಂದು ವಿಲಾಪಿಸಿತು. ಚಂದ್ರನ ಮುಖ ಕಳೆಗುಂದಿತು. ಆ ಬಾವಿಯು ಉತ್ತಪ್ಪನ ರಹಸ್ಯವನ್ನು ನಿಷ್ಠೆಯಿಂದ ಅಡಗಿಸಿಟ್ಟಿತು.

ಕೃಪೆ: ಇಂಡಿಯನ್ ಲಿಟರೇಚರ್ ೨೭-೩-೧೯೮೪,Best of Indian literature, pp 140-43



ಬೇಂದ್ರೆ ಅವರ ಕಾವ್ಯ ಹಲವು ತಲೆಮಾರಿನ ಓದುಗರನ್ನು ವಿಮರ್ಶಕರನ್ನು ನಿರಂತರ ತೊಡಗಿಸಿಕೊಂಡಿದೆ. ಹಲವು ಬಗೆಯಲ್ಲಿ ನೋಡಿದಷ್ಟೂ ಹೊಸತಾಗಿ ಕಾಣುವ ಶಕ್ತಿ ಅವರ ಕಾವ್ಯಕ್ಕಿದೆ. 'ಸಂಚಯ'ದ ಈ ಬೇಂದ್ರೆ ಓದಿನ ಗುಚ್ಛದಲ್ಲಿ ಕುಸುಮಾಕರ ದೇವರಗೆಣ್ಣೂರರು ಬೇಂದ್ರೆಯವರ ಎರಡು ಪದ್ಯಗಳನ್ನು ಕುರಿತು ನಡೆಸಿದ ವಿಶ್ಲೇಷಣೆ, ಮಾತಿನಿಂದ ಬರಹ ರೂಪದಲ್ಲಿ ಇಲ್ಲಿ ಮೂಡಿದೆ. ಜೊತೆಗೆ ಬೇಂದ್ರೆ ಕಾವ್ಯವನ್ನು ಕುರಿತು ಯೋಗಶಾಸ್ತ್ರ ದೃಷ್ಟಿಯಿಂದ ಅಮೇರಿಕೆಯಲ್ಲಿ ನೆಲೆಸಿರುವ ವಿಶ್ವನಾಥ ಎಂಬ ನಿವೃತ್ತ ಇಂಜಿನಿಯರ್ ಬೇಂದ್ರೆಯ ಜನಪ್ರಿಯ ಕವಿತೆ 'ಅನಂತ ಪ್ರಣಯ' ಕುರಿತ ತಮ್ಮದೇ ವಿಶಿಷ್ಟ ದೃಷ್ಟಿಯ ವಿಶ್ಲೇಷಣೆ ಮಂಡಿಸಿದ್ದಾರೆ. ಅದು ಈ ತನಕದ ಜಾಡಿನಿಂದ ಭಿನ್ನವಾದದ್ದು. ಇವೆರಡರ ಜೊತೆಗೆ ಬೇಂದ್ರೆ ಅವರ ಮರಾಠಿ ಲೇಖನವೊಂದನ್ನು ಕವಿ ಆನಂದ ಝುಂಜರವಾಡರು ಕನ್ನಡಕ್ಕೆ ತಂದಿದ್ದಾರೆ. 'ಕವಿದಿನ'ಕ್ಕೆ ಬೇಂದ್ರೆಯ ಓದಿನ ರಸಗವಳ ಇಲ್ಲಿದೆ.

ಅಂತಃಸ್ಫುರಣದಿಂದ ಬಂದ ಕವಿತೆಗಳು

■ ಕುಸುಮಾಕರ ದೇವರಗೆಣ್ಣೂರ

ಜೂನ್ ೧೯೧೪ರಲ್ಲಿ ಯುಂಗನಿಗೆ ಒಂದು ಕನಸು ಬಿತ್ತು. ಅದೊಂದು ಭಯಾನಕ ಕನಸಾಗಿತ್ತು. ಪ್ರಲಯಕಾಲದ ಶೀತಲ ಬಿರುಗಾಳಿ ರುದ್ರತಾಂಡವ ನಾಟ್ಯವಾಡಿತು. ಸಸ್ಯ, ಗಿಡ, ಮರ, ಪಶು, ಪಕ್ಷಿ, ಪ್ರಾಣಿ, ಮಾನವ ಎಲ್ಲ ನಷ್ಟವಾಗಿ ಹೋಯಿತು. ಎಲ್ಲಿ ನೋಡಿದಲ್ಲಿ ಹಿಮಪಾತವಾಯಿತು. ಸಮಗ್ರ ಯುರೋಪ ಖಂಡ ನಷ್ಟವಾಯಿತು. ಅವನಿಗೆ ಎಚ್ಚರಾಯಿತು. ಅವನಿಗೆ ಆ ಸ್ವಪ್ನದ ಅರ್ಥ ಆಗಲಿಲ್ಲ. ಆದರೆ ಮುಂದೆ ಎರಡೇ ಎರಡು ದಿನಗಳಲ್ಲಿ ಆ ಸ್ವಪ್ನ ಸತ್ಯವಾಯಿತು. ಯುರೋಪದಲ್ಲಿ ಮೊದಲನೆ ಮಹಾಯುದ್ಧ ಪ್ರಾರಂಭವಾಯಿತು.

ಈ ಸ್ವಪ್ನವನ್ನು ಕುರಿತು ಹೇಳುವ ಉದ್ದೇಶವಿಷ್ಟೆ : ಯುರೋಪದಲ್ಲಿ ಆ ಕಾಲದಲ್ಲಿ ಇಂತಹ ಕನಸನ್ನು ಒಬ್ಬನೇ ಕಾಣಲಿಲ್ಲ. ಹಲವಾರು ರೀತಿಗಳಲ್ಲಿ ಅಸಂಖ್ಯ ಜನರು ಹಳ್ಳಿಗಳಲ್ಲಿ, ನಗರದಲ್ಲಿ ಬಡವರು, ಬಲ್ಲಿದರು, ಸುಶಿಕ್ಷಿತರು, ಅಶಿಕ್ಷಿತರು, ಅಸಂಸ್ಕೃತರು ಹಲವರು ಇಂತಹ ನೈಟ್‌ಮೇರ್‌ಗೆ ತುತ್ತಾದರು. ಕನಸಿನ ಬಗೆ ಬೇರೆ ಬೇರೆಯಾದರೂ ಕನಸಿನ ಆಶಯ ಒಂದೇ ಆಗಿತ್ತು. ನನಗೆ ಇಲ್ಲಿ ಒಂದು ಮಾತನ್ನು ಸೂಚಿಸಬೇಕಾಗಿದೆ. ಕಾಲ, ದೇಶ, ಇವುಗಳ ಸೀಮೆಯನ್ನು ಮೀರಿ, ಭಿನ್ನ ಭಿನ್ನ ಸಂಸ್ಕೃತಿಗಳ ಗೋಡೆಗಳನ್ನು ಮೀರಿ ಮಾನವನ ತಲ್ಲಣ, ಕಳವಳ, ಸುಖ, ದುಃಖ ಎಲ್ಲವೂ ಸಮಾನವಾಗಿವೆ. ಅಲ್ಲಿ ಭಿನ್ನತೆಯಿಲ್ಲ. ಭಿನ್ನತೆ ಕೃತಕವಾಗಿದೆ. ನಿಜವಾದ ಸಾಹಿತಿಯ ಕಾರ್ಯ ಇದನ್ನು ಗುರುತಿಸುವುದು ಆಗಿದೆ. ಇದು ಅವನ ಪ್ರಯತ್ನದ ಮೂಲಕವಾಗಿ ಸಾಧ್ಯವಾಗುವುದಿಲ್ಲ. ಇಲ್ಲಿ ನನಗೆ ಒಂದು ನೆನಪಾಗುತ್ತದೆ. ಮಾನವನ ಸಮಗ್ರ ಪ್ರಜ್ಞೆಗಳನ್ನು Kenneth Walker spectrumಗೆ ಹೋಲಿಸುತ್ತಾನೆ. ಅದರಲ್ಲಿ infrared ಮತ್ತು ultraviolet ಕಿರಣಗಳು.

Infrared ಕಿರಣಗಳಿಗೆ ಕಣ್ಣಿಗೆ ಕಾಣುವುದು ಸಾಮಾನ್ಯ ಪ್ರಜ್ಞೆ. ಅದರ ಕೆಲಸ ಸೀಮಿತವಾದುದು. ದಿನದಿನದ ಎಲ್ಲ ಚಟುವಟಿಕೆಗಳು ಅದರ ವಲಯದಲ್ಲಿ ಬರುತ್ತವೆ. ಇದಕ್ಕಿಂತ ಆಳವಾದ, ಇನ್ನೂ ಆಳವಾದ ಪ್ರಜ್ಞೆಯಿದೆ. ಆ ಪ್ರಜ್ಞೆಯನ್ನು ultraviolet ಕಿರಣಗಳು ಎಂದು ಕರೆಯಬಹುದು. ಕವಿಯ ದರ್ಶನ ಪ್ರೇಷಿತ, ಅನಿಮಿತ್ತ, ಸಹಜ ಇನ್‌ಸ್ಟೆಟ್ ಉದ್ಭವಿಸುತ್ತವೆ. ಈ ನೆಲೆಯಿಂದ ಹುಟ್ಟಿ ಬರುವ ಕಲಾಕೃತಿಗಳ ಸಂಖ್ಯೆ ತುಂಬ ವಿರಳವಾಗಿದೆ. ಬೇಂದ್ರೆಯವರ ಇಂತಹ ಕೆಲವು ಕವಿತೆಗಳನ್ನು ಕುರಿತು ಹೇಳಬೇಕು ಎಂಬ ಉದ್ದೇಶದಿಂದ ಪೀಠಿಕೆಯಾಗಿ ಇದನ್ನು ಹೇಳಿದ್ದೇನೆ.

ಬೇಂದ್ರೆ, ಅಂಬಿಕಾತನಯದತ್ತ, ಬೇಂದ್ರೆಮಾಸ್ತರ, ಪ್ರೊಫೆಸರ್ ಬೇಂದ್ರೆ ಹೀಗೆ ನಾಲ್ವರು ಬೇಂದ್ರೆಗಳನ್ನು ಹೇಳುತ್ತಿದ್ದರು. ಅಂಬಿಕಾತನಯದತ್ತ ಕವಿ, ಬೇಂದ್ರೆ ಮಾಸ್ತರ ಲಿಪಿಕಾರ-ಅಂಬಿಕಾತನಯದತ್ತ ಹೇಳಿದ್ದನ್ನು ಬರೆದುಕೊಳ್ಳುತ್ತಿದ್ದರು. ಇಂತಹ ಅನುಭವ ಬೇಂದ್ರೆಯವರಿಗೆ ವಿಶಿಷ್ಟವಾದುದು ಎಂದು ಭಾವಿಸುವ ಕಾರಣವಿಲ್ಲ. ಇದನ್ನು ಹಲವರು, ಬೇಂದ್ರೆಯವರದು ಛಿದ್ರ ವ್ಯಕ್ತಿತ್ವ ಎಂದು ಭಾವಿಸಿದರು. ಮತ್ತೆ ಕೆಲವರು ಸಹೃದಯರನ್ನು ಮೋಸಗೊಳಿಸಲು ಬೇಂದ್ರೆ ಮಾಡಿದ ಮಾಟ ಎಂದು ಭಾವಿಸಿದರು. ಈ ಪ್ರಬಂಧದಲ್ಲಿ ಬೇರೆ ಬೇರೆ ಅಭಿಪ್ರಾಯಗಳನ್ನು ಹೇಳಿ ಅವುಗಳನ್ನು ಖಂಡಿಸುವ ಇಲ್ಲವೆ ಸಮರ್ಥಿಸುವ ಉದ್ದೇಶ ಇಲ್ಲ. ಮೇಲಿನ ಮಾತನ್ನು ಪುಷ್ಟೀಕರಿಸುವುದಕ್ಕಾಗಿ ಈ ವಿಷಯವನ್ನು ಹೇಳಿದ್ದೇನೆ.

ನಾನು ಪ್ರಾಧ್ಯಾಪಕನಾಗಿದ್ದು ಬಹಳ ವರ್ಷಗಳವರೆಗೆ ಕಾವ್ಯ ಮೀಮಾಂಸೆ ಕಲಿಸಿ ಕಾವ್ಯವನ್ನು ಪಾಠ ಮಾಡಿದ್ದರೂ ಸಮೀಕ್ಷೆಯ ಪ್ರಾಂತದಲ್ಲಿ ಕಾಲಿರಿಸಲು ಧೈರ್ಯ ಮಾಡಿಲ್ಲ. ಆ ವಿಷಯವನ್ನು ಕುರಿತು ಇಲ್ಲಿ ಹೇಳುತ್ತಿದ್ದೇನೆ. ಅಧ್ಯಾತ್ಮದಲ್ಲಿಯೂ ತತ್ತ್ವಜ್ಞಾನದಲ್ಲಿಯೂ ಕಲಾಕೃತಿಗಳ ಮೀಮಾಂಸೆಗಳಲ್ಲಿ ಎರಡು ಬಗೆಯ ಪ್ರವೃತ್ತಿಗಳಿವೆ ಎಂದು ಹೇಳಬಹುದು. ಸಹೃದಯ ಎಚ್ಚೆತ್ತು ಕಲಾಕೃತಿಯನ್ನು ತನ್ನ ಅಂಗೈಯಲ್ಲಿಟ್ಟುಕೊಂಡು ಪರೀಕ್ಷಿಸತೊಡಗುತ್ತಾನೆ. ಆ ಕೃತಿ ಏನನ್ನೋ ಹೇಳಲಿದೆ. ಸಹೃದಯ ಅದನ್ನು ಕೇಳದೇ ಅದು ಹೇಳುವುದನ್ನು ಪರೀಕ್ಷಿಸಲು ತೊಡಗಿದಾಗ ಸಮೀಕ್ಷಕನಾಗುತ್ತಾನೆ. ಇಲ್ಲಿ ಒಂದು ಬಗೆಯ ಇನ್‌ವಾಲ್ವ್‌ಮೆಂಟ್ ಇದೆ.

Ultraviolet ಪ್ರಜ್ಞೆಯ ಭಾಗದಿಂದ ಬರುವ ಕೃತಿಯಲ್ಲಿ ಕಲಾವಿದ ಇರುವುದಿಲ್ಲ. ಅವನು ತನ್ನದೇ ಆದ ಯಾವುದೋ ಒಂದು ವಿಚಾರವನ್ನು ಸಮರ್ಥಿಸುವುದಕ್ಕಾಗಿ, ಸ್ಪಷ್ಟಪಡಿಸುವುದಕ್ಕಾಗಿ ಕೃತಿಯನ್ನು ರಚಿಸುವುದಿಲ್ಲ. ಕೃತಿ ರಚನೆಯಲ್ಲಿ ಅವನಿಗೆ ಯಾವ ಸ್ವಾತಂತ್ರ್ಯವೂ ಇಲ್ಲ. ಯುಂಗನಿಗೆ ಆ ಕನಸು ಬಿತ್ತು. ಅದರಲ್ಲಿ ಯುಂಗನ ಮಾಟ ಏನೂ ಇರಲಿಲ್ಲ. ಕೃತಿಕಾರ ಇರದೆ ಇದ್ದಾಗ ಕೃತಿಯಲ್ಲಿ ಕೃತಿಕಾರನನ್ನು ಮೀರಿದ ದರ್ಶನ ಇರುತ್ತದೆ. ಇದನ್ನು ಸ್ಪಷ್ಟಪಡಿಸಲು ರಸಲ್ ಹೇಳುವುದನ್ನು ನೋಡಬಹುದು. ಮೊಟ್ಟಮೊದಲ ಸಲ ಇದನ್ನು ಓದಿದಾಗ ನನಗೆ ಆಶ್ಚರ್ಯವಾಯಿತು. ವಾಕ್ಯವೃಂದ ಹೀಗಿದೆ. ಹೀಗೆ ಎರಡು ಬಗೆಯ ವ್ಯಕ್ತಿತ್ವಗಳು ಪ್ರತಿಯೊಬ್ಬನಲ್ಲಿಯೂ ಇವೆ. ವ್ಯಕ್ತಿತ್ವದ ಬಗ್ಗೆ ಸ್ವರೂಪ ಹೀಗಿದೆ. Distant ages and remote region of space are as real to it as what is present and hear. In thought it rises above the life of the senses keeping always what is general and open to all men. In desire and will it aims simply at the good. ಇದು ನನಗೆ ಮಾನವ ಸಂಸ್ಕೃತಿಯ ಪ್ರಾರಂಭದಿಂದ ಇಂದಿನವರೆಗಿನ ಕಥೆಯನ್ನು, ವ್ಯಥೆಯನ್ನು ಹೇಳುತ್ತದೆ ಎಂಬ ಭಾವನೆ ಉಂಟಾಯಿತು. ಹೀಗೆ

ಒಂದು ಕೃತಿ ಕೂಡ ಸಹೃದಯನಿಗೆ ಕಾಣ್ಕೆಯನ್ನು ಅನುಗ್ರಹಿಸುತ್ತದೆ. ಈ ಪ್ರತಿಮೆ ನೀಡುವ ಅನುಭವ ವ್ಯಕ್ತಿತ್ವದ ಸೀಮೆಯನ್ನು ದಾಟಿದೆ.

"During those periods when K (J.K) was not overpowered the awareness the he behaved like an ordinary human being in the sense your subject state fear, anxiety, shyness, irritability and depression. In the act of the delivering a discourse he always spoke like a man under the influence of an unseen power and words of wisdom flowed from his lips. After a discourse he has no recollection what he had just now saying. He became a human channel for the manifestation of the divine awareness."

ಇಲ್ಲಿ ನಾನು ಬೇಂದ್ರೆಯವರನ್ನು ಕೃಷ್ಣಮೂರ್ತಿಯವರ ಜೊತೆ ಹೋಲಿಸುತ್ತಿಲ್ಲ. ಅವರು ತಮ್ಮನ್ನು ಎಂದೂ ದೊಡ್ಡವರ ಜತೆಗೆ ಹೋಲಿಸಿಕೊಳ್ಳಲಿಲ್ಲ. ಈ ಎಲ್ಲ ಮಾತುಗಳನ್ನು ಹೇಳುವ ಮುಂಚೆ ನನ್ನ ಒಂದು ಗ್ರಹಿಕೆಯನ್ನು ಪುನರುಕ್ತಿಯಾದರೂ ಚಿಂತೆಯಿಲ್ಲ ಎಂದು ಹೇಳುತ್ತಿದ್ದೇನೆ. ಎಂಥ ಸಣ್ಣ ಮನುಷ್ಯನೇ ಇರಲಿ ಅವನ ಮನಸ್ಸಿನ-ಆಳದಲ್ಲಿ ಇರುವ ತುಡಿತ ಸರ್ವ ಸಾಮಾನ್ಯವಾಗಿವೆ. ಆದರೆ ಸಾಮಾನ್ಯನಿಗೂ ಅಸಾಮಾನ್ಯನಿಗೂ ಒಂದೇ ಒಂದು ವ್ಯತ್ಯಾಸವಿದೆ. ಸಾಮಾನ್ಯ ಅಸಹಾಯಕನಾಗಿ ನಿಷ್ಕ್ರಿಯನಾಗುವುದರಿಂದ ಆ ತುಡಿತಗಳನ್ನು ಮರೆಯಲು ಪ್ರಯತ್ನಿಸಿ ಮೇಲುಪದರಿನಲ್ಲಿ ಮಾತ್ರ ಬಾಳುತ್ತಾನೆ. ಅಸಾಮಾನ್ಯನು ತನ್ನ ತುಡಿತಗಳನ್ನು ಸರ್ವಸಾಮಾನ್ಯಗೊಳಿಸಿ ಪ್ರತಿಭಟಿಸಿ ನಿಲ್ಲುತ್ತಾನೆ. ಎರಡು ಉದಾಹರಣೆಗಳನ್ನು ನೋಡಬಹುದು. ಉದಾಹರಣೆಗಳನ್ನು ಕೊಡುವ ಮುಂದೆ ಯಾರ ಬಗ್ಗೆಯೂ ನನಗೆ ಅಗೌರವವಿಲ್ಲ. ಕೊಲ್ಹಾಪುರದ ಶಾಹುಮಹಾರಾಜರು ಬಡವರ ಕೈವಾರಿ ಆದದ್ದು ಹೇಗೆ? ಅವರು ಧಾರ್ಮಿಕರು. ವ್ರತನಿಷ್ಠರೂ ಆಗಿದ್ದರು. ಅವರು ಪಂಚಗಂಗೆಯಲ್ಲಿ ಪ್ರಾತಃಕಾಲದಲ್ಲಿ ಸ್ನಾನ ಮಾಡುತ್ತಿದ್ದರು. ಆಗ ಅವರ ಕುಲಪುರೋಹಿತ ಸಂಕಲ್ಪವನ್ನು ಹೇಳುತ್ತಿದ್ದ. ಎಷ್ಟೋ ದಿವಸ ಹೀಗೆ ನಡೆದ ಕ್ರಮದಲ್ಲಿ ವ್ಯತ್ಯಯ ಶುರುವಾಯಿತು. ಒಂದು ದಿನ ಮಹಾರಾಜರು ಪುರೋಹಿತನನ್ನು ಕೇಳಿದರು: ನೀನು ಸ್ನಾನ ಮಾಡಿದ್ದೀಯಾ! ಇಲ್ಲ ಏಕೆ? ಮಹಾರಾಜರು. ಪುರೋಹಿತ ಹೇಳುತ್ತಾನೆ: ನಿಮಗೆ ನಾನು ವೇದಮಂತ್ರಗಳ ಸಂಕಲ್ಪ ಹೇಳುತ್ತಿಲ್ಲ. ವೇದ ಮಂತ್ರಗಳ ಸಂಕಲ್ಪಕ್ಕೆ ಸ್ನಾನ ಅವಶ್ಯಕ. ನಾನು ಸಂಕಲ್ಪವನ್ನು ಪುರಾಣ ಮಂತ್ರಗಳಿಂದ ಹೇಳುತ್ತಿದ್ದೇನೆ. ಅದಕ್ಕೆ ಸ್ನಾನ ಅಗತ್ಯವಿಲ್ಲ. ನನಗೆ ವೇದಮಂತ್ರಗಳ ಸಂಕಲ್ಪ ಏಕೆ ಹೇಳುತ್ತಿಲ್ಲ? ಪುರೋಹಿತ ಹೇಳುತ್ತಾನೆ: ನೀವು ಕ್ಷತ್ರಿಯರಲ್ಲ ಶೂದ್ರರು. ಮಹಾರಾಜರಿಗೆ ಕೋಪ ಬಂತು. ಅಂದು ಅವರು ಪ್ರತಿಭಟಿಸಿದರು. ಪುರೋಹಿತ ಮೂರುನೂರು ಎಕರೆ ನೆಲವನ್ನು ಬಿಟ್ಟು ಹೊರಟುಹೋದ. ಮಹಾರಾಜರು ಅಂದು ಬೇರೆ ಲಕ್ಷ್ಮೀಮಂದಿರವನ್ನೇ ಕಟ್ಟಿಸಿದರು. ಅಬ್ರಾಹ್ಮಣ ಸನ್ಯಾಸಪೀಠವನ್ನು ಸ್ಥಾಪಿಸಿದರು. ಒಂದು ವೇಳೆ ಅವರಿಗೆ ಈ ಅಪಮಾನವಾಗಿರದಿದ್ದರೆ ಅವರು ಪ್ರತಿಭಟಿಸುತ್ತಿರಲಿಲ್ಲ. Eric Hoffer ತನ್ನ True Believer ಪುಸ್ತಕದಲ್ಲಿ ಜೀಸಸ್ ಕ್ರೈಸ್ಟ್ ಮೊದಲಾದ ದೇವದೂತರನ್ನು ಕುರಿತು ವಿಮರ್ಶಿಸಿದ್ದಾನೆ. ಡಾ.ಅಂಬೇಡ್ಕರರು ತಮಗಾದ ಅನುಭವದಿಂದಲೇ ಇಂತಹ ಪ್ರತಿಕ್ರಿಯೆಗೆ ಸಿದ್ಧರಾದರು. ಎರಿಕ್ಸನ್ ಹೀಗೆ ಹೇಳುತ್ತಾನೆ: ಸಾಮಾನ್ಯ ಮನುಷ್ಯ ತನಗೆ ಆದ ಅನುಭವವನ್ನು

ನುಂಗಿಕೊಳ್ಳುತ್ತಾನೆ. ಅಸಾಮಾನ್ಯನು ತನಗೆ ಆದ ಅನುಭವವನ್ನು ಸಾಮಾನ್ಯರಿಗೆ ಮನದಟ್ಟು ಮಾಡಿಕೊಟ್ಟು ನಾಯಕನಾಗಿ ಶಕ್ತನಾಗಿ ಕ್ರಾಂತಿಕಾರಿಯಾಗುತ್ತಾನೆ. ಹೀಗೆ ನಾನು ಹೇಳುವಾಗ ಅಸಾಮಾನ್ಯರ ಮೌಲ್ಯಮಾಪನವನ್ನು ಮಾಡುತ್ತಿಲ್ಲ.

ಒಂದು ಕವಿತೆಯ ಅಧ್ಯಯನ ಬಹಳಷ್ಟು ಶಬ್ದನಿಷ್ಠವಾಗಬಾರದು. ಈ ಹೇಳಿಕೆ ಅಪಾರ್ಥಕ್ಕೆ ಎಡೆಮಾಡಬಹುದು. ಶಬ್ದ ನಿಷ್ಠ ಎಂದರೆ ಏನು? ನ್ಯಾಯಶಾಸ್ತ್ರದಲ್ಲಿ ಇದನ್ನು ಶಾಖಾಚಂದ್ರ ನ್ಯಾಯವೆಂದು ಕರೆಯುತ್ತಾರೆ. ತಾಯಿ ಮಗುವಿಗೆ ರಾತ್ರಿ ಆಕಾಶವನ್ನು ತೋರಿಸಿ ಚಂದ್ರನನ್ನು ನೋಡು ಎಂದು ಹೇಳುತ್ತಾಳೆ. ಚಂದ್ರ ಎಲ್ಲಿ? ಎಂದು ಮಗು ಕೇಳಿದಾಗ ತನ್ನ ತೋರಬೆರಳನ್ನು ಚಂದನೆಡೆಗೆ ಚಾಚುತ್ತಾಳೆ. ಅಗೋ ಅಲ್ಲಿ ನೋಡು. ಮಗು ನೋಡಿದೆ ಎಂದು ಹೇಳುತ್ತದೆ. ಶಾಲೆಯಲ್ಲಿ ಹುಡುಗರನ್ನು, ಚಂದ್ರನನ್ನು ನೋಡಿದ್ದೀರಾ ಎಂದು ಕೇಳಿದಾಗ ಆ ಮಗು ಹೇಳುತ್ತದೆ ನೋಡಿದ್ದೇನೆ. ಗುರುಗಳು ಚಂದ್ರ ಹೇಗಿದ್ದಾನೆ? ಎಂದು ಕೇಳಿದರೆ ಮಗು ತನ್ನ ತೋರಬೆರಳನ್ನು ಚಾಚಿ ಚಂದ್ರ ಹೀಗಿದ್ದಾನೆ ಎಂದು ಹೇಳುತ್ತದೆ. ಶಬ್ದಗಳು ತಮ್ಮ ಆಚೆಗೆ ಇದ್ದುದನ್ನು ಸೂಚಿಸುತ್ತದೆ, ಧ್ವನಿಸುತ್ತವೆ. ಕಾವ್ಯ ಅರ್ಥವಾಗುವ ವಸ್ತುವಲ್ಲ. ಅದಕ್ಕೆ ಅರ್ಥವಿಲ್ಲ ಎಂದು ಅರ್ಥವಲ್ಲ. ಕಾವ್ಯ ಅನುಭವಕ್ಕೆ ಬರುವ ವಸ್ತು. ಒಂದು ರಾತ್ರಿ ತುಂಬದ ಮೋಳೆಗೆ ತುಟಿಯನಿಡುತಿದೆ ಪ್ರತಿಮೆ ನೆನಪಾಗಿ ಏಕೋ ೧೯೪೮ರ ಜನವರಿ ತಿಂಗಳ ಕೊನೆ ವಾರದಲ್ಲಿ ಪ್ರಾರ್ಥನಾಸಭೆಯಲ್ಲಿ ಕುಳಿತ ಗಾಂಧೀಜಿಯ ಚಿತ್ರ ಕಣ್ಣಿಗೆ ಕಟ್ಟಿತು. ದಿಲೀಪಕುಮಾರರಾಯ ಅವರಿಗೆ ಹೇಳುತ್ತಾರೆ: ಈ ದೇಶದಲ್ಲಿ ನಿಮ್ಮ ಬಯಕೆ, ನಿಮ್ಮ ಸಂಕಲ್ಪ ತತ್‌ಕ್ಷಣ ಈಡೇರುತ್ತವೆ ಈ ಒಂದು ಮಾತು ಗಾಂಧೀಜಿಯವರ ಅಂತಃಕರಣದಲ್ಲಿ ಹೆಪ್ಪುಗಟ್ಟಿ ನಿಂತು ವ್ಯಥೆ, ನಿರಾಸೆ ವ್ಯಕ್ತವಾಗುತ್ತದೆ-ಅವರ ಒಂದು ಮಾತಿನಿಂದ ನಿಮ್ಮ ಮಾತು ನನಗೆ ವಿಡಂಬನೆ ಎನಿಸುತ್ತದೆ. ಗಾಂಧೀಜಿ, ರಾಯ್ ಅವರಿಗೆ ಒಂದು ಹಾಡನ್ನು ಹಾಡಲು ಕೇಳಿಕೊಳ್ಳುತ್ತಾರೆ. ಹಮ್ ಜಿಸ್ ದೇಶಕೆ ವಾಸಿ ಇದು ಆ ಹಾಡು. ಗಾಂಧೀಜಿ ಹೇಳುತ್ತಾರೆ: ನೀವು ಸುಚೇತಾ ಕೃಪಲಾನಿಗೆ ಕಲಿಸಿದ ಆ ಹಾಡನ್ನು ಹಾಡಿ ದಿಲೀಪರಿಗೆ ಆಶ್ಚರ್ಯವೆನ್ನಿಸುತ್ತದೆ; ವಾಸ್ತವವು ಇಷ್ಟು ಕ್ರೂರವಾದಾಗ, ಇಷ್ಟು ಭಯಾನಕವಾದಾಗ ಗಾಂಧೀಜಿಯವರು ಇಂತಹ ಫೇರಿಟೇಲ್ ಚಿತ್ರಿಸುವ ಕಲ್ಪನಾಲೋಕದಲ್ಲಿ ವಿಹರಿಸಲು ಏಕೆ ಬಯಸುತ್ತಾರೆ? ಆದರೆ ನನಗೆ ಆ ಕ್ಷಣ ಗಾಂಧೀಜಿ ತುಂಬದ ಮೋಳೆಗೆ ತುಟಿಯನಿಡುವ ಕಂದನಾಗಿ ಕಂಡರು. ನಾನು ಯೋಚಿಸಿದ ಚಿತ್ರವಲ್ಲ ಅದು. ಗಾಂಧೀಜಿ ನನಗೆ ಮಾನವತೆಯ ಪ್ರತೀಕವಾಗಿದ್ದಾರೆ. ಇದು ಗಾಂಧೀಜಿಯ ವೈಯಕ್ತಿಕ ಅನುಭವ ಸಾಮೂಹಿಕ ಅನುಭವ ಎಂದು ಹೇಳುವುದಕ್ಕಾಗಿ ನಾನು ಈ ಮಾತನ್ನು ಹೇಳುತ್ತಿದ್ದೇನೆ.

ಬೇಂದ್ರೆಯವರು ಆರ್ಯ ಪತ್ರಿಕೆಯನ್ನು ನೋಡಿದರು. ಅದು ಅವರನ್ನು ಆಕರ್ಷಿಸಿತು. ಅವರಿಗೆ ಶ್ರೀಅರವಿಂದ ವಿಷಯ ಗೊತ್ತಿರಲಿಲ್ಲ. ಅದು ಕೈಗೆ ಬಂದಾಗ ಅವರನ್ನು ಏಕೆ ಆಕರ್ಷಿಸಿತು! ಬೇಂದ್ರೆಯವರ ಅಂತಃಕರಣದ ತುಡಿತಗಳು ಅದರಲ್ಲಿಯ ಲೇಖನಗಳಿಗೆ ಸ್ಪಂದಿಸಿದವು. ಶ್ರೀಅರವಿಂದರು ಮಾನವನ ದುಃಖಗಳಿಗೆ ಪರಿಹಾರವನ್ನು ಆಧ್ಯಾತ್ಮದಲ್ಲಿ ಕಂಡುಕೊಂಡರು. ಬೇಂದ್ರೆಯವರು ಶ್ರದ್ಧೆಯುಳ್ಳವರು. ಮನೆತನದ ಭಾಗವತ ಪಂಥದಲ್ಲಿ, ಶಾಂಕರರ ಅಧ್ಯಯನದಲ್ಲಿ ಬೇಂದ್ರೆಯವರ ತುಡಿತಗಳಿಗೆ ಉತ್ತರವಿರಲಿಲ್ಲ. ಬೇಂದ್ರೆಯವರಿಗೆ ವಾಸ್ತವ ಭ್ರಮೆ ಎನಿಸುತ್ತಿರಲಿಲ್ಲ. ದುಃಖ ನಿವಾರಣೆಗೆ ವಾಸ್ತವವನ್ನು ಭ್ರಮೆಯೆಂದು ಭ್ರಮಿಸುವುದು ಉತ್ತರವಲ್ಲ ಎನಿಸುತ್ತಿತ್ತು. ಶ್ರೀಅರವಿಂದರಿಗೆ death, desire and incapacity ಇವು ಮೂರು ಮಾನವ ಜಾತಿಗೆ

ಅಂಟಿದ ಶಾಪ ಎನಿಸುತ್ತಿತ್ತು. Conquest over death ಇದು ಅವರ ಮುಖ್ಯ ಕಾಳಜಿಯಾಯಿತು. ಅವರ life divine ಪ್ರಾರಂಭವಾಗುವುದು: Two Denials ಎಂಬ ಪ್ರಕರಣದಿಂದ. ಮನುಷ್ಯನಿಗೆ ಎರಡು ದಾರಿಗಳಿವೆ: ಇಹವನ್ನು ನಿರಾಕರಿಸುವುದು, ಇಲ್ಲವೆ ಪರವನ್ನು ನಿರಾಕರಿಸುವುದು. ಇಹಪರಗಳ ಸಾಮರಸ್ಯ ಅರವಿಂದರ ದಾರಿಯಲ್ಲ. ಇಹದ ಪರಿವರ್ತನೆ ಅಧ್ಯಾತ್ಮದ ಗುರಿ. ಆದುದರಿಂದಲೇ ಬೇಂದ್ರೆಯವರ 'ಕುಣಿಯೋಣ ಬಾ' ಎಂಬ 'ಪ್ರಣಯದೋಲೆಯನೊಂದು ಎದೆವಾತಿನೊಂದೆಗೆ ನಾನಟ್ಟಿದ್ದೆ' ಎಂದು ಹೇಳಿದರೂ 'ಕುಣಿಯೋಣ ಬಾ' ಪ್ರಣಯಗೀತೆಯಲ್ಲ. ಇವರಲ್ಲಿ ಅಭಿವ್ಯಕ್ತವಾದದ್ದು ಆಳದಲ್ಲಿಯ ತುಡಿತವೆ. ಶಬ್ದನಿಷ್ಠ ಕೃತಿವಿವರಣೆಯನ್ನು ಕುರಿತು ಬೇಂದ್ರೆಯವರು ತಳೆದ ನಿಲುವನ್ನು ಸ್ಪಷ್ಟಪಡಿಸುತ್ತೇನೆ.

There is mystery, thought cannot touch it. Is that mystery somewhat everybody knows, should think that everybody knows it, probably one is born with that sense and its gradually gets diminished through the condition. There are many causes. One is lack of contact with nature. Everything is being explained away. The feeling has been created that in principle we could know everything. ಕಾವ್ಯವಿವರಣೆಯಲ್ಲಿ ಈ ಅಪಾಯವು ಕಾದಿದೆ.

ನಾನು Octavio Paz ಅವರ ಎರಡು ಪುಸ್ತಕಗಳನ್ನು ಓದುತ್ತಿದ್ದೆ. ಬೇಂದ್ರೆಯವರು ಬಂದರು. ಅದರಲ್ಲಿ ಒಂದು Gold In mine ಎಂಬುದಿತ್ತು. ಅದು ಕಾವ್ಯವನ್ನು ಕುರಿತ ಪುಸ್ತಕ. ಅದನ್ನು ಸ್ವಲ್ಪ ಹೊತ್ತು ನೋಡಿ ಇನ್ನೊಂದನ್ನು ಎತ್ತಿಕೊಂಡರು.From the otherside of silence. ಏಕೊ ನನಗೆ ಗೊತ್ತಿಲ್ಲ. ಅದು ಅವರನ್ನು ತುಂಬ ಕೆರಳಿಸಿತು. ಈತ ಕಾವ್ಯವನ್ನು, ಕವಿಯನ್ನು ಅಪಹಾಸ್ಯ ಮಾಡುತ್ತಿದ್ದಾನೆ ಎಂದರು. ನಿಜವಾಗಿ ಆ ಪುಸ್ತಕ ಹಾಗಿರಲಿಲ್ಲ. ನಾನು ಸುಮ್ಮನಾದೆ. ಮುಂದೆ ಮತ್ತೊಂದು ಸಲ ಅವರು ಬಂದಾಗ ಅವನದೇ ಇನ್ನೊಂದು ಪುಸ್ತಕವನ್ನು ಓದುತ್ತಿದ್ದೆ. ಅದರ ಹೆಸರು ತುಂಬ ವಿಚಿತ್ರ: The Monkey Grammarian. ಕುತೂಹಲದಿಂದ ಕೈಗೆತ್ತಿಕೊಂಡರು. ಅವರಿಗೆ ಆಶ್ಚರ್ಯ ಕಾದಿತ್ತು. ಅವರ ಕಾವ್ಯವನ್ನು ಕುರಿತ ವಿಚಾರಗಳನ್ನು ಸ್ಪಷ್ಟಪಡಿಸುವಂತಿತ್ತು.The unconscious vision irreducible to language are different from other visions which are inessable only in the sense their description can never be complete. The unconscious visions are a return to the world before the existence of language. Visions of reality through the destruction of language that the particularly mystical act entail, language sinks its root into this world but transforms its juices and reaction into science and symbols. Language is the consequence (or the cause) of our exile from the universe, signifying the distance between things and ourselves. If our exile is to come to an end, language will come to an end.

ಬೇಂದ್ರೆಯವರು ಇದನ್ನು ಮೇಲಿಂದ ಮೇಲೆ ಓದಿದರು. ತಮ್ಮ ಕಾವ್ಯಕ್ಕೆ ಬರೆದ ಭಾಷ್ಯದಂತೆ ಅವರಿಗೆ ಕಾಣಿಸಿತು. 'Nature, man and woman' ಪುಸ್ತಕವನ್ನು ಓದುತ್ತಿದ್ದೆ. ಅದರಲ್ಲಿಯ ಒಂದು ವಿಚಾರ ಅವರಿಗೆ ಗುಂಗು ಹಿಡಿಸಿತು. It is like pure music, music when it is not a support for a world when it is not imitating natural sounds when we might almost say it does not represent feeling but it is feeling. It is like poetry of the incantation and spellbinding, where the words are themselves meaning, people turn with incomprehension from it.

ಇಷ್ಟೆಲ್ಲ ನಾನು ಹೇಳಿದ್ದು ಬೇಂದ್ರೆಯವರನ್ನು ಸಮರ್ಥಿಸಿಕೊಳ್ಳುವುದಕ್ಕಲ್ಲ. ಅಥವಾ ಸಮೀಕ್ಷೆಯ ವ್ಯಾಪಾರವನ್ನು ನಿರರ್ಥಕವೆಂದು ಹೇಳಲೂ ಅಲ್ಲ. ಒಂದು ರೀತಿಯಲ್ಲಿ ಒಟ್ಟು ಕಾವ್ಯಾಭ್ಯಾಸವನ್ನು ಕುರಿತು ಆಡುವ ಮಾತು ಇದು.

ಕಾವ್ಯದ ಅನುಸಂಧಾನವನ್ನು ಕುರಿತು ನನ್ನ ಒಂದೆರಡು ಗ್ರಹಿಕೆಗಳಿವೆ. ಕಾವ್ಯ ಹಾಗೂ ವ್ಯಕ್ತಿತ್ವ ಇವುಗಳ ಪರಸ್ಪರ ಸಂಬಂಧವನ್ನು ಗಮನಿಸುವ ಅವಶ್ಯಕತೆಯಿಲ್ಲ. ಬೇಂದ್ರೆಯವರ ಕಾವ್ಯದ ಅಧ್ಯಯನಕ್ಕೆ ಅವರು ಬರೆದ ಟಿಪ್ಪಣಿಗಳಿಂದ ಆಗುವಷ್ಟು ಅನ್ಯಾಯ ಬೇರೆ ಯಾವುದರಿಂದಲೂ ಆಗಿಲ್ಲ. ಹಲವರು ಹೇಳುತ್ತಾರೆ; ಅವರ ಕಾವ್ಯ ಅರ್ಥವಾಗಬೇಕಾದರೆ ಪೂರ್ವಸಿದ್ಧತೆ ಬೇಕು. ಆ ಸಿದ್ಧತೆಯ ಸ್ವರೂಪವನ್ನು ನೋಡಿ ನನ್ನ ದಿಕ್ಕು ತಪ್ಪಿತು. ವೇದಗಳ ಪರಿಚಯ, ಉಪನಿಷತ್ತುಗಳ ಪರಿಚಯ ಹೀಗೆ ಏನೇನೋ ಸಿದ್ಧತೆ ಮಾಡಿಕೊಳ್ಳಬೇಕು ಎನ್ನುವ ಮಾತು ಅವರ ಕಾವ್ಯಕ್ಕೆ ಅಪಚಾರ ಮಾಡಿದಂತೆ. ನೀವು ಮಾವಿನಹಣ್ಣನ್ನು ಸವಿಯಬೇಕಾದರೆ ಸಸ್ಯಶಾಸ್ತ್ರವನ್ನು, ಕೃಷಿಶಾಸ್ತ್ರವನ್ನು ಅಭ್ಯಾಸ ಮಾಡು ಎಂದು ಹೇಳಿದಂತಾಗುತ್ತದೆ. ನನಗೆ ಗೀತೆಯ ಒಂದು ಮಾತು ನೆನಪಾಗುತ್ತದೆ. 'ಯಾವಾನರ್ಥ ಉಪ್ತ್ರೋದಕ ಸರ್ವತಃ ಸಂಪ್ರುತೋದಕೆ ತಾವಾನ್ ಸರ್ವೇಷು ವೇದೇಷು ಬ್ರಾಹ್ಮಣಸ್ಯ ವಿಜಾನತಃ'

ಕಾವ್ಯ ಕ್ಲಿಷ್ಟವಾದುದಲ್ಲ, ಕಾವ್ಯದ ಜತೆ ವಾದಕ್ಕೆ ಇಳಿಯಬಾರದು. ಹೀಗೆ ಹೇಳಿದ ಮಾತ್ರಕ್ಕೆ ಅದನ್ನು ಒಪ್ಪಿಕೊಳ್ಳಬೇಕು ಎಂದಲ್ಲ. ಒಪ್ಪಿಕೊಳ್ಳದೆ, ನಿರಾಕರಿಸದೆ, ಸಮರ್ಥಿಸದೆ, ಸ್ಪಷ್ಟೀಕರಿಸದೆ ಇದ್ದರೆ ಅದರ ಒಳದನಿ ಸ್ಪಷ್ಟವಾಗಿ ಕೇಳಿಸುತ್ತದೆ. ಕವಿ ಯಾವುದೋ ಒಂದು ಸಂದೇಶವನ್ನು ಹೇಳುತ್ತಿಲ್ಲ. ಕಾವ್ಯದಲ್ಲಿ ಮೈದಾಳುವುದು ಕವಿಯ ಸಂದೇಶವಲ್ಲ ಎಂಬುದನ್ನು ಗಮನಿಸಿದರೆ ಕಾವ್ಯಗ್ರಹಣ ಸುಲಭವಾಗುತ್ತದೆ. Eliot, Milton ಹಾಗೂ Blake ಇವರನ್ನು ತುಂಬಾ ಖಂಡಿಸುತ್ತಾನೆ. ಬ್ಲೇಕನ ಕವಿತೆಗಳನ್ನು ನಾನು ತುಂಬ ಸಂತೋಷದಿಂದ ಆಸ್ವಾದಿಸಿದ್ದೇನೆ. ಬ್ಲೇಕ್ ಸಮರ್ಥ ಕವಿ ಎಂಬುದನ್ನು Eliot ಒಪ್ಪಿಕೊಳ್ಳುತ್ತಾನೆ. ಬ್ಲೇಕನ ನಿಲುವು ಅವನಿಗೆ ಒಪ್ಪಿಗೆಯಿಲ್ಲ. ಹಾಗೆ ನೋಡಿದರೆ ಬ್ಲೇಕನದು ನಿಲುವು ಎಂಬುದು ಯಾವುದೂ ಇಲ್ಲ. ಬ್ಲೇಕ್ ಮತ್ತು ಮಿಲ್ಟನ್ ಇವರು ಭಗವಂತನ ಬಳಿ ಸಾಗಲು ಯಾವ ಮಧ್ಯಸ್ಥನ ಅವಶ್ಯಕತೆಯಿಲ್ಲ ಎಂದು ಹೇಳುತ್ತಾರೆ. ಈ ನಿಲುವು Eliotನಿಗೆ ಒಪ್ಪಿಗೆಯಿಲ್ಲ. ಅದಕ್ಕಾಗಿ ಅವನು ತಿರಸ್ಕರಿಸುತ್ತಾನೆ. ಬ್ಲೇಕನ ಯಾವ ಕವಿತೆಯಲ್ಲಿಯೂ ಬ್ಲೇಕನ ವಿಚಾರಗಳಿಲ್ಲ. ಬರಿ unconscious vision ಮಾತ್ರ ಇವೆ. ಮಾಸ್ತಿಯವರು ನಾದಲೀಲೆಗೆ ಬರೆದ ಮುನ್ನುಡಿಯಲ್ಲಿ ಹೇಳುತ್ತಾರೆ: ತಿಳಿವು ಮತ್ತು ಅನುಭವ ಬೇರೆಬೇರೆಯಾಗಿಲ್ಲ. ತಿಳಿವು ಬುದ್ಧಿಗ್ರಾಹ್ಯವಾದರೆ ಅನುಭವ ಅಂತರಂಗದ ದ್ರವ್ಯವಾಗಿದೆ. ಬುದ್ಧಿ ನಮಗೆ ಏನನ್ನು ಕೊಡಬಹುದು?

How much easier to remain pedestrian walking only along well known city blocks of rational complexity circum expression.

ಈ ಮಾತು ಕೇವಲ ಬುದ್ಧಿಯ ನೆಲೆಯಲ್ಲಿಯೇ ಇರುವವನನ್ನು ಕುರಿತು ಹೇಳುತ್ತದೆ. Beethoven ತನ್ನ ಸಂಗೀತವನ್ನು ಕುರಿತು ಹೇಳುತ್ತಾನೆ: Whoever understands my music will henceforth be free of misery of the world. ಈ ಮಾತು ನನ್ನಲ್ಲಿ Beethoven ಮೇಲಿನ ಆದರವನ್ನು ಹೆಚ್ಚಿಸಿತು. ಕೇವಲ ನನ್ನ ಹಾಗೂ ಬೇಂದ್ರೆಯವರ ನಡುವಿನ ಒಂದು ಸಂವಾದವನ್ನು ಇಲ್ಲಿ ಹೇಳುತ್ತೇನೆ. ಭಕ್ತಿಮಿಶ್ರಿತ ಗೌರವದಿಂದ Beethovenನನ್ನು ಕುರಿತು ನಾನು ಈ ಮಾತನ್ನು ಬೇಂದ್ರೆಯವರಿಗೆ ಹೇಳಿದೆ. ಅವರು ತಮ್ಮನ್ನು ಕುರಿತು ಇಂತಹ ಉದ್ಗಾರವನ್ನು ತೆಗೆದರು. ನನ್ನ ಮುಖದ ಮೇಲಿನ ಸಂದೇಹದ ಛಾಯೆಯನ್ನು ಕಂಡು ಅವರ ಕಣ್ಣಲ್ಲಿ ಮುಗುಳುನಗೆ ತುಳುಕಿತು. ಯಾಕೆ ಈ ಅವಿಶ್ವಾಸ? ಯಾಕೆ ಈ ಸಂದೇಹ? ಸಾವಿರಾರು ವರ್ಷಗಳ ಸಂಸ್ಕೃತಿಯ ಒಂದು ನಾಡಿನಲ್ಲಿ ಪರಂಪರೆಗೆ ಇಂತಹ ಒಂದು ಫಲ ಬಂದೀತು ಎಂಬ ವಿಷಯದಲ್ಲಿಯೇ ಶ್ರದ್ಧೆ ಇಡದಿದ್ದರೆ ಅಂತಹ ಸಂಸ್ಕೃತಿ ಜೀವಂತವಿರಲು ಸಾಧ್ಯವಿಲ್ಲ. ನಾನು ಈ ಮಾತನ್ನು ಆಡಿದರೆ ಅದು ಅಹಂಕಾರ ಎನ್ನಿಸುತ್ತದೆ. Beethoven ಆಡಿದರೆ ಸತ್ಯ ಎನ್ನಿಸುತ್ತದೆ. ಈ ಬಗೆಯ ಆತ್ಮಾವಹೇಳನ ಜನತೆಯ ಸುಪ್ತಮನಸ್ಸಿನಿಂದ ತೊಡೆಯದೆ ಹೋದರೆ ಆ ಜನತೆಗೆ ಯಾವ ಭವಿತವ್ಯವೂ ಇಲ್ಲ. ನನಗೆ ಅಹುದೆನ್ನಿಸಿತು. There is a grace that comes in such moments a new depth of experience in ourselves is awakened. Art carried them in another world. Grace comes as a gift. It is something we do not ask for and cannot command. We were living in a narrow world now with the grace that comes in art. We suddenly find the new world we did not know was there.

ಬೇಂದ್ರೆಯವರು ಕಾವ್ಯದ ವಿಷಯದಲ್ಲಿ ಈ ಬಗೆಯ ಭಾವವನ್ನು ತಾಳಿದ್ದರು. ಮದರ್ ಜಪಾನದಿಂದ ಪಾಂಡಿಚೇರಿಗೆ ಹಡಗದಲ್ಲಿ ಬರುವಾಗ ಒಂದು ಘಟನೆ ನಡೆಯಿತು. ಅಲ್ಲೊಬ್ಬ ಮಿಶನರಿ ಇದ್ದ. ಆತ ಭಾರತದಿಂದ ಚೀನಾ ದೇಶಕ್ಕೆ ಧರ್ಮಪ್ರಸಾರಕ್ಕೆ ಹೋಗಲಿದ್ದ. ಅವನು ಮದರ್ ಅವರನ್ನು ಕಂಡು ನಾನು ದಿನವೂ ಬೈಬಲ್‌ನಿಂದ ಪ್ರವಚನ ಕೊಡುತ್ತೇನೆ. ನೀವು ಅಲ್ಲಿ ಬರಬೇಕು. ಮದರ್ ಹೇಳುತ್ತಾರೆ: ಇಲ್ಲ ನಾನು ಬರಲಾರೆ. ಯಾಕೆ? ನೀವು ನಾಸ್ತಿಕರೆ? ನೀವು ಕಮ್ಯುನಿಸ್ಟರೆ? ಅಲ್ಲ ಹಾಗಾದರೆ ನೀವು ಪ್ರವಚನ ಕೇಳಲಿಕ್ಕೆ ಏಕೆ ಬರುವುದಿಲ್ಲ? ಮದರ್ ಉತ್ತರಿಸುವುದಿಲ್ಲ. ಮರುದಿವಸ ಮತ್ತೆ ಅವನು ಕೇಳುತ್ತಾನೆ: ಇಂದಾದರು ಬನ್ನಿ, ಮದರ್ ಅವನನ್ನು ಕೇಳುತ್ತಾರೆ: ಡಿಡ್ ಯು ಕಮ್ಯೂನ್? ಅವನು ಆಶ್ಚರ್ಯಚಕಿತನಾಗಿ ಕೇಳುತ್ತಾನೆ: ಅದು ಹೇಗೆ ಸಾಧ್ಯ? ಹಾಗಿದ್ದರೆ ನಿಮ್ಮ ಪ್ರವಚನ ವ್ಯರ್ಥ ಬಡಬಡಿಕೆಯಲ್ಲವೆ? ಕಾವ್ಯ ವಿವರಣೆಯನ್ನು ಕೇಳುವದಿಲ್ಲ, ಸ್ಪಷ್ಟೀಕರಣವನ್ನು ಕೇಳುವದಿಲ್ಲ. ಇಂತಹ ಸಂವಾದವನ್ನು ಅಪೇಕ್ಷಿಸುತ್ತದೆ. sharing ಅಪೇಕ್ಷಿಸುತ್ತದೆ.

Creation always exceeds its tools. ಇದನ್ನು ಗಮನಿಸದಿದ್ದರೆ ಕಲಾಪ್ರಪಂಚದಲ್ಲಿ ಸಹೃದಯ ದೂರದವರೆಗೆ ಸಾಗಲಾರ. ಕಲೆಯಲ್ಲಿ ಶಿಲೆಯಂತೆ ಆದ ಭಾವ ಸಹೃದಯನ

ಸ್ಪರ್ಶದಿಂದ ಜೀವಂತವಾಗುತ್ತದೆ. ಎಷ್ಟೋ ಸಲ ನಾವು ನಮ್ಮದಲ್ಲದ ಪ್ರಾಂತದಲ್ಲಿ ಪ್ರವೇಶಿಸಿ ಅಲ್ಲಿ ಇರಲಾರದ ಅನೇಕ ಸಂಗತಿಗಳನ್ನು ಇವೆ ಎಂದು ಭ್ರಮಿಸಿ ಮಾತನಾಡುತ್ತೇವೆ. ಆಗ ಎಲ್ಲ ಬಗೆಯ ಆಭಾಸಗಳು ಉಂಟಾಗುತ್ತವೆ. ಕುಂಡಲಿನಿಯನ್ನು ಚರ್ಚಿಸುವುದು ಅಂತಹ ಒಂದು ನಿರರ್ಥಕ ಎಂದೇ ಭಾವಿಸುತ್ತೇನೆ. ಆ ಕಾವ್ಯದಲ್ಲಿ ಅಂತಹ ಯಾವ ಮಾತೂ ಇರುವದಿಲ್ಲ. ಭಕ್ತಿಯ ಆರ್ದ್ರತೆ ಏನು ಎಂಬುದನ್ನು ಅರಿಯದ ವ್ಯಕ್ತಿ, ಬೌದ್ಧಿಕ ನೆಲೆಯಲ್ಲಿ ಭಕ್ತಿಯನ್ನು ಕುರಿತು ಮಾತನಾಡುವದು ಎಷ್ಟರ ಮಟ್ಟಿಗೆ ಪ್ರಾಮಾಣಿಕ ಎನಿಸುತ್ತದೆ?

ಅಂತಃಸ್ಫುರಣೆಯನ್ನು ಕುರಿತು ಒಂದು ಉದಾಹರಣೆ ಕೊಡುತ್ತೇನೆ. ಇರುಳ ತಾರೆಗಳಂತೆ ಮೂಡುವದು/ ಕಳೆದ ದುಃಖಗಳಲ್ಲಿ ನೆನೆದಂತೆಯೆ/ ಎರಡು ಸಾಲುಗಳನ್ನು ನೋಡಬಹುದು. ಸಾಮಾನ್ಯವಾಗಿ, ಸಾಮಾನ್ಯ ಮಟ್ಟದಲ್ಲಿ ಮಾತನಾಡುವಾಗ ಯಾರೂ ಕಳೆದ ದುಃಖಗಳನ್ನು ನೆನೆಸಿಕೊಂಡರೆ ಎನ್ನುತ್ತಾರೆ ಹೊರತಾಗಿ ಕಳೆದ ದುಃಖಗಳಲ್ಲಿ ನೆನೆದಂತೆ ಎಂದು ಹೇಳುವದಿಲ್ಲ. 'ತುಂಬದ ಮೊಲೆ' ಕೆ.ಎಸ್.ನ. ವ್ಯಕ್ತಿಯಾಗಿ ಬುದ್ಧಿಯ ನೆಲೆಯಲ್ಲಿ ಬರೆದ ಮಾತಲ್ಲ. ಹಾಗೆಯೇ 'ಕಳೆದ ದುಃಖಗಳಲ್ಲಿ ನೆನೆ' ಇದು ಬೇಂದ್ರೆ ಬರೆದ ಮಾತಲ್ಲ. ಇದು ಅಂತಃಸ್ಫುರಣೆ. ಅಂತಃಸ್ಫುರಣೆ ವ್ಯಕ್ತಿಗತವಾಗಿರುವುದಿಲ್ಲ. ಓದುವಾಗ ಎಷ್ಟೋ ಜನ ಸಹೃದಯರು ಕಳೆದ ದುಃಖಗಳನ್ನು ಎಂದೆ ಓದಿಕೊಂಡಿರುತ್ತಾರೆ. ಆದರೆ ಎಚ್ಚೆತ್ತ ಓದುಗ ಮಾತ್ರ ಹೀಗೇಕೆ? ಎನ್ನುತ್ತಾನೆ. ದುಃಖಗಳನ್ನು ನೆನೆಯುತ್ತಾನೆ. ಆದರೆ ಸಹೃದಯ ದುಃಖಗಳನ್ನು ಎಂದು ಓದಿದಾದ ಅಂತಃಸ್ಫುರಣದಿಂದ ಕವಿ ಕಂಡದ್ದರ ಅನುಭವವಾಗುತ್ತದೆ. ಈ ಅನುಭವ ನಿಜವಾದ ಹೃದಯ ಸಂವಾದ. ನೃತ್ಯಯಜ್ಞದಲ್ಲಿಯ ಎರಡು ಸಾಲುಗಳನ್ನು ನೋಡಬಹುದು– 'ಹೇ ಶಿಖಂಡಿ, ಹೇ ತ್ರಿದಂಡಿ ನಿನ್ನೊಡ ಚಾಮುಂಡಿ ತಾಂಡವಕ್ಕೆ-ಹಾಸ್ಯ ರಾಸ್ಯ ಬೆರೆಸುವ ರಣಚಂಡಿ, ಚಾಮುಂಡಿ, ರಣಚಂಡಿ' ಇವು ಏಕೆ ಬಂದವು ಎಂದು ಕೇಳುವುದು ಸಹಜ. ಆದರೆ ಅದಕ್ಕೆ ಉತ್ತರವೂ ಅಷ್ಟೇ ಸಹಜವಾಗಿದೆ. ಶಿಖಂಡಿ ಶಬ್ದಕ್ಕೆ ನವಿಲು ಎಂಬ ಅರ್ಥ ಇರುವಂತೆ ಮಹಾಭಾರತದಲ್ಲಿ ಶಿಖಂಡಿಯೂ ಬರುತ್ತಾನೆ. ಆಗ ಚಾಮುಂಡಿ ಶಬ್ದ ಸಾರ್ಥಕವಾಗುತ್ತದೆ. ಶಿಖಂಡಿ ಭೀಷ್ಮನನ್ನು ಕೊಲ್ಲುತ್ತಾನೆ. ಭೀಷ್ಮನ ವಧೆಯ ಮೂಲಕ ಶಿಖಂಡಿ ಸೇಡು ತೀರಿಸಿಕೊಳ್ಳುತ್ತಾನೆ. ಚಾಮುಂಡಿ, ರಣಚಂಡಿ, ದ್ರೌಪದಿ ಇಲ್ಲಿ ಅಂತಃಸ್ಫುರಣದಿಂದ ಈ ಸಾಲುಗಳು ಬಂದಿವೆ. ಅಂದಿನಿಂದ ಇಂದಿನವರೆಗೆ ಮಾನವಜಾತಿ ಅದೇ ತಪ್ಪು ತಪ್ಪು ಹೆಜ್ಜೆಗಳನ್ನು ತುಳಿಯುತ್ತ ಬಂದಿದೆ. ಕವಿ, ಇದು ಬದಲಾಗಬೇಕು ಎಂದು ಬಯಸುತ್ತಿದ್ದಾನೆ. ಈ ಬಯಕೆ, ಕವಿಯೊಬ್ಬನ ಬಯಕೆಯಲ್ಲ, ಮಾನವ ಜನಾಂಗದ ಬಯಕೆಯಾಗಿದೆ. ನೃತ್ಯಯಜ್ಞದಲ್ಲಿ

ಜಗವೆಲ್ಲವೂ ಮೊರೆಯಿಡುತಿದೆ ಕೇಕೆ
ಸಖಿ ಸಮ್ಮುಖ ತಲ್ಲೀನತೆಯಲಿ ಏಕಾಕಿ

ಏಕಾಕಿ ಶಬ್ದ ಬಹಳ ಮಹತ್ವದ್ದಾಗಿದೆ. ಒಂಟಿಯಾಗಿ ಕುಣಿಯುತ್ತಿದೆ. ಆದರೆ ಇದು ಅಷ್ಟೇ ಅರ್ಥವಲ್ಲ. ಏಕಾಕಿ ಎಂಬುವ ಶಬ್ದ ಒಂಟಿತನವನ್ನು Loneliness/ Alienation ಇದನ್ನು ಧ್ವನಿಸುತ್ತದೆ. ಇಲ್ಲಿಯ ಕೇಕೆ ಸಖಿಗೀತದಲ್ಲಿಯ ಸಖನ ಒಂಟಿತನವನ್ನು ಸೂಚಿಸುತ್ತದೆ. ಕುಣಿಯೋಣು ಬಾರ ಇದರಲ್ಲಿಯ ನಾಯಕನ ಅವಸ್ಥೆಯನ್ನು ಸೂಚಿಸುತ್ತದೆ. ಒಟ್ಟಿನಲ್ಲಿ ಇಲ್ಲಿ ಇರುವ ಅನುಭವ ವ್ಯಕ್ತಿಗತವಾದದ್ದಲ್ಲ, ಸಾಮೂಹಿಕವಾದುದು.

ಬೇಂದ್ರೆ ಅವರ ಜೋಗಿ ಮತ್ತು ಕುರುಡು ಕಾಂಚಾಣ

■ ಕುಸುಮಾಕರ ದೇವರಗೆಣ್ಣೂರ

ಜೋಗಿ

೧

ಊರ ತುದಿಯ ಆ ಮೂರು ಬಟ್ಟೆ ಮುಗಿದಲ್ಲಿ ಕೊಳ್ಳವೆಲ್ಲಿ
ಹಳ್ಳ ಅಡಗಿ ಹರಿದಲ್ಲಿ, ತುಡುಗು-ದನ ತೊಂಡು ಮೇಯುವಲ್ಲಿ
ದಿಕ್ಕು ತಪ್ಪತಾರ ತಪ್ಪಿ ಹೊಕ್ಕರs ಕಕ್ಕಾವಿಕ್ಕಿಯಾಗಿ
ಇರುಳು ಅಂತನs ಹಗಲs ಗೂಕತಾವ ಅಲ್ಲಿ ಜೋಡಗೂಗಿ

೨

ಅದನ ದಾಟಿ ಆ ಮಸಣವಾಟಿ, ಎಡಕಾಗಿ ಅದರ ಆಚಿ
ಕಾಮ ತನ್ನ ಹಚ್ಚಂಗಿ ಹಾಸಿಧಾಂಗೆಲ್ಲಿ ನೀರ ಪಾಚಿ
ಹೊಚ್ಚಿ ಹೊಂಡವನು ಮೆಚ್ಚ ಮಾಡತಾವೊ ಕಂಡ ಕಣ್ಣುಗಳಿಗೆ
ಪಾಚಿ ಸರಿಸಿದಾಗ ಕಪ್ಪು ನೀರು ಕರಿತಾವ ಒಳಗ ಒಳಗೆ

೩

ಅದರ ಮುಂದ ಗವಿಗುಡ್ಡ ಅಡ್ಡ ಬರತಾವ ನಮ್ಮ ಬಲಕ
ಅತ್ತತ್ತ ಹರುಹಿ ಹತ್ತೊತ್ತಿ ಬಂದ ಕಾಳಮ್ಮಗಿರುವ ಹೊಲಕ
ಆ ಹೊಲದ ನಟ್ಟನಡುವಿರುವ ಹುಣಸಿಮರ ಏರಿ ನೋಡಿದಾಗ
ಹತ್ತ ಗಿಡದ ಗುಂಪೊಂದು ಕಾಣತದ ಸಣ್ಣ ಏರಿಮ್ಯಾಗ

೪

ಅಲ್ಲಿ ತೊಗಲಬಾವಲೀ ಚೀರತಾವ ಭರತಿ ಹಗಲಿನೊಳಗ
ಹಿಂಡು ಪಾರಿವಾಳ ಹೊಕ್ಕು ಹೊರಡತಾವ ಮತ್ತ ಒಳಗ ಹೊರಗ
ಅಲ್ಲಿ ಹಬ್ಬಿ ಹರುಹ್ಯಾದ ಬೇವಿಗೇ ಸುತ್ತ ಅಮೃತಬಳ್ಳಿ
ಹಾಲ ಸುರವತಾವ ಆಲ ಅಲ್ಲಿ ಅಲ್ಲಾಡತಾವ ಅಳ್ಳಿ

೫

ಅತ್ತಿಗಿಡಕ ಹತ್ತ್ಯಾವ ಹಸಲಿನ್ಹಂಗ ಬುಡಕು ಕೆಂಪು ಹಣ್ಣು
ಜೇನು ತುಂಬಿ ತೊಟಗುಟ್ಟತಾವ ಅದ ಬಯಸತಾವ ಕಣ್ಣು
ಈ ತೋಪಿನ್ಯಾಗ ಬೆಳದಽದ ಹ್ಯಾಂಗೋ ಮೂಲ್ಯಾಗ ತಪ್ಪಿ ಮಾವು
ಅದರಡಿಗೆ ಹುತ್ತ, ಅದರಾಗ ಐತೆ ಒಂದೇಳ ಹೆಡೆಯ ಹಾವು

೬

ಆ ಮಾಪಿನೊಳಗ ಈ ಸುಗ್ಗಿಯೊಳಗ ಬಂದಽದ ಕೋಗಿಲೊಂದು
ತನ್ನ ಜೋಡಿ ಕರೆದ್ಹಾಂಗ ಕರೀತಽದ ನನ್ನ ಬಾರಽ ಅಂದು
ಕೂಗೇ ಕೂಗತಽದ ಕೂಗೇ ಗೂಗತಽದ ಗಿರಣಿ ಕರೆಯೊ ಹಾಂಗ
ತೆರೆಪು ಇಲ್ಲ ಒಂದಳತಿ ಕೂಗತಽದ ಬ್ಯಾಸರಿಲ್ಲಧಾಂಗ

೭

ತಿಳಿಯದ್ಯಾವದೋ ಕಂಪು ಎಳೀತಽದ ತುಂಬಿ ಹುಚ್ಚು ಆಗಿ
ಎಚ್ಚರಿಲ್ಲದಽ ಎತ್ತೊ ತಿರಗತಾವ ದಿಕ್ಕು ತೋರದಾಗಿ
ಬಂತು ಸುಗ್ಗಿ ಬಂದಽದ ಸುಗ್ಗಿ ಬರತಽದ ಸುಗ್ಗಿ ಎಂದು
ಕುಹೂ ಅನ್ನತದ ಕುಹೂ ಅನ್ನತದ ಕುಹೂಕ್ಕುಹೂ ಅಂದು

೮

ತಾರ ಪಂಚಮದಾಗ ಕೋಗಿಲಾ ಕೂಗತಽದೊ ಜೋಗಿ
ಯಾವ ಬಣ್ಣ ಅದಕಾವ ಕಣ್ಣು ನಾ ನೋಡಲೇನು ಹೋಗಿ?
ತೋಟವೆಲ್ಲ ಹೂವಾಗಿ ನಿಂತು ತೊಂಗೆಲ್ಲ ಗೊಂಚಲಾಗಿ
ಪಾಡು ಆಗತಾವ, ಹಣ್ಣು ಆಗತಾವ, ಅದರ ಲಯಕೆ ತೂಗಿ

೯

ಮುಂಜಾವ ತೊಟ್ಟು ಇರು ಹಂಗು ಬಿಟ್ಟು ಬರಿ ಹಾಂಗ ಕೂಗತಽದೋ
ತಲಿ ಕಾವಿನೊಳಗ ಇಮ್ಮಾವಿನೊಳಗ ಬಿಸಿಗಾಲ ನೂಗತಽದೋ
ಕೊಳಲ ನುಡಿಸಿಧಾಂಗ ಕುಹೂಹೂಹೂಹೂ ಉಲಿತಽದೊ ಜೋಗಿ
ಬೇರೆ ಕೆಲಸದಾಗ ಮನಸು ತೊಡಗದೋ ನೋಡಲೇನು ಹೋಗಿ?

೧೦

ಬಂದೆ ಜೋಗಿ ಬಾ, ಬಾರೊ ಜೋಗಿ ಬಾ, ಏನು ಹೊತ್ತು ಬಂದಿ
ನೀನೆ ಹೇಳಿದಾ ನಾಮ ಜಪಿಸುವಾಗ ಬಂತೊ ಸುಗ್ಗಿ ಸಂಧಿ
ತಲೆಯ ಯಾವದೋ ನಾಡಿಯೊಳಗ ಸುರುವಾತು ಸುಗ್ಗಿ ಸೊಲ್ಲು
ಮುಂದೆ ಕೇಳಿದರ ಅದಽ ತುಂಬಿತೋ ಮೂಲೆ ಮೂಲೆಯಲ್ಲು

೧೧

ಗುಡಿಗೆ ನಾನು ಹೊರಟಾಗ ಕರೀತದ ಕುಹೂಕ್ಕುಹೂ ಎಂದು
ಮನದ ಜಪದ ನಡುನಡುವೆ ನುಡೀಽತಽದ ಓಂ ಕುಹೂ ಎಂದು
ಕನಸಿನೊಳಗ ನಾ ಸ್ವರಾ ಕೇಳಿ ಮಾಮರಾ ಆಗತೇನೋ
ಅಂತ ಭ್ರಮಾ ಆಗ್ಯಽದ ಮನಕ ನೀ ಬಂದೆ ಜೋಗಿ ಏನೋ!

೧೨

ಯಾವ ಸ್ವರಾ? ಇದು ಯಾವ ಕೋಗಿಲಾ? ಯಾವ ಮರವೊ ಏನೋ
ಯಾಕ ಹೀಂಗ ಆಸರಂತ ಕೂಗತದ ಏನು ಇದಕೆ ಬ್ಯಾನ್ಯೊ?
ಸುತ್ತು ಗುಡ್ಡ ನುಗ್ಗಾಗಿ ಹೋದವೋ ಓಗೊಟ್ಟು ಇದಕಽ
ಬಿಸಿಲು ಕುಣಿದು ಬೆವತಽದ ಈಗ ಬಂದಽದ ಮಳಿಯ ಹದಕಽ

-ಗಂಗಾವತರಣ: ೩೭/ ಪ್ರ ೧೯೫೧

ಈಗಾಗಲೇ ಈ ಕವನವನ್ನು ಕುರಿತು ಬಹಳಷ್ಟು ಚರ್ಚೆಗಳಾಗಿವೆ. ಶೈಲಿ, ಬಂಧ, ಛಂದ, ಪ್ರತಿಮೆ, ಆಶಯ, ಅನ್ವಯ, ಕೃತಿನಿಷ್ಠ ಹೀಗೆ ಹಲವು ನೆಲೆಗಳಲ್ಲಿ ಹಲವರು ಈ ಕವನವನ್ನು ಕುರಿತು ಬರೆದಿದ್ದಾರೆ. ಈ ವಿಷಯಗಳನ್ನಿಲ್ಲಿ ಹೇಳುವ ಅಗತ್ಯವೂ ಇಲ್ಲ. ಹಲವರ ವಿಚಾರಗಳನ್ನು ಪೂರ್ವಪಕ್ಷವೆಂದು ಮಂಡಿಸಿ ಅವುಗಳನ್ನು ಖಂಡಿಸಿ ಸಿದ್ಧಾಂತವನ್ನು ಹೇಳುವ ಪ್ರಯತ್ನವೂ ಇಲ್ಲಿಲ್ಲ. ಕವಿತೆ ಯಾವ ಅನುಭವವನ್ನು ಕೊಡುತ್ತದೆ? ಅದನ್ನು ಕವಿತೆಯೊಡನೆ ಹಂಚಿಕೊಳ್ಳುವ ಚಿಂತನ ಇಲ್ಲಿದೆ.

ಮೊದಲಿನ ನಾಲ್ಕು ಪದ್ಯಗಳು ಹಾಗೂ ಐದನೆಯ ಪದ್ಯದ ಮೊದಲ ಎರಡು ಸಾಲುಗಳು ಒಂದು ಚಿತ್ರವನ್ನು ಅನುಭವಗಮ್ಯವನ್ನಾಗಿ ಮಾಡುತ್ತವೆ. ಐದನೆ ಪದ್ಯದ ಮೂರು ನಾಲ್ಕು ಚರಣಗಳು ಹಾಗೂ ೬,೭,೮,೯ ಈ ಪದ್ಯಗಳು ಅದಕ್ಕೆ ತೀರ ವಿಭಿನ್ನವಾದ ಚಿತ್ರವನ್ನು ಕೊಡುತ್ತವೆ. ೧೦,೧೧ ಹಾಗೂ ೧೨ನೆಯ ಪದ್ಯದ ಮೊದಲ ಎರಡು ಸಾಲುಗಳು ಜೀವದ ತೊಳಲಾಟದ ಚಿತ್ರವನ್ನು ಕೊಡುತ್ತವೆ. ಹನ್ನೆರಡನೆಯ ಪದ್ಯದ ಕೊನೆಯ ಎರಡು ಸಾಲುಗಳು ಟ್ರಾನ್ಸ್‌ಪರ್ಸನಲ್ ಅವಸ್ಥೆಯಲ್ಲಿಯ ಒಂದು ಚಿತ್ರವನ್ನು ಕೊಡುತ್ತವೆ.

ಬೇಂದ್ರೆಯವರು ಶ್ರೀಅರವಿಂದರ ಆರ್ಯ ಪತ್ರಿಕೆಯನ್ನು ಓದಿ ಶ್ರೀ ಅರವಿಂದರತ್ತ ಆಕರ್ಷಿತರಾದರು. ಅದರಲ್ಲಿಯ ಕಾವ್ಯ ವಿಷಯಕ ಅರವಿಂದರ ವಿಚಾರಧಾರೆ ಅವರನ್ನು ಎಳೆದರೂ ಅದಕ್ಕಿಂತ ಹೆಚ್ಚಾಗಿ ಆದರಲ್ಲಿಯ ಶ್ರೀಅರವಿಂದರ ಜೀವನದರ್ಶನ ಇಂಟೆಗ್ರಲ್ ಆದುದನ್ನು ಕಂಡು ಹೆಚ್ಚು ಆಕರ್ಷಿತರಾದರು. ಅದರ ಮೊದಲೇ ಬೀಜರೂಪವಾಗಿ ಸುಪ್ತಪ್ರಜ್ಞೆ ಯಲ್ಲಿ ಅದು ಇತ್ತು. ಇಂತಹ ಚರಣಗಳು ಅಲ್ಲಲ್ಲಿ ಸಿಕ್ಕುತ್ತವೆ. ಶ್ರೀಅರವಿಂದರ ಪೂರ್ಣ ಯೋಗದ ಮುಖ್ಯ ಗುರಿ conquest over death ಅವರು ಬರೋಡಾದಲ್ಲಿದ್ದಾಗ ಬರೆದ ಕಾವ್ಯ love and death ಆಗಿದೆ. ಸಾವು ಜೀವನಕ್ಕೆ ಅನಿವಾರ್ಯವಾದುದಲ್ಲ. ಅದು ವಿಕಾಸಕ್ರಮದಲ್ಲಿ ಅನಿವಾರ್ಯವಾದ ಒಂದು ಹೆಜ್ಜೆಯಾಗಿದೆ. ದೇಹ ಮರಣವನ್ನು ಅನಿವಾರ್ಯ ಎಂದು ಒಪ್ಪಿಕೊಂಡಿದೆ. ಈ ಭ್ರಮೆಯಿಂದ ಅದನ್ನು ಮುಕ್ತಗೊಳಿಸುವುದೆ ಪೂರ್ಣಯೋಗದ

ಗುರಿಯಾಗಿದೆ. ಹಾಗೆಯೆ ಅವರ ಕಟ್ಟಕಡೆಯ ಕೃತಿ ಸಾವಿತ್ರಿಯಾಗಿದೆ ಎಂದು ಗಮನಿಸಬೇಕು. ಇದರಲ್ಲಿ ಸಾವಿತ್ರಿ ಮೃತ್ಯುವನ್ನು ಗೆಲ್ಲುತ್ತಾಳೆ.

ಜೋಗಿ ಕನ್ನಡದಲ್ಲಿ ಯೋಗಿ ಶಬ್ದದ ತದ್ಭವವಾಗಿ ಬಂದರೂ ಅದರ ಭಾವವಿಶ್ವ ತುಂಬ ಬೇರೆಯಾಗಿದೆ. ಸಂಸ್ಥೆ ಇದರ ತದ್ಭವ ಸಂತೆಯಾದಂತೆ. ಎರಡರ ಭಾವವಿಶ್ವದಲ್ಲಿ ಎಷ್ಟು ಅಂತರವಿದೆ! ಜೋಗಿ ವೈರಾಗ್ಯದ ಜೀವನಕ್ಕೆ ಪ್ರಮುಖವಾದ ಹಾಗೂ ಇಹದ ಅಂತ್ಯತೆಯನ್ನು, ದುಃಖವನ್ನು ಕಂಡು ಹೇಗೆ ಇದನ್ನು ಸಂಪೂರ್ಣವಾಗಿ ನಿರಾಕರಿಸಿ ಪರದ ಚಿಂತೆಯನ್ನು ಹಚ್ಚಿಕೊಂಡಿದ್ದಾನೆ, ಅದಕ್ಕಾಗಿ ತಪಿಸುತ್ತಿದ್ದಾನೆ. ಮೊದಲಿನ ಪದ್ಯದಲ್ಲಿ ಜೀವನದ ಅನಿತ್ಯತೆಯನ್ನು ಸ್ಪಷ್ಟಪಡಿಸಲಾಗಿದೆ. ಊರತುದಿಯ ಆ ಮೂರುಬಟ್ಟೆ ಮುಗಿದಲ್ಲಿ ಎನ್ನುವ ಚರಣ ಅರ್ಥಪೂರ್ಣವಾಗಿದೆ. ಮೂರುಬಟ್ಟೆ ಊರಿನಿಂದ ಪ್ರಾರಂಭವಾಗುತ್ತದೆ. ಮೂರುಬಟ್ಟೆ ವಿಘ್ನಗಳ, ವಿಪತ್ತುಗಳ, ವಿಷಾದದ ವೈಷಮಿಕ ಜಗತ್ತನ್ನು ಪ್ರತಿಮಿಸುತ್ತದೆ, ಧ್ವನಿಸುತ್ತದೆ. ಜೀವನದಲ್ಲಿಯ ಮಾನವನ ಎಲ್ಲ ಸಾಹಸಗಳನ್ನು, ಸಿದ್ಧಿಗಳನ್ನು ಇವೆಲ್ಲವನ್ನೂ ವ್ಯರ್ಥವೆಂದು ಹಲವರು ಕಂಡುಕೊಂಡಿದ್ದಾರೆ. ಜೋಗಿಯಲ್ಲಿ ಕ್ಷುದ್ರ ಸಿದ್ಧಿಗಳು ಇಲ್ಲ. ಆ ಕ್ಷುದ್ರ ಸಿದ್ಧಿಗಳಿಂದ ಆಕರ್ಷಿತರಾದ ಸಾಮಾನ್ಯರು ಅವನ ಬೆನ್ನು ಹತ್ತುತ್ತಾರೆ. ಸಣ್ಣಪುಟ್ಟ ಅನುಕೂಲತೆಗಳನ್ನು ಅವನು ಮಾಡಿಕೊಡುತ್ತಾನೆ. ಆದರೆ ಅವನ ಬೆನ್ನು ಹತ್ತಿದವರು ಹೋಗುವುದು ಮಸಣವಾಡಿಗೆ. ಅಲ್ಲಿ ಕಂಡ ಕಣ್ಣುಗಳಿಗೆ ಕಾಮ ತನ್ನ ಹಚ್ಚಂಗಿ ಹಾಸಿದ ಹಾಗೆ ಕಾಣುವ ನೀರಪಾಚಿ ಹೊಂಡವನು ಹೊಚ್ಚಿ ಮುಚ್ಚಮಾಡತಾವ. ಆ ಪಾಚಿ ಸರಿಸಿದಾಗ ಕಪ್ಪುನೀರು ಒಳಗೆ ಬಿರಿವೆ ಹರಿತಾವ ಅಲ್ಲೊಂದು ಹುಣಸಿ ಮರ ಇದೆ. ಅದನ್ನು ಏರಿ ನೋಡಿದಾಗ ಹತ್ತು ಗಿಡಗಳ ಗುಂಪೊಂದು ಕಾಣುತ್ತದೆ.

ಕವನದಲ್ಲಿ ಹತ್ತ ಗಿಡದ ಗುಂಪು ಎಂದಿದೆ. ಇದನ್ನು ವ್ಯಾಕರಣದೋಷವೆಂದು ಭಾವಿಸಬಹುದು. ಆದರೆ ಅದು ಹಾಗಲ್ಲ. ಗಿಡಗಳ ಎಂದರೆ ಮಾತ್ರ ಹೆಚ್ಚಾಗುತ್ತದೆ ಎಂಬ ಕಾರಣಕ್ಕೆ ಗಿಡದ ಎಂಬ ಶಬ್ದ ಯೋಜನೆಯಿದೆ. ಅದರ ಅರ್ಥವನ್ನು ಸ್ಪಷ್ಟಪಡಿಸಬೇಕಾದರೆ, ಐದು ಬೆರಳು ಎಂದು ಹೇಳುವ ಹಾಗೆ, ಬೆರಳುಗಳಲ್ಲಿರುವ ಅನ್ಯೋನ್ಯತೆ ಆ ಹತ್ತು ಗಿಡದಲ್ಲಿದೆ. ಅಲ್ಲಿ ತೊಗಲಿಬಾವಲಿಗಳು ಹಗಲಿನಲ್ಲೇ ಚೀರುತ್ತವೆ. ಗಂಡು ಪಾರಿವಾಳ ಒಳಗೆ ಹೊರಗೆ ಹೊಕ್ಕು ಹೊರಡತಾವ. ಬೇವಿನ ಮರ. ಅದಕ್ಕೆ ಅಮೃತಬಳ್ಳಿ ಸುತ್ತಿದೆ. ಹಾಲು ಸುರಿಯುವ ಆಲ, ಹಣ್ಣು ತುಂಬಿದ ಹತ್ತಿ ಗಿಡ, ಇವೆಲ್ಲ ಜೀವನದ ಭೀಕರತೆಯನ್ನು ಚಿತ್ರಿಸುತ್ತವೆ. ಅಲ್ಲಿ ಒಂದು ಕೊಳ ಇದೆ. ಹಳ್ಳ ಅಡಗಿ ಹರಿಯುತ್ತದೆ. ತುಡುಗು ದನ ತೊಂಡು ಮೇಯುತ್ತಿದೆ. ಅಲ್ಲಿ ತಪ್ಪಿಹೊಕ್ಕರೆ ಕಕ್ಕಾಪಿಕ್ಕಿಯಾಗಿ ದಿಕ್ಕು ತಪ್ಪುತಾರ. ಅಲ್ಲಿ ಜೋಡಿ ಗೂಗಿಗಳಿವೆ. ಅವು ಹಗಲನ್ನೇ ಇರುಳೆಂದು ಭ್ರಮಿಸಿ ಕೂಗತಾವ. ಇದಕ್ಕೆ ಜೋಗಿ ತೋರಿಸುವ ಪರಿಹಾರ ಒಂದು: ಈ ಮಸಣವಾಡಿಯ ಕೊಳ್ಳದಲ್ಲಿಯೇ ವಾಸಮಾಡುವದು. ಆದರೆ ಜೀವಕ್ಕೆ ತಟ್ಟನೆ ಅಲ್ಲಿ ಹೋಗಲು ಸಾಧ್ಯವಿಲ್ಲ, ಭಯ ಹಿಂದೆ ಎಳೆಯುತ್ತದೆ. ದಿನದಿನದ ಅಭ್ಯಾಸ ಅದಕ್ಕಾಗಿ ಮಾಡಬೇಕು. ಅದಕ್ಕಾಗಿ ಜೋಗಿಯ ಶಿಷ್ಯನಾಗಬೇಕು. ಜೋಗಿಯಿಂದ ದೀಕ್ಷಿತನಾಗಬೇಕು.

ಎರಡನೆಯ ಭಾಗದಲ್ಲಿ ಇರುವ ಚಿತ್ರವೇ ತುಂಬ ಬೇರೆ. ಮೊದಲನೆಯ ಚಿತ್ರಕ್ಕೆ ವಿರೋಧವಾಗಿ ಎರಡನೆಯ ಚಿತ್ರ ಇದೆ. ಈ ತೋಪಿನಲ್ಲಿ ಹೇಗೋ ಮೂಲೆಯಲ್ಲಿ ತಪ್ಪಿ ಮಾವು ಬೆಳೆದಿದೆ. ಅದರ ಅಡಿಗೆ ಒಂದು ಹುತ್ತ ಇದೆ. ಅದರಲ್ಲಿ ಒಂದು ಏಳು ಹೆಡೆಯ ಹಾವು ಇದೆ. ಸುಗ್ಗಿಯಲ್ಲಿ ಆ

ಹೂವಿನಲ್ಲಿ ಒಂದು ಕೋಗಿಲೆ ಬಂದಿದೆ. ಅದು ನನ್ನ ಜೊತೆಗೆ ಬಾ ಎಂದು ಕರೆಯುತ್ತಿದೆ. ಗಿರಣಿ ಕರೆಯುವಹಂಗ ಕೂಗೇಕೂಗತದ. ತಿಳಿಯದ ಯಾವುದೋ ಕಂಪು ಎಳೆಯುತ್ತದೆ. ತುಂಬ ಹುಚ್ಚು ಆಗಿ ಎಚ್ಚರಿಲ್ಲದೆ ದಿಕ್ಕು ತೋರದಾಗಿ ಎತ್ತೋ ತಿರುಗುತ್ತದೆ. ಬಂತು ಸುಗ್ಗಿ. ಬಂದದ ಸುಗ್ಗಿ. ಭರತದ ಸುಗ್ಗಿ ಎಂದು ಅದು ಸಾರುತ್ತಿದೆ. ಕೋಗಿಲೆ ತಾರಪಂಚಮದಲ್ಲಿ ಕೂಗುತ್ತಿದೆ. ತೋಟದಲ್ಲೆಲ್ಲ ಹೂವಾಗಿ ನಿಂತಿದೆ. ಟೊಂಗೆಲ್ಲ ಗೊಂಚಲಾಗಿದೆ. ಅದರ ಲಯಕೆ ತೂಗಿ ಪಾಡು ಆಗುತ್ತದೆ. ಹಣ್ಣು ಆಗುತ್ತದೆ. ಮೇಲೆ ಒಂದು ಪದ್ಯದಲ್ಲಿ ಗಿರಣಿ ಕರೆದ ಹಾಂಗ ಕೂಗಿಲೆ ಕೂಗಿದರೆ ಈಗ ಅದು ಕೊಳಲ ನುಡಿಸಿಧಾಂಗ ಕುಹುಕುಹೂ ಉಲಿಯುತ್ತದೆ. ಜೀವದ ಅವಸ್ಥೆಯಲ್ಲಿ ವಿಕಾಸವಾದುದನ್ನು ಇದು ಸೂಚಿಸುತ್ತದೆ. ಜೋಗಿಯ ಬಂಧನದಲ್ಲಿ ಸಿಕ್ಕ ಜೀವ ಬಂಧನದಿಂದ ಬಿಡುಗಡೆ ಹೊಂದಿ ಮಾಮರದ ತೋಪಿಗೆ ಹೋಗಿ ಧೈರ್ಯ ಮಾಡುತ್ತಿಲ್ಲ. ಜೋಗಿಯನ್ನು ಅದು ಕರೆಯುತ್ತಿದೆ. ನೀನೆ ಹೇಳಿದ ನಾಮ ಜಪಿಸುವಾಗ ಬಂತೋ ಸುಗ್ಗಿ ಸಂಧಿ ಆದರೆ ಇದು ಜೋಗಿಯು ಅನುಗ್ರಹಿಸಿದ ನಾಮಜಪದ ಫಲವಲ್ಲ. ಏಕೋ ಏನೋ ಅದಕ್ಕೆ (ಜೀವಕ್ಕೆ) ಇದರ ದರ್ಶನವಾಗಿದೆ. ಆದರೆ ಈ ಸುಗ್ಗಿ ಹೊರಗಿನ ಸುಗ್ಗಿಯಲ್ಲ. ತಲೆಯ ಯಾವುದೋ ನಾಡಿಯೊಳಗೆ ಸುಗ್ಗಿ ಸೊಲ್ಲು ಸುರುವಾಗಿದೆ. ಈಗ ಮೂಲೆಮೂಲೆಯಲ್ಲಿಯೂ ಅದೇ ಕೂಗಿದೆ. ಕೋಗಿಲೆಯ ಕರೆ ಅವ್ಯಾಹತವಾಗಿದೆ. ಹಗಲು ಇರುಳು ಎನ್ನದೆ ಓಂ ಕುಹೂ ಎಂದು ಜೋಗಿ ಕೊಟ್ಟ ನಾಮಜಪದ ನಡುವೆಯೇ ಅದು ಧ್ವನಿಸುತ್ತದೆ. ಕನಸಿನಲ್ಲಿ ಆ ಸ್ವರವನ್ನು ಕೇಳಿ ನಾನು ಮಾಮರ ಆಗುತ್ತೇನೆ ಎಂಬ ಭ್ರಮೆಯಾಗುತ್ತದೆ. ಆಗ ನೀನು ನನ್ನ ಮನಕೆ ಬಂದೆ. ಜೋಗಿ ಪ್ರತ್ಯಕ್ಷವಾಗಿ ಬರುವುದಿಲ್ಲ ಆ ಕವನದಲ್ಲಿ. ಇಷ್ಟೆಲ್ಲ ಎಳೆತವಿದ್ದರೂ ಹಳೆಯ ಪರಂಪರೆಯನ್ನು ಬಿಡುವುದಕ್ಕೂ ಭಯ. ಆ ದಾರಿಯಲ್ಲಿ ನಡೆಯುವುದಕ್ಕೂ ಭಯ. ಹೊಸದು ಅಂತಃಕರಣವನ್ನು ಸೆಳೆಯುತ್ತದೆ. ಆದರೆ ಯಾವುದೋ ಒಂದು ಆತಂಕ ತಡೆಯುತ್ತದೆ. ಇದು ಯಾವ ಸ್ವರ ಇದು ಯಾವ ಕೋಗಿಲೆ ಇದು ಯಾವ ಮರ ಎಂಬ ಭಯವಿದೆ. ಹೋಗಿ ನೋಡುವ ಆಸೆಯಿದೆ. ಆದರೆ ಹೋಗಿ ನೋಡಲು ಜೋಗಿಯ ಅಪ್ಪಣೆಯನ್ನು ಕೇಳುತ್ತಿದ್ದಾನೆ. ಕೊನೆಯ ಎರಡು ಸಾಲು ಜೀವದ ತೊಳಲಾಟ ಮುಗಿದು ಹೊಸ ದಾರಿಯಲ್ಲಿ ಸಾಗುವ ಸಮಯ ಬರುತ್ತದೆ ಎಂಬುದನ್ನು ಧ್ವನಿಸುತ್ತದೆ. ಆ ಕೋಗಿಲೆಗೆ ಓಗೊಟ್ಟು ಸುತ್ತ ಗುಡ್ಡ ನುಗ್ಗಾಗಿ ಹೋದವು. ಈಗ ಗುಡ್ಡಗಳ ಮರುದನಿ ನಿಂತಿದೆ. ಬಿಸಿಲು ಕುಣಿದು ಬೆವತದ ಈಗ ಬಂದದ ಮಳಿಯ ಹದಕ ಜೀವ ಹೊಸದಾರಿಯನ್ನು ತುಳಿಯುವ ಸಿದ್ಧತೆಯನ್ನು ಮಾಡಿಕೊಳ್ಳುತ್ತಿದೆ.

ಜೋಗಿ ಕವಿತೆಯನ್ನು ಕುರಿತು ಮಾತನಾಡುವಾಗ ಶ್ರೀಅರವಿಂದರ ಪೂರ್ಣಯೋಗವನ್ನು ಕುರಿತು ಹೇಳಿದೆ. ಆದರೆ ಕವಿತೆ ನೀಡುವ ಅನುಭವವನ್ನು ಪಡೆಯಬೇಕಾದರೆ ಪೂರ್ಣಯೋಗವನ್ನು ಕುರಿತು ತಿಳಿವಳಿಕೆ ಅವಶ್ಯಕತೆಯಿಲ್ಲ. ಕವಿತೆ ತನ್ನಷ್ಟಕ್ಕೆ ತಾನೆ ಸಮರ್ಥವಾಗಿರುತ್ತದೆ. ತಾನು ಇದ್ದ ಸ್ಥಿತಿ ಸರಿಯಾದುದು ಅಲ್ಲ. ಅದರಲ್ಲಿ ಕೊರತೆಗಳಿವೆ. ಇದರ ಅರಿವು ಆಗಬೇಕಾದರೆ ಯಾವ ಹೊರಗಿನ ಸಂಗತಿಯೂ ಬೇಕಾಗಿಲ್ಲ. ಅದಕ್ಕೆ ಒಂದು ದಾರಿ ಸಿಕ್ಕುತ್ತದೆ. ಆ ದಾರಿ ಪರಂಪರೆಯಿಂದ ಬಂದಿದೆ. ಮುಂದೆ ಸಾಗಿದಂತೆ ಅದರಲ್ಲಿಯ ಕೊರತೆಗಳು ಗೊತ್ತಾದಾಗ ಬೇರೆ ಯಾವುದೋ ಒಂದು ಗೋಚರವಾಗುತ್ತದೆ. ಅದು ಮನಸ್ಸನ್ನು ಸೆಳೆಯುತ್ತದೆ. ಇದ್ದುದನ್ನು ಬಿಟ್ಟು ಅಲ್ಲಿ ಹೋಗಬೇಕು ಎಂಬ ಅರಿವು ಮೂಡುತ್ತದೆ. ಆದರೆ ಹೆದರಿಕೆ, ಸಂಶಯ, ಕಳವಳ ತೊಡಕಾಗುತ್ತವೆ. ಇಂತಹ ಚಿತ್ರ ಜೋಗಿ ಕವಿತೆಯಲ್ಲಿದೆ. ಜೋಗಿ ಕವಿತೆಯಲ್ಲಿ ಯಾವ ತತ್ತ್ವಜ್ಞಾನವೂ ಇಲ್ಲ. ಅದು ಸರಿ

ತಪ್ಪು ಎಂಬ ವಾದ ಇಲ್ಲಿ ಏಳುವುದಿಲ್ಲ. ಸಮೀಕ್ಷೆಯನ್ನು ಓದುವಾಗ ರವೀಂದ್ರರ ಒಂದು ಮಾತು ನೆನಪಾಗುತ್ತದೆ. ಒಡೆಯಾ ನೀನು ಆಡುವ ಮಾತು ನನ್ನ ಮನಸ್ಸಿಗೆ ನೇರವಾಗಿ ಮುಟ್ಟುತ್ತದೆ. ನಿನ್ನ ಮಾತುಗಳನ್ನು ಹೇಳಿ, ಅವುಗಳ ಅರ್ಥವನ್ನು ಹೇಳುವವರ ಮಾತು ನನಗೆ ಅರ್ಥವಾಗುವುದಿಲ್ಲ. ನಾನು ಗೊಂದಲದಲ್ಲಿ ಬೀಳುತ್ತೇನೆ. ಈ ಮಾತು ಕವಿತೆಗೆ ಅನ್ವಯಿಸುತ್ತದೆ. ಕವಿಯ ಮಾತು ಸುಲಭವಾಗಿ ಹೃದಯಗಮ್ಯವಾಗುತ್ತದೆ. ಅದರ ಅರ್ಥವನ್ನು ವಿವರಿಸುವವರ ಮಾತು ಗೊಂದಲವನ್ನುಂಟುಮಾಡುತ್ತದೆ.

ಈ ಬರಹದಲ್ಲಿ ಇನ್ನೊಬ್ಬರ ಅಭಿಪ್ರಾಯಗಳನ್ನು ಹೇಳಿ ಸಮರ್ಥಿಸುವ ಇಲ್ಲವೆ ನಿರಾಕರಿಸುವ ಅವಶ್ಯಕತೆ ಇಲ್ಲ ಎಂದು ಹೇಳಿದ್ದೆ. ಆದರೆ ಅಧಿಕಾರವಾಣಿಯಿಂದ ಹೇಳಿದ ಮಾತು ಸಹೃದಯರ ಮನಸ್ಸಿನ ಮೇಲೆ ಪರಿಣಾಮ ಬೀರಿರುತ್ತದೆ. ಆ ವಾಣಿಗೆ ವಿರೋಧವಾಗಿ ಬಂದ ಮಾತು ಅನಧಿಕೃತ ಎನ್ನಿಸುತ್ತದೆ. ಅದರ ಮೇಲೆ ಯಾವ ಟಿಪ್ಪಣಿಯನ್ನು ಬರೆಯದೆ ಅದನ್ನು ಉದ್ಧರಿಸುತ್ತೇನೆ. ಸಹೃದಯರು ಕವಿತೆಯನ್ನೇ ಆಧರಿಸಿ ತಮ್ಮ ಅನುಭವವನ್ನು ಪ್ರಮಾಣೀಕರಿಸಬೇಕು. ಕೊನೆಯ ಎರಡು ಸಾಲುಗಳಲ್ಲಿಯ ಮಾಂತ್ರಿಕ ಲಯ, ಕೋಗಿಲೆಯ ದನಿಯಲ್ಲಿಯ ಏಕತಾನವನ್ನು ಹಟಮಾರಿತವನ್ನು ಸರಿಯಾಗಿ ಪಡೆನುಡಿಯುತ್ತವೆ... ಕೋಗಿಲೆಯ ದನಿ ಮರುಳುಗೊಳಿಸುತ್ತದೆ. ವೃಕ್ಷಜಗತ್ತಿನ ಮೇಲೆ ಕೋಗಿಲೆಯ ದನಿಯ ಪ್ರಭಾವ ಸ್ಪಷ್ಟವಾಗಿರುವಾಗ ಅದನ್ನು ಕಾಣದೆ ಮನಸ್ಸಿಗೆ ತೃಪ್ತಿಯಿಲ್ಲ. ಹೀಗೆ ಕೋಗಿಲೆ ಅದೃಷ್ಟಶಕ್ತಿಯ ಸಂಕೇತವಾಗುತ್ತದೆ. ಈ ಸಂಗತಿ ಆಕರ್ಷಕವಾಗಿದ್ದಷ್ಟು ಭಯಾನಕವೂ ಆಗಿದೆ ಕವಿತೆಯ ಆಶಯ ಹೀಗೆ ಇಲ್ಲ. ಕೋಗಿಲೆಯ ದನಿ ಭಯವನ್ನು ಹುಟ್ಟಿಸುವದಿಲ್ಲ. ಸಂಶಯವನ್ನು ಹುಟ್ಟಿಸುತ್ತದೆ. ಅದು ಮರುಳುಗೊಳಿಸುವುದಿಲ್ಲ, ಎಚ್ಚರಿಸುತ್ತದೆ. ಆದುದರಿಂದ ಕವಿತೆ ನೀಡುವ ಅನುಭವವನ್ನು ಮಾತ್ರ ಸ್ವೀಕರಿಸಲು ಮನಸ್ಸು ಮಾಡಬೇಕು.

ಎಷ್ಟೋ ಸಲ ಅಧ್ಯಯನದ ಕೊರತೆಯಿಂದ ಹಲವು ಸಲ ವಿದ್ವಾಂಸರು ಈ ಬೀಸು ಹೇಳಿಕೆಗಳನ್ನು ನೀಡುತ್ತಾರೆ. ಅವರ ಹೇಳಿಕೆಗಳಿಗೆ ಅವರ ವ್ಯಕ್ತಿತ್ವದ ಪ್ರಭಾವಳಿಯ ಕವಚವಿರುತ್ತದೆ. ಭೂಮಿ ಹಾಗೂ ಪಕೃತಿಯನ್ನು ಕುರಿತು ಬೇಂದ್ರೆಯವರ ವಿಚಾರಗಳಲ್ಲಿ ಎರಡು ವಿಭಿನ್ನ ಉದಾಹರಣೆಗಳಿವೆ. ಮೊದಲನೆಯದು ಚರಿತ್ರೆಯ ದಿವ್ಯವಿಕಾಸದ ಪರಿಕಲ್ಪನೆಯನ್ನು ಒಪ್ಪಿಕೊಂಡು ಇತಿಹಾಸದ ಚಕ್ರಗತಿ ಸಿದ್ಧಾಂತಕ್ಕೆ ವಿದಾಯ ಹೇಳಿದ ನಿಲುವುಗಳ ಫಲವಾದ ಧಾರೆ. ಇದು ಡಾರ್ವಿನ್ನನನ್ನು ಒಪ್ಪಿಕೊಂಡ ಅರವಿಂದರ ವಿಚಾರಗಳ ಕಾವ್ಯರೂಪ. ಮುಖ್ಯವಾಗಿ ಈ ವಿದ್ವಾಂಸರು ಅರವಿಂದರನ್ನು ತಪ್ಪಾಗಿ ಅರ್ಥೈಸಿದ್ದಾರೆ. ಅರವಿಂದರು ಡಾರ್ವಿನ್ನನನ್ನು ಒಪ್ಪಿಕೊಂಡಿಲ್ಲ. ವಿಕಾಸವಾದದಲ್ಲಿ ಎರಡು ಕವಲುಗಳಿವೆ. ಒಂದು ಮೆಕಾನಿಸ್ಟಿಕ್, ಇನ್ನೊಂದು ಫೆಟಾಲಿಸ್ಟಿಕ್.

Bergson ಡಾರ್ವಿನ್ನನ ವಿಕಾಸವಾದವನ್ನು ಖಂಡಿಸಿ ಕ್ರಿಯೇಟಿವ್ ಎವಲ್ಯೂಷನ್‌ನನ್ನು ಪ್ರತಿಪಾದಿಸಿದ. George Bernard shaw ಇದನ್ನು ಪ್ರತಿಪಾದಿಸಿ back to Methuselah ಎಂಬ ದೀರ್ಘನಾಟಕವನ್ನು ಬರೆದ. ಶ್ರೀಅರವಿಂದರ ವಿಕಾಸವಾದವು ಡಾರ್ವಿನ್‌ನ ವಿಕಾಸವಾದವಲ್ಲ. ಬೇಂದ್ರೆಯವರ ನಿಜವಾದ ಕವಿತೆಗಳಲ್ಲಿ ಅವರ ವಿಚಾರಗಳು ವ್ಯಕ್ತವಾಗಿಲ್ಲ. ಒಂದು ರೀತಿಯಿಂದ ಅವುಗಳಲ್ಲಿ ಮೈದಳೆದದ್ದು ವ್ಯಕ್ತಿ ನಿರಪೇಕ್ಷವಾದ ಸಂವೇದನೆ ಮಾತ್ರ. ಎರಡನೆಯ ವಿಚಾರಧಾರೆ ಸಂದೇಹವಾದಿಯ ದೃಷ್ಟಿಕೋನ. ಒಂದು ರೀತಿಯಿಂದ ಕಾವ್ಯಾಸ್ವಾದಕ್ಕೆ ಈ ಯಾವ ಸಿದ್ಧಾಂತಗಳ ಅವಶ್ಯಕತೆಯೂ ಇಲ್ಲ.

ಕುರುಡು ಕಾಂಚಾಣಾ

ಕುರುಡು ಕಾಂಚಾಣಾ ಕುಣಿಯುತಲಿತ್ತು ।
ಕಾಲಿಗೆ ಬಿದ್ದವರ ತುಳಿಯುತಲಿತ್ತೋ॥
ಕುರುಡು ಕಾಂಚಾಣಾ ॥ಪಲ್ಲವಿ॥

೧

ಬಾಣಂತಿಯೆಲುಬ ಸಾ-
ಬಾಣದ ಬಿಳುಪಿನಾ
ಕಾಣದ ಕಿರುಗೆಜ್ಜೆ ಕಾಲಾಗ ಇತ್ತೋ;
ಸಣ್ಣ ಕಂದಮ್ಮಗಳ
ಕಣ್ಣೀನ ಕವಡೀಯ
ತಣ್ಣನ್ನ ಜೋಮಾಲೆ ಕೊರಳೊಳಗಿತ್ತೋ;

೨

ಬಡವರ ಒಡಲಿನ
ಬಡಬಾನಲದಲ್ಲಿ
ಸುಡು ಸುಡು ಪಂಜು ಕೈಯೊಳಗಿತ್ತೋ;
ಕಂಬನಿ ಕುಡಿಯುವ
ಹುಂಬ ಬಾಯಿಲೆ ಮೈ-
ದುಂಬಿದಂತುಧೊ ಉಧೊ ಎನ್ನುತಲಿತ್ತೋ

೩

ಕೂಲಿ ಕುಂಬಳಿಯವರ
ಪಾಲಿನ ಮೈದೊಗಲ
ಧೂಳಿಯ ಭಂಡಾರ ಹಣೆಯೊಳಗಿತ್ತೋ;
ಗುಡಿಯೊಳಗ ಗಣಣ, ಮಾ-
ಹಡಿಯೊಳಗ ತನನ, ಅಂ-
ಗಡಿಯೊಳಗ ಝಣಣಣ ನುಡಿಗೊಡುತಿತ್ತೊ

೪

ಹ್ಯಾಂಗಾರೆ ಕುಣಿಕುಣಿದು
ಮಂಗಾಟ ನಡೆದಾಗ
ಅಂಗಾತ ಬಿತ್ತೋ, ಹೆಗಲಲಿ ಎತ್ತೋ

–ನಾದಲೀಲೆ: ೨೪/ ರಚನೆ: ೧೯೩೨/ ಪ್ರ: ೧೯೩೮

ಕುರುಡು ಕಾಂಚಾಣವನ್ನು ಕುರಿತು ಹೇಳುವಾಗ ಮೊದಲು ಒಂದು ಸಂಗತಿಯನ್ನು ಹೇಳುತ್ತೇನೆ. ನನಗೆ ಮುದ್ದಣನ ರಾಮಾಶ್ವಮೇಧ ಪಠ್ಯವಾಗಿತ್ತು. ಬೇಂದ್ರೆಯವರು ಅದರಲ್ಲಿಯ ಒಂದು ಸನ್ನಿವೇಶದ ಎರಡು ಮೂರು ಸಾಲುಗಳನ್ನು ನನಗೆ ಓದಲು ಹೇಳಿದರು. ನಾನು ಅದನ್ನು ಓದಿದೆ. ಬೇಂದ್ರೆಯವರು ಭಾವಾವಿಷ್ಟರಾಗಿ ಮಹಾಭಾರತ, ರಾಮಾಯಣ ಮೊದಲಾದ ಹಲವಾರು ಕಾವ್ಯಗಳನ್ನು, ಉದಾಹರಣೆಗಳನ್ನು ಕೊಟ್ಟು ಕೊಟ್ಟು ಹೇಳುತ್ತಿದ್ದರು. ಅದು ಮುಗಿದ ಮೇಲೆ ನನ್ನ ಬಾಯಿಂದ ಒಂದು ಪ್ರಶ್ನೆ ಬಂತು: ರಾಮರಾಜ್ಯದಲ್ಲಿ ದೀನರಿಗೆ, ನಿರ್ಗತಿಕರಿಗೆ, ಭಿಕ್ಷುಕರಿಗೆ ದಾನಿಗಳು ಕದನ್ನವನ್ನು ನೀಡುತ್ತಿದ್ದಿಲ್ಲ, ಪಂಚಪಕ್ವಾನ್ನಗಳನ್ನು ನೀಡುತ್ತಿದ್ದರು. ಇದು ಸಂತೋಷದ ಸಂಗತಿಯಲ್ಲ. ದೀನರು, ನಿರ್ಗತಿಕರು, ಭಿಕ್ಷುಕರು ಇದ್ದರಲ್ಲ ಇದು ಎಂತಹ ರಾಮರಾಜ್ಯ? ಇದು ಬೇಂದ್ರೆಯವರ ಪ್ರಶ್ನೆಯೂ ಆಗಿತ್ತು. ಇದು ಒಬ್ಬರ ಇಬ್ಬರ ಪ್ರಶ್ನೆಯಲ್ಲ, ಎಲ್ಲರ ಪ್ರಶ್ನೆಯೂ ಆಗಿದೆ. ಈ ಸಾರ್ವಕಾಲಿಕ ಸರ್ವರ ಪ್ರಶ್ನೆಗೆ ಉತ್ತರ ಇನ್ನೂ ದೊರಕಿಲ್ಲ. ನಮ್ಮಿಬ್ಬರ ನಡುವೆ, ಅನಾದಿಕಾಲದಿಂದ ನಡೆದು ಬಂದ ಈ ಪ್ರಶ್ನೆಯನ್ನು ಬಿಡಿಸಲು ನಡೆಸಿದ ಪ್ರಯತ್ನಗಳ ಫಲಶ್ರುತಿಯ ಪರಿಗಣನೆಯೂ ಆಯಿತು. ಆಮೇಲೆ ಅವರ ಕುರುಡು ಕಾಂಚಾಣ, ಅನ್ನಯಜ್ಞ, ತುತ್ತಿನಚೀಲ ಮೊದಲಾದ ಕವಿತೆಗಳನ್ನು ಕುರಿತು ಮಾತನಾಡಿದರು.

ನಾನು ಅವರಿಗೆ ಸ್ಪಷ್ಟಪಡಿಸಿದೆ: ದೇವರದೊಂದು ಗೋರಿಯ ಕಟ್ಟಿ, ಧರ್ಮದ ಧೂಪಕೆ ಬೆಂಕಿಯನಿಟ್ಟು, ಪಾಗದ ಗಂಟೆಯ ಗಣಗಣ ಬಾರಿಸು ಈ ನಿಲುವಿಗೂ 'ಕುರುಡು ಕಾಂಚಾಣ' ದಲ್ಲಿಯ ನಿಲುವಿಗೂ ಇರುವ ವ್ಯತ್ಯಾಸವನ್ನು ಎತ್ತಿ ತೋರಿಸಿದೆ. ಕಾಂಚಾಣಕ್ಕೆ ಕಣ್ಣಿಲ್ಲ, ಇದೇ ನಿಜ ಅಂದರೆ ಕಾಂಚಾಣವುಳ್ಳವರಿಗೆ ಕಣ್ಣು ಬರಬೇಕಾಗಿದೆ. ಈ ಹೊಸದೃಷ್ಟಿ ಬರುವವರೆಗೆ ಕಾಂಚಾಣದ ಕಾಲಿಗೆ ಬೀಳುವವರ ಸಂಖ್ಯೆಯೂ ಕಡಿಮೆಯಾಗುವುದಿಲ್ಲ. ಅದು ತನ್ನ ಕುರುಡುತನದಲ್ಲಿ ತುಳಿಯುವ ಕೃತ್ಯವನ್ನು ನಿಲ್ಲಿಸುವುದಿಲ್ಲ. ಬೇಂದ್ರೆಯವರ ದರ್ಶನವು ಶ್ರೀಮಂತರ ಹೃದಯಪರಿವರ್ತನೆಯ ನೆಲೆಯಲ್ಲಿ ನಿಲ್ಲುತ್ತದೆಯೇ ಹೊರತು ಅವರ ಸರ್ವನಾಶದ ನೆಲೆಯಲ್ಲಿ ಅಲ್ಲ (ಈ ವಿಷಯದಲ್ಲಿ ನಾನು ಒಂದು ಸಂಗತಿಯತ್ತ ಗಮನ ಸೆಳೆಯುತ್ತೇನೆ.) ಕುರುಡು ಕಾಂಚಾಣ ವ್ಯಾಖ್ಯಾನರಹಿತವಾದ ಒಂದು ಪ್ರತಿಮೆ. ಗೊಂದಲಿಗನ ವೇಷಭೂಷಣಗಳ ವಿವರಗಳಿಗೆ ಸಂವಾದಿಯಾಗಿ ಒದಗಿಬಂದಿರುವ ರೂಪಕಗಳೆಲ್ಲವೂ ಗೊಂದಲಿಗನ ಮೂಲ ಪ್ರತಿಮೆಯ ಅನಿವಾರ್ಯ ಅಂಗಗಳು. ಲಾವಣಿಗೆ ಸಹಜವಾದ ಕಥನದ ಧಾಟಿ ಈ ಪ್ರತಿಮಾತ್ಮಕತೆಯನ್ನು ಮರೆಮಾಡುತ್ತದೆ. ಗುಡಿ, ಮಹಡಿ, ಅಂಗಡಿಗಳಲ್ಲಿ ಮೆರೆಯುವ ಕಾಂಚಾಣವನ್ನು ವರ್ಣಿಸುವ ವಿವರಗಳು ಇಡೀ ಕವಿತೆಯನ್ನು ಕೇಂದ್ರ ಪ್ರತಿಮೆಯಿಂದ ವಿಘಟಿತ ಮಾಡುತ್ತವೆ. ತನ್ನಕ್ಕಷ್ಟೆ ತಾನು ಅದ್ಭುತವಾಗಿರುವ ಈ ನುಡಿ ಗೊಂದಲಿಗನ ಪ್ರತಿಮೆಯೊಂದಿಗೆ ಬೆರೆಯದೆ ದೂರ ನಿಲ್ಲುತ್ತದೆ. ಆದ್ದರಿಂದಲೇ ವಸ್ತು ಅದ್ಭುತವೆನಿಸಿದರೂ ಕಲಾತ್ಮಕವಾಗಿ ಅಂತಹ ಗೆಲುವೆಂದು ತೋರುವುದಿಲ್ಲ.

ಈ ಗೊಂದಲ ಉಂಟಾದುದು ಕವಿತೆಗೆ ಕವಿ ನೀಡಿದ ಭಾವಸಂದರ್ಭಸೂಚಿಯಿಂದ. ಇದನ್ನು ಸಮೀಕ್ಷಕರು ಒಪ್ಪಿಕೊಳ್ಳುತ್ತಾರೆ, ಸ್ಪಷ್ಟಪಡಿಸುತ್ತಾರೆ. ಕವಿತೆಯ ರಸಗ್ರಹಣಕ್ಕೆ ಅನಿವಾರ್ಯವಂತವೇನೂ ಅಲ್ಲದ ಭಾವಸಂದರ್ಭಸೂಚನೆಯನ್ನು ಗಮನಿಸದೆ ಹೋದರೆ ಈ ಪ್ರತಿಮೆಯು ಹೆಚ್ಚು ಸಮರ್ಪಕವಾಗುತ್ತದೆ. ಮನುಷ್ಯ ಸ್ವಭಾವದ ಉನ್ನತೀಕರಣ ಹಾಗೂ ತತ್ಪರಿಣಾಮವಾದ ಹೃದಯಪರಿವರ್ತನೆಯಲ್ಲಿ ಬೇಂದ್ರೆ ಕವಿತೆಗೆ ಇರುವ ಅಚಲವಾದ ನಂಬಿಕೆ

ಅವರ ಪರಮಪ್ರಿಯ ನಾಯಕರಾದ ಗಾಂಧೀಜಿಯವರ ಆರ್ಥಿಕ ಚಿಂತನೆ ಕೂಡ ಈ ರೀತಿಯ ಆಶಾವಾದದಿಂದಲೇ ಪ್ರತೀತವಾಗಿತ್ತು. ಆದ್ದರಿಂದಲೇ ಬೇಂದ್ರೆಯವರ ಕವಿತೆಯು ಕಾಲ ಕಳೆದಂತೆ ಸಾಮಾಜಿಕ ಅಸಮತೆಯನ್ನು ಒಂದು ಕಾವ್ಯವಸ್ತುವಾಗಿ ಕಂಡಿತೆ ವಿನಾ ನಿಶ್ಚಿತವಾದ ಆಲೋಚನೆಗೆ ವಸ್ತುವಾಗಿಸಲಿಲ್ಲ. ಬೇಂದ್ರೆಯವರ ಸಾಮಾಜಿಕ ಕವಿತೆಗಳು ಸರಳವಾಗಿರುವದನ್ನು ಗಮನಿಸುತ್ತೇವೆ. ಕವಿತೆಯನ್ನು ಒಂದು ಆರ್ಥಿಕ ನೆಲೆಯಲ್ಲಿ ಕಟ್ಟಿಹಾಕುವುದೆಂದರೆ ಅದನ್ನು ಸಂವೃತಗೊಳಿಸಿದ ಹಾಗೆ. ಆದ್ದರಿಂದ ಅರ್ಥದ ಸಂದಿಗ್ಧತೆ ಬಹುಮುಖಿ ವ್ಯಾಖ್ಯಾನಗಳಿಗೆ ದಾರಿ ಮಾಡಿಕೊಡುವ ಸಾಧನವಾಗುತ್ತದೆ. ಆ ಬಗೆಯ ಕವಿತೆಗಳ ರಚನೆಯಲ್ಲಿ ಬೇಂದ್ರೆಯವರು ತಮ್ಮ ಕವಿತೆಗೆ ಸಹಜವಾದ ಸಂಕೀರ್ಣತೆಯನ್ನು ಕುಂದಿಸುವ ರಾಜಿ ಮಾಡಿಕೊಂಡರೆಂದೇ ಹೇಳಬೇಕು. ಅವುಗಳ ಹಿಂದೆ ಕೆಲಸ ಮಾಡಿರುವ ಬೌದ್ಧಿಕತೆಯು ಅದರ ಮೂರ್ತ ಚಿತ್ರಣದಲ್ಲಿ ಇಸ್ಲಿಲ್ಲವೆಂದಷ್ಟು ಯಶಸ್ವಿಯಾದರೂ ಆ ಮಾತಿನ ನಿಜವಾದ ಅರ್ಥದಲ್ಲಿ ಪ್ರಗತಿಪರವಿರಲಿಲ್ಲ. ಅವರ ಕವಿತೆಗಳು ಸಾಮಾಜಿಕ ಚಳವಳಿಯೊಂದರ ಉಪಕರಣಗಳಾಗಬಹುದೆ ಹೊರತು ಪ್ರಣಾಳಿಕೆಗಳಾಗಲಾರವು.

ಈ ಎಲ್ಲ ವಿಚಾರಗಳು ಕವಿಯ ಮೇಲೆ ಅವನದಲ್ಲದ ಹೊಣೆಯನ್ನು ಹೇರುತ್ತದೆ. ಕವಿತೆಯು ಒದು ಶೂನ್ಯದಲ್ಲಿ ನಡೆಯುವುದಿಲ್ಲ. ಓದುಗರಲ್ಲಿ ಮೂಡಿಸಬಹುದಾದ ತಿಳುವಳಿಕೆಯು ಸ್ವತಃ ಕವಿಯದೇ ನಿಲುವುಗಳಿಂದ ಭಿನ್ನವಾಗಬಹುದು. ಪ್ರತಿಯೊಂದು ವರ್ಗದ ಓದುಗನೂ ತನ್ನದೇ ಆದ ಹಿನ್ನೆಲೆಯನ್ನು ಕವಿತೆಯ ಅನುಸಂಧಾನಕ್ಕೆ ಬಳಸಿಕೊಂಡು ಹೊಸ ಹೊಸ ವ್ಯಾಖ್ಯಾನಗಳನ್ನು ರೂಪಿಸಿಕೊಳ್ಳುತ್ತಾನೆ. ಇಂತಹ ಹೃದಯಪರಿವರ್ತನೆ ಯಾವುದೆ ಒತ್ತಾಯವಿಲ್ಲದೆ ಅಥವಾ ಸಾಮಾಜಿಕ ಸಂಗತಿಗಳ ಒತ್ತಡವಿದ್ದರೂ ಕೇವಲ ಹಿರಿಯರ ಉಪದೇಶದ ಬಲದಿಂದಲೇ ನಡೆಯ ಬಹುದೆಂಬ ಭರವಸೆಯು ಸಮಾಜವನ್ನು ಕುರಿತು ಕಿರಿಯಾಳದ ತಿಳುವಳಿಕೆಯಿಂದ ಬಂದಿರುತ್ತದೆ. ಅಲ್ಲದೆ ಅವರ ಧಾರ್ಮಿಕವಾದ ನಂಬಿಕೆಗಳಿಂದ ಮೂಡಬಹುದಾದ ಕರ್ಮಸಿದ್ಧಾಂತದ ಬಗೆಗಿನ ಒಲವು ಬಡತನದ ಕಾರಣ ಮೀಮಾಂಸೆಯನ್ನು ಕುಂದುಗೊಳಿಸಿದೆ.

ಈ ವಿಷಯದಲ್ಲಿ ಸ್ಪಷ್ಟಪಡಿಸಬಹುದಾದ ಒಂದೆರಡು ಸಂಗತಿಗಳಿವೆ. ಜೆ.ಎಸ್. ಮಿಲ್‌ನಿಂದ ಪ್ರಾರಂಭ ಮಾಡಿಕೊಂಡು ಜೇ ಕೃಷ್ಣಮೂರ್ತಿ ಹಾಗೂ ಗಾಂಧೀಜಿಯವರಿಗೆ ಎಲ್ಲರೂ ಕೊನೆಗೆ ಮುಟ್ಟಿದ ನೆಲೆಯೆಂದರೆ ಹೃದಯಪರಿವರ್ತನೆಯನ್ನು ಬಿಟ್ಟರೆ ಬೇರೆ ದಾರಿ ಇಲ್ಲವೆಂಬುದೆ.I am a socialist not because I think it is a perfect system, but half a loaf is better than no bread. The other systems have been tried and found wanting. Let this one be tried-if for nothing else for the novelty of the thing.' ವಿವೇಕಾನಂದರ ಬಾಯಿಂದ ಬಂದ ಈ ಮಾತು ವಿಸ್ಮಯಕರವಾಗಿದೆ. "Liberty of thought and action is the only condition in life of growth and welling where it does not exist, the man. The race, the nation must go. Even in politics be and sociology problems that were only racial 20 years ago can no longer be solved on national grounds only. They are assuming huge proportion gigantic space. They can only be solved when looked at in the broader light of international ground. International combina-

tion, international laws are the cry of the day. That shows solidarity." ಸಮೀಕ್ಷಕರ ಒಂದು ಸಮಾಜದಲ್ಲಿನ ಬೇರೆ ಬೇರೆ ವರ್ಗಗಳ ವರ್ತನೆಯು ಆಯಾ ವರ್ಗದ ಸದಸ್ಯರ ಹೃದಯ ಶ್ರೀಮಂತಿಕೆಯಿಂದ ಅಥವಾ ಹೃದಯ ದಾರಿದ್ರ್ಯದಿಂದ ತೀರ್ಮಾನವಾಗದೆ, ಆ ವರ್ಗದ ಸಮಗ್ರ ಹಿತಾಸಕ್ತಿಗಳ, ಅದರ ಗಳಿಕೆ ಹಾಗೂ ವರ್ತನೆಗಳನ್ನೆರಡನ್ನೂ ರೂಪಿಸುತ್ತವೆ ಎಂಬ ಸತ್ಯವನ್ನು ಅವರು (ಬೇಂದ್ರೆ) ಗ್ರಹಿಸಿದಂತೆ ತೋರುವುದಿಲ್ಲ. ೨೦ನೆಯ ಶತಮಾನದ ಹೇಳಿಕೆಗೆ ೧೯ನೆ ಶತಮಾನದ ಮಹಾಪುರುಷರೊಬ್ಬರು ಉತ್ತರ ಕೊಟ್ಟಿದ್ದಾರೆ. "There cannot be any progress without the whole world following in the way and it is becoming every day clearer that solution of any problem can never be attained on racial or national or narrow ground. Even idea has to become broad till it covers the whole of the world. Every aspiration must go on increasing till it has engulfed the whole of humanity, may whole of life within its scope. I am thoroughly convinced that no individual or nation can live by holding itself apart from the community of others and wherever seen attempt has been made under the false ideas, greatness, policies, the result has always been disaster."

ಆದರೆ ಶ್ರೀರಾಮಕೃಷ್ಣಾಶ್ರಮ ೨೦ನೆ ಶತಮಾನದಲ್ಲಿಯೂ ಮೋಕ್ಷವನ್ನು ಕುರಿತೇ ಮಾತನಾಡುತ್ತದೆ. ವಿವೇಕಾನಂದರ, ಅಂದು ದಿಗ್‌ದಿಗಂತದವರೆಗೆ ಮೊಳಗಿದ ಈ ಮಾತುಗಳು ರಾಮಕೃಷ್ಣಾಶ್ರಮದ ಬಾಯಿಂಗಳದಲ್ಲಿಯೂ ಮೂಡುತ್ತಿಲ್ಲ. ಅತೀ ಆಶಾವಾದವು ಕೊನೆಗೂ ನಿರಾಶೆಯಲ್ಲಿ ಕೊನೆಗಾಣುವಂತೆ ವಿವೇಕಾನಂದರ ಸ್ಥಿತಿಯೂ ಹಾಗೆಯೇ ಆಗಿದೆ. ಅವರ ಬಾಯಿಂದ ಬಂದ ಕೊನೆಯ ಮಾತುಗಳು ಹೀಗಿವೆ: Behind work was ambition, behind love was personality, behind my purity was fear, behind my guidance the thirst for power, now they are vanishing and I am drift, other I come in thy warm bossom floating wherever taken me in the voiceless, in the strange, in the wonderland I come as a spectator no more an actor.

ಕುರುಡು ಕಾಂಚಾಣ ಈ ಕವಿತೆಯ ಭಾವ ವಿಶ್ವವನ್ನು ತೆರೆದು ಸಹೃದಯನಿಗೆ ಅನುಭವಗಮ್ಯವನ್ನು ಮಾಡುವುದಕ್ಕೆ ಒಂದು ಕೀಲಿಯು ಕೈ ಇದೆ. ಈ ಕವಿತೆಯಲ್ಲಿ ಕ್ರಿಯಾಪದದ ಕಾಲವನ್ನು ಗಮನಿಸಬೇಕು. ಕುಣಿಯುತಲಿತ್ತೊ, ತುಳಿಯುತಲಿತ್ತೊ, ನುಡಿಗೊಡುತಿತ್ತೊ, ಬಿತ್ತೊ ಈ ಎಲ್ಲ ಕ್ರಿಯಾಪದಗಳು ಭೂತಕಾಲದಲ್ಲಿವೆ. ಇದನ್ನು ಗಮನಿಸಿದಾಗ ಇದು ಬಹಳ ಸರಳವಾದ ಕವಿತೆ, ಅರ್ಥಸ್ಪಷ್ಟವಾಗಿದೆ ಎಂಬ ಮಾತು ನಿರರ್ಥಕವಾಗುತ್ತದೆ. ಇದು ಶ್ರೀಮಂತರ ಹೃದಯಪರಿವರ್ತನೆಯನ್ನು ಮಾತ್ರ ನಂಬಿಕೊಂಡು ಬರೆದ ಕವಿತೆಯಲ್ಲ. ಇದು ಸಂಸ್ಕೃತ ಕವಿತೆಯಲ್ಲ. ಈ ಭೂತಕಾಲದ ಕ್ರಿಯೆಗಳ ಅರ್ಥ ಏನು? ಎಂಬುದನ್ನು ಗಮನಿಸಬೇಕಾದರೆ ಕುರುಡು ಕಾಂಚಾಣ ಇದು ಯಾವುದರ ಪ್ರತಿಮೆ ಎಂಬುದು ಸ್ಪಷ್ಟವಾಗುತ್ತದೆ. ಮಾನವನು ಎಂದಿನಿಂದಲೂ ತನ್ನ ಅವಸ್ಥೆಗೆ ಕಾರಣ ಎಲ್ಲೊ ಹೊರಗೆ ಇದೆ. ಈ ದುರವಸ್ಥೆಗೆ ನಾನು ಹೊಣೆಯಲ್ಲ.

ಒಂದೊಂದು ಯುಗಗಳಲ್ಲಿಯೂ ಒಬ್ಬೊಬ್ಬ ಮಹಾನುಭಾವ ಒಂದೊಂದು ಯುಟೋಪಿಯಾ ಕೊಡುತ್ತಾನೆ, ಅದೊಂದು ಸ್ವಪ್ನಭಂಗ. ಮತ್ತೊಂದು ಯುಟೋಪಿಯಾ ಇಂತಹ ಸ್ವಪ್ನಭಂಗಗಳ ರಚನಾತ್ಮಕವಾದ, ಕಲಾತ್ಮಕವಾದ ಅಭಿವ್ಯಕ್ತಿ ಈ ಕವಿತೆಯಲ್ಲಿದೆ. ಇಪ್ಪತ್ತನೆಯ ಶತಮಾನದ ದೊಡ್ಡ ಯುಟೋಪಿಯಾ ಸಾಮ್ಯವಾದ ಎಂದು ಹೇಳಬಹುದು. ಮಾರ್ಕ್ಸ್‌ನ ಬರಹವನ್ನು ನೋಡಬಹುದು.

'Mankind will be liberated' ವಾಕ್ಯಯೋಜನೆಯನ್ನು ಗಮನಿಸಬೇಕು. ತನ್ನ ಬಿಡುಗಡೆಯನ್ನು ಮನುಷ್ಯ ಪಡೆಯುವುದಿಲ್ಲ. ಇಂತಹದೇ ವಿಚಿತ್ರ ವಾಕ್ಯರಚನೆಯನ್ನು ಸ್ವಾತಂತ್ರ್ಯೋತ್ತರ ಕಾಲದಲ್ಲಿ ಕಾಣಬಹುದು. ತೋಕಚಕದಲ್ಲಿ ಈ ಸಂದರ್ಭ ಬರುತ್ತದೆ. ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಿತು ಎನ್ನುವ ಮಾತು ಭಾರತೀಯರ ಸುಪ್ತ ಚಿತ್ತದಲ್ಲಿ ಇದ್ದ ಸ್ವೈಚ್ಛ ಭಾವವನ್ನು ಸ್ಪಷ್ಟಪಡಿಸುತ್ತದೆ. ಇದಕ್ಕೆ ಆ ನಾಟಕದ ಇನ್ನೊಂದು ಪಾತ್ರ ಹೇಳುತ್ತದೆ; ಸ್ವಾತಂತ್ರ್ಯವನ್ನು ಗಳಿಸಿದೆವು ಎನ್ನಿರಿ. ಕೃತಿಯಲ್ಲಿ ಇಲ್ಲದ ಪೌರುಷ ಮಾತಿನಲ್ಲಾದರೂ ಇರಲಿ. ಹಾಗೆಯೇ ಮಾರ್ಕ್ಸ್‌ನ ಈ ವಾಕ್ಯ ಬಿಡುಗಡೆ ಯಾರದೋ ಅನುಗ್ರಹ ಎಂಬ ಭಾವವನ್ನು ಕೊಡುತ್ತದೆ. ಮುಂದಿನ ವಾಕ್ಯ ಗಮನಿಸಿ: 'Society regulates the general production' ಹೇಗೆ? ಎಂಬ ಪ್ರಶ್ನೆಗೆ ಮಾರ್ಕ್ಸ್ ಉತ್ತರ ಕೊಡುವುದಿಲ್ಲ. ಅವನು ಉತ್ತರವನ್ನೂ ಕೊಡಲಾರ. ಏಕೆಂದರೆ ಇದು ಅಸಾಧ್ಯವಾದುದು. 'But the picture he tries to give us is clear-It is a fantasy of world to come. The end and the fulfilment of historical time. But Marx is also expressing something deeper than philosophy-his vision. His vision reminds symbolism of great battle. His vision also powerfully reminds us of the revelation of John in the new testaments which speak of a great destruction after which there rearises a new heaven and a new earth, a new and totally revealed man. Here Marx has moved beyond propaganda and ideology, beyond philosophy and science. Express a religious vision and prophesy of the liberation.' ಹೀಗೆ ಕುರುಡು ಕಾಂಚಾಣ ಮಾನವನ ಇತಿಹಾಸಕಾಲದಿಂದ ಆರಂಭಿಸಿ ಇಲ್ಲಿಯವರೆಗಿನ ಎಲ್ಲ ಯುಟೋಪಿಯಾದ ದುರಂತವನ್ನು ಚಿತ್ರಿಸುತ್ತದೆ.

ಈ ಕವಿತೆಯ ರಚನೆ ೧೯೩೨ ಎಂದಿದೆ. ೧೯೩೨ರಲ್ಲಿ ರಶಿಯಾದಲ್ಲಿ ಸಾಮ್ಯವಾದ ನಿರ್ಮಿಸಿದ ಸಾಮಾಜಿಕ, ರಾಜಕೀಯ, ಆರ್ಥಿಕ ಅವಸ್ಥೆಯ ಅರಿವು ಬೇಂದ್ರೆಯವರಿಗೆ ಇರಲಿಲ್ಲ. ಹೀಗಿದ್ದೂ ಅವರ ಕವಿತೆ ಮನುಷ್ಯನ ಸ್ವಪ್ನಭಂಗಗಳನ್ನು ಚಿತ್ರಿಸಿತು. ಇದು ಕೇವಲ ಮಾರ್ಕ್ಸ್‌ವಾದವನ್ನು ಕುರಿತು ಬರೆದ ಕವಿತೆಯಲ್ಲ. ಮನುಷ್ಯ ತನ್ನ ಹೊಣೆಯನ್ನು ತಾನು ಸ್ವೀಕರಿಸದಿದ್ದರೆ ಮಾನವನಿಗೆ ಬಿಡುಗಡೆಯಿಲ್ಲ. ಇದು ಸಂದೇಶವನ್ನು ನೀಡುವ ಕವಿತೆಯಲ್ಲ. ಅನುಭವವನ್ನು ನೀಡುವ ಕವಿತೆ. ೧೯೨೨ರಲ್ಲಿ ಟಿ.ಎಸ್. ಎಲಿಯಟ್‌ನ ವೇಸ್ಟ್‌ಲ್ಯಾಂಡ್ ಪ್ರಕಟವಾಯಿತು. ಮುಂದೆ ೧೭ ವರ್ಷದಲ್ಲಿ ಎರಡನೆಯ ಮಹಾಯುದ್ಧ ಪ್ರಾರಂಭವಾಯಿತು. ವೇಸ್ಟ್‌ಲ್ಯಾಂಡ್ ಕವನವನ್ನು ಕುರಿತು ಸಮೀಕ್ಷಾಲೋಕದ ದಿಗ್ಗಜರೂ ಮಾಡದ ಕೆಲಸವನ್ನು ಮಾನವಶಾಸ್ತ್ರಜ್ಞರು ಮಾಡಿದ್ದಾರೆ.

Waste land ಸೌಂದರ್ಯಾನುಭಾವಕ್ಕಾಗಿ ರಚಿತವಾದ ಕವಿತೆಯಲ್ಲ. ಮಾನವನನ್ನು ಎಚ್ಚರಿಸುವ ಒಳಗಿನ ದನಿಯಾಗಿದೆ. ಆ ಒಳಗಿನ ದನಿ ಎಲ್ಲರಲ್ಲಿಯೂ ಮೊಳಗುತ್ತಿತ್ತು. Eliot ಎಲ್ಲರ ಸುಪ್ತಭಾವಕ್ಕೆ ಆಕೃತಿಯನ್ನು ಕೊಟ್ಟ. ನನಗೆ ವರ್ಷ ನೆನಪಿಲ್ಲ. ಅಮೇರಿಕೆಯ ಮಹಾನಗರದಲ್ಲಿ ಒಂದು ಚಿತ್ರಪ್ರದರ್ಶನ ನೆರವೇರಿತು. ಅಲ್ಲಿ ಒಂದು ವಿಚಿತ್ರ ಕಲಾಕೃತಿ ಪ್ರದರ್ಶನಕ್ಕೆ ಬಂತು. ಒಂದು ದೊಡ್ಡ ಟ್ರಕ್. ಆ ಟ್ರಕ್ಕಿನ ತುಂಬ ಹಸುವಿನ ರಕ್ತ ಚೆಲ್ಲಲಾಗಿತ್ತು. ಅದನ್ನು ಒಳಗೆ ಒಯ್ಯುವುದು ಸಾಧ್ಯವಿರಲಿಲ್ಲ. ನಾಗರಿಕರು ಪೋಲೀಸರಿಗೆ ತಕರಾರು ಮಾಡಿದರು. ಪೋಲೀಸರು ಬಂದು ಅದನ್ನು ತೆಗೆದುಕೊಂಡು ಹೋದರು. ಈ ದೃಶ್ಯವನ್ನು ಕುರಿತು ಮಾನವಶಾಸ್ತ್ರಜ್ಞನು ಹೇಳುತ್ತಿದ್ದಾನೆ: ಲೋ ಮನುಷ್ಯ, ಇನ್ನಾದರೂ ಎಚ್ಚರಗೊಳ್ಳು ಎಂದು. 'A symbol always transcends the one who makes use of it and makes him say in reality more than in it aware of his expression.' ಕುರುಡು ಕಾಂಚಾಣ ಒಂದು ಪ್ರತಿಮೆಯಾಗಿದೆ. ಅದು ಯಾವುದರ ಪ್ರತಿಮೆ? ದುಡ್ಡಿನ ಪ್ರತಿಮೆಯೋ? ಅಲ್ಲ, ಎಂದು ಹೇಳಬಹುದು. ದುಡ್ಡು ಅದೊಂದು impersonal power. ಮೂರು ಪ್ರಬಲವಾದ ಶಕ್ತಿಗಳಿವೆ. Power, Love, Wealth ಈ ಮೂರರ ಸಂಕೇತ-ಕಾಂಚಾಣ. ಅದು ಕುರುಡಾಗಿದೆ-ಎಂದರೆ ಅದಕ್ಕೆ conscious ಇಲ್ಲ. ಅದನ್ನು ಅವನು ಮುದ್ದು ನೀಡಿ ಮಲಗಿಸಿದ್ದಾನೆ. ಈ ಬೆಳಕಿನಲ್ಲಿ ನೋಡಿದರೆ ಕುರುಡು ಕಾಂಚಾಣ ಎಷ್ಟು ಅರ್ಥಪೂರ್ಣವಾಗಿದೆ ಎಂಬುದರ ಅರ್ಥ ಸಹೃದಯನಿಗೆ ಆಗುತ್ತದೆ. ಸಾಮಾಜಿಕ ಫಿಲ್ಟರ್ ಇದೆ. ಇದನ್ನು perceptual defence ಎಂದು ಕರೆಯಬಹುದು. ಮಾನವನಿಗೆ ಎಲ್ಲಕ್ಕಿಂತ ಹೆಚ್ಚಾಗಿ ತನ್ನ ಅಸ್ತಿತ್ವದ ಬಗ್ಗೆ ಹೆಚ್ಚು ಕಾಳಜಿ ಇರುತ್ತದೆ. ಅಸ್ತಿತ್ವ ಬಹು ಆಯಾಮವುಳ್ಳದ್ದಿದೆ. ದೇಹ, ಮನ, ಪ್ರಾಣ ಹೀಗೆ ಅದು ಸಂಸ್ಕೃತಿಯ ಸರ್ವ ಅಂಗಗಳನ್ನು ವ್ಯಾಪಿಸಿದೆ. Perceptual defence ತನಗೆ ಅಪ್ರಿಯವಾದದ್ದನ್ನು ಮನಸ್ಸು ನಿರಾಕರಿಸುತ್ತದೆ. ಆ ಭಾವದ ನಿರಾಕರಣೆ, ಆ ಭಾವದ ಅಭಾವವನ್ನು ಸೂಚಿಸುವುದಿಲ್ಲ. ಆ ಭಾವವು ಸುಪ್ತಚಿತ್ತಕ್ಕೆ ಇಳಿದು ಅಲ್ಲಿ ಕ್ರಿಯಾಶೀಲವಾಗಿರುತ್ತದೆ. ಕವಿಗೆ ಅದು ಹೇಗೋ ವೇದ್ಯವಾಗುತ್ತದೆ. ಅದು ಪ್ರಕಟವಾಗುತ್ತದೆ. ಸಮೀಕ್ಷಕನಿಗೂ, ಕವಿಗೂ ಇರುವ ಒಂದು ವ್ಯತ್ಯಾಸ ಸ್ಪಷ್ಟಪಡಿಸುತ್ತೇನೆ. ಸಮೀಕ್ಷಕ ತನ್ನ ಅಭಿವ್ಯಕ್ತಿಗೆ ಅಮೂರ್ತ ಪ್ರತಿಮೆಗಳನ್ನು, ಶುದ್ಧ ವೈಜ್ಞಾನಿಕ ಭಾಷೆಯನ್ನು ಬಳಸುತ್ತಾನೆ. ಅವನು ಅದನ್ನು ವಸ್ತುನಿಷ್ಠವಾದ ಸತ್ಯ ಎಂದು ಸ್ಪಷ್ಟಪಡಿಸುತ್ತಾನೆ. ಕವಿ ಹಾಗೆ ಮಾಡಲು ಸಾಧ್ಯವಿಲ್ಲ. ಅವನು ಸಮೂಹಮನದ ಆಳದಿಂದ ಬರುವ ಪ್ರತಿಮೆಗಳ ಭಾಷೆಯನ್ನು ಬಳಸುತ್ತಾನೆ. ಇನ್ನೊಂದು ಸಂಗತಿಯನ್ನು, ಅದು ತುಂಬ ಕಟು ಎನಿಸಿದರೂ ಸತ್ಯವಾಗಿದೆ ಎಂಬುದನ್ನು ಗಮನಿಸಬೇಕು. ಸಮೀಕ್ಷಕ 'Thinks he can be scientific by using technical term of our language to denote emotional phenomenon. He deceives himself and speaks of abstract culture which do not correspond to the reality of felt experience.'

ಕವಿ ಕಾವ್ಯವನ್ನು ಕುರಿತು ಏನನ್ನೇ ಮಾತನಾಡಲಿ, ಆ ಮಾತನ್ನು ಅವನ ಕಾವ್ಯಕ್ಕೆ ಅನ್ವಯಿಸಲು ಸಾಧ್ಯವಿಲ್ಲ. ತಮ್ಮ ಕವಿತೆಯ ಕಾರ್ಖಾನೆಗೆ ಸಮಸ್ತ ಜಗತ್ತನ್ನೇ ಕಚ್ಚಾವಸ್ತುವಾಗಿ ಬಳಸಿಕೊಂಡರೂ ಕೊನೆಗೆ ಉತ್ಪಾದನೆಯಾಗುವ ವಸ್ತುವು ಕವಿತೆಯಲ್ಲದೆ ಬೇರೇನೂ ಆಗಿರಬಾರದು ಎಂಬ ಮಾಧ್ಯಮನಿಷ್ಠೆಯನ್ನು ತಮ್ಮ ಸಾರ್ಥಕವಾದ ಕಾವ್ಯದಲ್ಲಿ ವ್ರತದಂತೆ ಪಾಲಿಸಿದರು ಬೇಂದ್ರೆ.

ಆದ್ದರಿಂದಲೇ ವೈಚಾರಿಕತೆಯ ಸತ್ಯಕ್ಕಿಂತ ಕವಿತೆಯ ಜೀವಂತಿಕೆಯು ಅವರಿಗೆ ಮುಖ್ಯವಾಗಿ ಕಂಡಿತು. ಅವರಲ್ಲಿ ಪರಸ್ಪರ ವಿರೋಧಗಳಿಲ್ಲದೆ ತರ್ಕಸಮ್ಮತವಾದ ಸಾಮಾಜಿಕ ಚಿಂತನೆಯೊಂದು ಮೂಡಿರಲಿಲ್ಲ. ಇದು ಅತ್ಯಂತ ವಿಚಿತ್ರವಾದ ಅಪೇಕ್ಷೆಯಾಗಿದೆ. ಏಕೆಂದರೆ ತರ್ಕಸಮ್ಮತವಾದ ಚಿಂತನೆಯನ್ನು ರೂಪಿಸುವುದು ಕಾವ್ಯದ ಕಕ್ಷೆಯಲ್ಲಿ ಬರುವುದಿಲ್ಲ. ಇಷ್ಟೇ ಏಕೆ, ಪರಸ್ಪರ ವಿರೋಧಗಳಿಲ್ಲದೆ ತರ್ಕಸಮ್ಮತವಾದ ಚಿಂತನೆ ಒಂದನ್ನು ರೂಪಿಸುವುದು ತತ್ತ್ವಜ್ಞಾನಕ್ಕೂ ಸಾಧ್ಯವಿಲ್ಲ ಎಂದು ರಸೆಲ್ ಸ್ಪಷ್ಟಪಡಿಸುತ್ತಾನೆ. ತತ್ತ್ವಜ್ಞಾನ ಅತ್ಯಂತ ಭಯಾನಕ dilemma ಒಂದನ್ನು ಎದುರಿಸಬೇಕಾಗುತ್ತದೆ. ಅವನು ಕನ್ಸಿಸ್ಟೆನ್ಸಿ, ಸತ್ಯ ಇವುಗಳಲ್ಲಿ ಒಂದನ್ನು ಆರಿಸಬೇಕಾಗುತ್ತದೆ. ಒಂದನ್ನು ಆರಿಸಿದರೆ ಒಂದನ್ನು ಬಲಿಗೊಡಬೇಕಾಗುತ್ತದೆ. ಪರಸ್ಪರ ವಿರೋಧಗಳಿಲ್ಲದ, ತರ್ಕಸಮ್ಮತವಾದ ಸುಸಂಗತಿಯನ್ನು ಆರಿಸಿಕೊಂಡರೆ ಅವನು ಸತ್ಯವನ್ನು ಬಲಿಕೊಡುತ್ತಾನೆ. ತತ್ತ್ವಜ್ಞಾನ ಸತ್ಯವನ್ನು ಬಲಿಗೊಡಲು ಸಾಧ್ಯವಿಲ್ಲ. ಆದರೆ ಕವಿಗೆ ಈ ಸಮಸ್ಯೆಯಿಲ್ಲ. ಏಕೆಂದರೆ ಅವನ ನಿರ್ಮಿತಿ ಅವನ ಕೈಯಲಿಲ್ಲ. ಅವನ ಚಿತ್ತದಲ್ಲಿ ಸುಪ್ತವಾದ, ಆದರೆ ವ್ಯಕ್ತಿನಿಷ್ಠವಾದ, ದೇಶ ಕಾಲಗಳ ಸೀಮೆಯಿಲ್ಲ ಅಭಿವ್ಯಕ್ತಿಗೆ ಹಾತೊರೆಯುತ್ತಿರುವ ವೇದನೆ, ಸಂವೇದನೆ ಇವುಗಳ ಕೈಯಲ್ಲಿಯ ಸೂತ್ರದ ಗೊಂಬೆಯಾಗಿರುತ್ತಾನೆ.

ಬೇಂದ್ರೆಯವರ ಕಾವ್ಯವನ್ನು ಕುರಿತು ಈ ಹೇಳಿಕೆ ಅತ್ಯಂತ ಸಾರ್ಥಕವಾಗಿದೆ: ಬೇಂದ್ರೆಯವರ ಜೀವನಾಸಕ್ತಿ ಮತ್ತು ಪ್ರೀತಿಗಳು ಸಾಂಕ್ರಾಮಿಕವೆನ್ನುವಷ್ಟು ತೀವ್ರವಾಗಿದೆ. ಜೀವನವೆಂದರೆ ಅಧ್ಯಯನ, ಅಧ್ಯಾಪನ, ಕೃತಿರಚನೆಗಳ ಶಾಂತಗಂಭೀರ ಜೀವನವಲ್ಲ. ಅದು ನೂರಕ್ಕೆ ನೂರರಷ್ಟು ರಕ್ತ ಮಾಂಸಗಳ, ಪ್ರೇಮಕಾಮಗಳ ತೀವ್ರ ಹಂಬಲ, ವಿಷಾದಗಳ ದೇಹಬದ್ಧ ಜೀವನ. ಅವರು ಜೀವನ ಸಾಗರದ ದಂಡೆಯಲ್ಲಿ ನಿಂತ ನಿರ್ಲಿಪ್ತ ಪ್ರೇಕ್ಷಕರಂತೆ ಅಲ್ಲ; ಅದರಲ್ಲಿ ಮುಳುಗಿ ತೇಲಿದವರು. ಹೀಗೆ ಬದುಕಿದಾಗ ಜೀವನದ ಪ್ರತಿಯೊಂದು ಭಾವಲಹರಿಯೂ ಅಮೂರ್ತ ಚಿಂತನೆಯಾಗಿ ಅಲ್ಲ, ತನ್ನೆಲ್ಲ ಕಟುಮಧುರ ವಿವರಗಳೊಂದಿಗೆ ಕವಿಯ ತೆಕ್ಕೆಗೆ ಬರುವುದರಲ್ಲಿ ಆಶ್ಚರ್ಯವಿಲ್ಲ. ಬೇಂದ್ರೆಯವರು ಅನುಭವದ ಕ್ಷಣಗಳಲ್ಲಿ ಅಥವಾ ಅವರ ಪುನಸ್ಸೃಷ್ಟಿಯಲ್ಲಿ ಮೈತುಂಬ ಉನ್ಮತ್ತರಾಗಿ ತಮ್ಮ ಸ್ವಂತ ವ್ಯಕ್ತಿತ್ವದ ಮಿತಿಗಳನ್ನು ಲಂಘಿಸಿ ಹಾಡಿದರು. ಕವಿಗೆ ಇದಕ್ಕಿಂತ ಹೆಚ್ಚಿನ ಶ್ರೇಯಸ್ಸು ಯಾವುದು? ಸಮೀಕ್ಷಕ ತನ್ನ ಅಧ್ಯಯನವನ್ನು, ಅಭಿವ್ಯಕ್ತಿಯನ್ನು ವಿವೇಕದ ವ್ಯಾಪ್ತಿಗೆ ಒಳಪಡಿಸಿರುತ್ತಾನೆ. ಅದು ಸಹಜವೂ ಆಗಿದೆ. ಆದರೆ ವಿವೇಕ

perceptual defenceಗೆ ಒಳಗಾಗಿರುತ್ತದೆ. ಆಗ ಕಾವ್ಯಾನುಭೂತಿ ಸಮಗ್ರವಾಗುವುದಿಲ್ಲ. ಕವಿಕರ್ಮ ಅನಿರ್ವಚನೀಯವಾದುದಕ್ಕೆ ವಚನೀಯದ ಕವಚವನ್ನು ಕೊಡುವುದಾಗಿರುತ್ತದೆ. ಒಂದು ರೀತಿಯಿಂದ ಬೇಂದ್ರೆ ಇದನ್ನು ಒಪ್ಪಿಕೊಂಡರೂ ಅವರೇ ಹೇಳುತ್ತಾರೆ. ನನ್ನ ಕವಿತೆಗೆ ನಾನು ಸೂಲಗಿತ್ತಿ ಮಾತ್ರ. ನಿಜವಾದ ಕವಿತೆ ತನ್ನಷ್ಟಕ್ಕೆ ತಾನೇ ದೇಹವನ್ನು ಧರಿಸುತ್ತದೆ. ಸಮೀಕ್ಷಕನ ಮುಖ್ಯವಾದ ಕಾರ್ಯವೆಂದರೆ ಸಹೃದಯನಿಗೆ ಕವಿತೆಯ ಆತ್ಮದರ್ಶನ ಮಾಡಿಸುವುದು. ಕೊನೆಗೆ ನೋಡುವವನು ಸಹೃದಯನೆ. ಅವನು ಸಮೀಕ್ಷಕನ ಕಣ್ಣುಗಳಿಂದ ನೋಡುವಂತಾಗಬಾರದು. ಮೌಲ್ಯಮಾಪನವು ಮುಖ್ಯ ಕಾರ್ಯವಲ್ಲವೆ? ನನ್ನ ನಿಲುವು ತುಂಬ ಭಿನ್ನವಾಗಿದೆ. ಯಾವುದು ಕಾವ್ಯವೇ ಅಲ್ಲವೋ ಅದನ್ನು ಕುರಿತು ಮಾತನಾಡುವುದು ವ್ಯರ್ಥವಾದುದಲ್ಲವೆ? ಹಲವಾರು ಕೃತಿಗಳಲ್ಲಿ ಅಕಾವ್ಯವಾದುದನ್ನು ಪರಿಗಣಿಸದೆ, ಕೇವಲ ಕಾವ್ಯವನ್ನು ಚಿಂತಿಸುವುದು ಒಳ್ಳೆಯದಲ್ಲವೆ?

ನಿಜವಾದ ಕಾವ್ಯವನ್ನು ಗುರುತಿಸುವುದು ಕಷ್ಟಕರವಾದುದಲ್ಲ. ಸಮೀಕ್ಷಕನ ಮೊಟ್ಟಮೊದಲನೆಯ ವಿಶೇಷ ಲಕ್ಷಣವೆಂದರೆ ನಿಜವಾದ ಕಾವ್ಯವನ್ನು ಗುರುತಿಸುವುದು ಎಂದೇ ಹೇಳಬಹುದು. ಇಂತಹ ಸಮೀಕ್ಷೆಯಲ್ಲಿ ಅವನ ಸಮಗ್ರ ವ್ಯಕ್ತಿತ್ವವು ಕ್ರಿಯಾಶೀಲವಾಗಿರುತ್ತದೆ.

ಇಲ್ಲಿ ಒಂದು ಮಹತ್ವದ ಪ್ರಶ್ನೆಗೆ ಉತ್ತರ ಕಂಡುಹಿಡಿಯಲು ಯತ್ನಿಸಬೇಕು. ಕವಿತೆಯ ತಿರುಳು ಸಮೀಕ್ಷಕನ ಕಲ್ಪನೆಯ ಕೂಸೋ ಇಲ್ಲವೆ ಕೃತಿಯ ಆತ್ಮವೋ? ಇದು discovery ಆಗಬೇಕು. invention ಆಗಬಾರದು. ಅವು ಕೃತಿಯ ಅಂತರಂಗದ ಅನಾವರಣ ಆಗಬೇಕೆ ಹೊರತು ಹೊಸ ನಿರ್ಮಾಣ ಆಗಬಾರದು. ಹೀಗೆ ಹೇಳಿದಾಗ ಇನ್ನೊಂದು ಪ್ರಶ್ನೆಯನ್ನು ಬಿಡಿಸಬೇಕಾಗುತ್ತದೆ. ಕವಿಗೆ ತನ್ನ ಕೃತಿಯಲ್ಲಿ ಏನನ್ನು ಹೇಳಬೇಕಾಗಿದೆಯೋ ಅದೆಲ್ಲ ಅವನಿಗೆ ಸ್ಪಷ್ಟವಾಗಿದೆ; ಅವನು ಬೇಕಾಗಿಯೇ ಆ ಕೃತಿಯಲ್ಲಿ ಅಡಗಿಸಿರುತ್ತಾನೆ. ಸಮೀಕ್ಷಕನು ಅದನ್ನು ಹುಡುಕಿ ತೆಗೆಯುತ್ತಾನೆ. ಅದಕ್ಕೆ ಕವಿ ಒಪ್ಪಿಗೆಯ ಮುದ್ರೆಯನ್ನು ನೀಡುತ್ತಾನೆ. ಹೀಗಾದರೆ ಇದು ಹುಡುಗಾಟಿಕೆ ಎನಿಸುತ್ತದೆ. ಕವಿತೆಯು ಮೈದಾಳುವಾಗ ಅದರಲ್ಲಿ ಏನು ಅಭಿವ್ಯಕ್ತವಾಗುತ್ತದೆ ಎನ್ನುವುದರ ಅರಿವು ಕವಿಗೆ ಇರುವುದಿಲ್ಲ. ಕವಿ ಸಂಪೂರ್ಣವಾಗಿ unselfconscious ಆದಾಗ ಮಾತ್ರ ಕಲಾಕೃತಿಯ ನಿರ್ಮಾಣವಾಗುತ್ತದೆ. ಅದು ಕವಿಗೆ ಬೇಕಾಗಲಿ, ಬೇಡಾಗಲಿ ಸಹೃದಯನಿಗೆ, ಸಮಾಜಕ್ಕೆ ಒಪ್ಪಿಗೆಯಾಗಲಿ, ಬಿಡಲಿ ಅದು ಪ್ರಕಟವಾಗುತ್ತದೆ. ಅರ್ಥೈಸುವುದು, ಕಲಾಕೃತಿಯನ್ನು ಅನುಭವಿಸುವುದು ಅವರವರ ಮನಸ್ಸಿನ ಪಜ್ಞೆಯ ನಿಲುವಿನ ಮೇಲೆ ಅವಲಂಬಿಸಿದೆ. ಒಂದು ಕೃತಿಯೊಡನೆ ಸಂವಾದ ನಡೆಸುವುದು ಮೊದಲ ಹೆಜ್ಜೆಯಾದರೆ, ಕೃತಿಯ ಸಂವೇದನೆಯಲ್ಲಿ ಪಾಲುಗೊಳ್ಳುವುದು ನಿಜವಾದ ರಸಾಸ್ವಾದ. ಅಭಿಪ್ರಾಯ ಸತ್ಯವಾದುದಲ್ಲ. ಅಭಿಪ್ರಾಯಗಳ ಜೊತೆ ವಾಗ್ವಾದ ಮಾಡಬಹುದು; ಆದರೆ ಕಲಾಕೃತಿಯ ಜೊತೆ ವಾಗ್ವಾದ ಸಾಧ್ಯವಿಲ್ಲ. ಏಕೆಂದರೆ ಕಲಾಕೃತಿಯು, ಕಲಾವಿದನ ವಿಚಾರವನ್ನು ವ್ಯಕ್ತಪಡಿಸುತ್ತಿಲ್ಲ. ಅವನ ಅರಿವಿಗೂ ಮೀರಿದ ಸಮೂಹಮನಸ್ಸಿನ ಅರಿವಿಗೂ ಬಾರದ ಅಮೂರ್ತವಾದ ಭಾವವನ್ನು ಅಭಿವ್ಯಕ್ತಗೊಳಿಸುತ್ತದೆ. ಆದುದರಿಂದಲೇ ಅದು ಪ್ರತಿಮೆಗಳ ಮೂಲಕವಾಗಿ ಮಾತನಾಡುತ್ತದೆ.

ಸ್ವಾತಂತ್ರ್ಯಾನಂತರ ಭಾರತದ ರಾಜಕಾರಣದ ಬಗ್ಗೆಯೂ ಬೇಂದ್ರೆಯವರು ಉತ್ಸಾಹಿತವಾದ ಪ್ರತಿಕ್ರಿಯೆಯನ್ನು ತೋರಿಸಿರುವರೆಂದು ಹೇಳಬರುವುದಿಲ್ಲ. ಅವರಿಗೆ ಆದ ಭ್ರಮನಿರಸನವು ನೈತಿಕವಾದ ಅಧಃಪತನದ ಬಗೆಗಿನ ವಿಷಾದದ ನೆಲೆಯನ್ನು ಹೊಂದಿರುವಂತೆ ಕಂಡುಬಂದಿದ್ದು ಆಳದಲ್ಲಿ ಸಮಾಜವು ಹೆಚ್ಚು ಹೆಚ್ಚು ಮುಕ್ತವಾಗುತ್ತಿರುವ ಪ್ರತಿಕ್ರಿಯೆಯನ್ನು ಅರ್ಥ ಮಾಡಿಕೊಳ್ಳದೆ ಹೋದಾಗ ಕಂಡುಬರುವ ದಿಗ್ಭ್ರಮೆಯೇ ಅಡಗಿದೆ. ಪ್ರಜಾಪ್ರಭುತ್ವವನ್ನು ಗೇಲಿ ಮಾಡುವಂತೆ ಬರೆದಿರುವ ದೇಮವ್ವನ ಮೆರವಣಿಗೆ ಈ ದಿಕ್ಕಿನಲ್ಲಿ ಮುಖ್ಯವಾದ ಕವನ.

ಇಲ್ಲಿ ಮುಖ್ಯವಾಗಿ ಹೇಳಬೇಕಾದ ಮಾತೆಂದರೆ ಇದು ಒಬ್ಬ ವ್ಯಕ್ತಿಗಾದ ಭ್ರಮನಿರಸನವಲ್ಲ ಎಂಬುದನ್ನು ಗಮನಿಸಬೇಕು. ಪ್ರಾರಂಭಕಾಲದಿಂದಲೂ, ಎಲ್ಲ ದೇಶಗಳಲ್ಲಿಯೂ, ಎಲ್ಲ ಕಾಲಗಳಲ್ಲಿಯೂ ಇಂತಹ ಭ್ರಮನಿರಸನವನ್ನು ಕಾಣಬಹುದು.

The citizens of ancient Athens voted out of office a candidate known as 'Aristiges the good' because they were tired of hearing him

ways referred to as the good. Goodness makes demands on earth and e naive believe that people simply love the god is one of our earlist illusion, thought it takes a Dostovesky adequately to clear up that isconception.

ಒಂದು ಕೃತಿ, ವಿಡಂಬನೆಯೊ, ಇಲ್ಲವೆ ಹೃತ್ಪೂರ್ವಕವಾದ ತಳಮಳವೊ ಎಂಬುದು ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಬಹುದು. ಒಬ್ಬ ವ್ಯಕ್ತಿಯಲ್ಲಿಯೇ ಭಿನ್ನವಾಗಬಹುದು. ನನ್ನ ಒಂದು ನುಭವವನ್ನು ಹೇಳುತ್ತೇನೆ. 'ಉದರ ವೈರಾಗ್ಯವಿದು' ಈ ಕೀರ್ತನೆಯನ್ನು ನಾನು ಒಂದು atireದಂತೆ ಅನುಭವಿಸಿದೆ. ಈ ಅನುಭವ ನನ್ನಲ್ಲಿ ಎಂಟು ಹತ್ತು ವರುಷಗಳವರೆಗಿತ್ತು. ನಾನೊಮ್ಮೆ ಂದು ಹಳ್ಳಿಗೆ ಉಪನ್ಯಾಸಕ್ಕೆ ಹೋಗಿದ್ದೆ. ಅಲ್ಲಿ ಒಬ್ಬ ಕುರುಡ ನನಗಾಗಿ ಆ ಹಾಡನ್ನು ಹೇಳಿದ. ನ್ನ ಹೃದಯ ಆರ್ದ್ರವಾಯಿತು, ಕಣ್ಣು ತೇವವಾದವು. ಆ ಕೀರ್ತನೆಯಲ್ಲಿ ಮಿಥ್ಯಾಚಾರಿಗಳ ಡಂಬನೆ ಇರಲಿಲ್ಲ, ಅವರ ಬಗ್ಗೆ ಅಪಾರವಾದ ಸಹಾನುಭೂತಿ, ಅನುಕಂಪ ನನ್ನ ಅನುಭವಕ್ಕೆ ಂದವು. ದೇವುವ್ವನ ಮೆರವಣಿಗೆ ಒಬ್ಬ ವ್ಯಕ್ತಿಗಾದ ಭ್ರಮನಿರಸನದಿಂದ ಆದ ದಿಗ್ಭ್ರಮೆಯಲ್ಲಿ ಮೂಡಿಬಂದ ಗೇಲಿ ಮಾಡುವ ವಿಡಂಬನ ಕಾವ್ಯವಲ್ಲ. ಈ ಕೃತಿಯಲ್ಲಿ one of the earliest llusion ಆದ ಭ್ರಮೆಯನ್ನು ತಿಳಿಗೊಳಿಸುವ ಕಾರ್ಯ ಆಗಿದೆ.

ಬೇಂದ್ರೆಯವರು ಬಹುಪಾಲು ಮಹತ್ವದ ಸಂದರ್ಭದಲ್ಲಿ ನಾಡಿನ ಪ್ರಗತಿಪರ ಚಳವಳಿ ಗಳೊಂದಿಗೆ ಸಂಬಂಧ ಗುರುತಿಸಿಕೊಳ್ಳಲಿಲ್ಲ ಎಂಬ ಮಾತನ್ನು ನಾವು ಕಾಕತಾಳೀಯವೆಂದು ಳಿಯುವುದಿಲ್ಲ, ಮಾನವೀಯ ಮರುಕ ಮತ್ತು ಕಲಾತ್ಮಕ ಪ್ರತಿಭೆಗಳಲ್ಲಿ ಪಾಬ್ಲೊ ನೆರುಡಾ ಂತಹ ಕವಿಗೆ ಎಷ್ಟು ಮಾತ್ರಕ್ಕೂ ಕಡಮೆಯಿಲ್ಲದ ಬೇಂದ್ರೆ, ಖಚಿತವಾದ ಸಾಮಾಜಿಕ ನಿಲುವುಗಳ ೊರತೆಯಿಂದಲೇ, ಅವನ ಹಾಗೆ ಮಹತ್ವಪೂರ್ಣವಾದ ಕಾವ್ಯವನ್ನು ರಚಿಸಲಿಲ್ಲ.

ನೆರುಡಾ ಒಬ್ಬ ವಿಶಿಷ್ಟಪಂಥದ ವಕ್ತಾರ. ಆ ಪಂಥದ ನಿಲುವನ್ನು ಒಪ್ಪಿಕೊಂಡವರು ಈ ಮಾತನ್ನು ಅಲ್ಲಗಳೆಯುತ್ತಾರೆ. ನೆರುಡಾನಲ್ಲಿ ಅವನ ವ್ಯಕ್ತಿತ್ವದ ಎಲ್ಲೆಯನ್ನು ಮೀರಿ ಸರ್ವ ಸಮಾವೇಶಕವಾದ ಮಾನವನ ತುಡಿತಗಳು ಇಲ್ಲ ಎನ್ನುವುದನ್ನು ಅವನ ಕಾವ್ಯದಿಂದಲೇ ಕಾಣಬಹುದು. ಇಲ್ಲೊಂದು ಉದಾಹರಣೆಯನ್ನು ಕೊಡಬಯಸುತ್ತೇನೆ.

Boris Pasternak ಉಸಿರುಗಟ್ಟುವ ವಾತಾವರಣದಲ್ಲಿ ಸ್ವತಂತ್ರ ಕೃತಿಗಳನ್ನು ರಚನೆ ಮಾಡದೆ ಶೇಕ್ಸ್‌ಪಿಯರ್‌ನ ನಾಟಕಗಳನ್ನು ಭಾಷಾಂತರ ಮಾಡಿದ. ಅವನ ಹ್ಯಾಮ್ಲೆಟ್ ನಾಟಕವನ್ನು ಸೋವಿಯತ್ ಒಕ್ಕೂಟದಲ್ಲಿ ಆಡಿದರು. ಆದುವಾಗ ಹ್ಯಾಮ್ಲೆಟ್ ನಾಟಕವನ್ನು ತುಂಬ ಬದಲಾವಣೆ ಮಾಡಿದರು. ದಿಗ್‌ದರ್ಶಕ ಅದಕ್ಕೆ ಕೊಟ್ಟ ಕಾರಣ ಹೀಗೆ: ಶೇಕ್ಸ್‌ಪಿಯರ್‌ನಿಗೆ ಸ್ಟಾಲಿನ್ ತ್ತ ಪ್ರಣಾಲಿ ಗೊತ್ತಿರಲಿಲ್ಲ. ಆದುದರಿಂದ ಅವನು ಹ್ಯಾಮ್ಲೆಟ್‌ನ ಮುಂದೆ to be or not to e ಎಂಬ ಸಂದಿಗ್ಧ ಸಮಸ್ಯೆಯನ್ನಿಟ್ಟ. ಸರ್ವಶಕ್ತಿವಂತನಾದ ಸ್ಟಾಲಿನ್ ಸ್ಥಾಪಿಸಿದ ಅತ್ಯುಚ್ಚಶ್ರೇಣಿಯ ತ್ತರವಿರಲಾರದಂತಹ ಯಾವ ಸಮಸ್ಯೆಯೂ ಇಲ್ಲ. ಸ್ಟಾಲಿನ್ ಸ್ಥಾಪಿಸಿದ ಸ್ವರ್ಗದಲ್ಲಿ ಸಂಶಯಕ್ಕೆ, ್ರಮೆಗೆ, ವಿವಾದಕ್ಕೆ, ದುರಂತಕ್ಕೆ ಯಾವ ಅವಕಾಶವೂ ಇಲ್ಲ. (ಈ ವಿಷಯವನ್ನು ಕುರಿತು Pasernak ಸೋದರಿ Volga ಬರೆದ ಪತ್ರದಲ್ಲಿದೆ.) ಬೇಂದ್ರೆ ತನಗೆ ಅರಿವಿರದಂತೆಯೇ ಮಾನವನ

ಪ್ರಜ್ಞೆಗೆ ಅಭಿವ್ಯಕ್ತಿಯ ಮಾಧ್ಯಮವಾದರು. ಒಂದು ಪಂಥದ ಮಾಧ್ಯಮವಾಗಲಿಲ್ಲ. ಎ.ಆರ್. ಕೃಷ್ಣಶಾಸ್ತ್ರಿಯವರು ಕುವೆಂಪು ಅವರ ವಿಷಯದಲ್ಲಿ ಹೀಗೆ ಇಚ್ಛೆಯನ್ನು ವ್ಯಕ್ತಪಡಿಸಿದ್ದರಂತೆ: 'ಕುವೆಂಪು ಅರವಿಂದರಾಗುವುದು ಬೇಡ, ಅವರು ರವೀಂದ್ರರಾಗಿಯೇ ಇರಲಿ. ಬೇಂದ್ರೆಯವರು ರವೀಂದ್ರರಾಗಿ ಉಳಿಯದೆ ಅರವಿಂದರಾದುದು ಕನ್ನಡ ಕಾವ್ಯದ ದುರ್ದೈವ' ಎನ್ನುವ ಅಭಿಪ್ರಾಯವಿದೆ. ರವೀಂದ್ರರನ್ನು ಕುರಿತು ನನಗೆ ತುಂಬ ಗೌರವವಿದೆ. ಆದರೆ, ರವೀಂದ್ರರು ಯಾವ ಸಾಮಾಜಿಕ ಚಳವಳಿಯಲ್ಲಿ ಭಾಗವಹಿಸಿದರು! ಅವರ ಸಹಸ್ರಾರು ಕವಿತೆಗಳಲ್ಲಿ ಒಂದಾದರೂ ಸಾಮಾಜಿಕ ಕವಿತೆ ಉಂಟೆ? ಅವರ ಗದ್ಯ ಲೇಖನಗಳಲ್ಲಿ, ನಾಟಕಗಳಲ್ಲಿ ಸಾಮಾಜಿಕ ಕಳಕಳಿಯುಳ್ಳ ವಿಷಯ ಇದೆಯೆ? ಸಕ್ರಿಯ ರಾಜಕಾರಣದಿಂದ ವಿಮುಖರಾಗಿ ಏಕಾಂತ ವಾಸದಲ್ಲಿದ್ದ ಅರವಿಂದರು 'Ideal of humanity and human cycle' ಇಂತಹ ಮಹತ್ವದ ಸಾಮಾಜಿಕ ಚಿಂತನವನ್ನು ಸಮಾಜಕ್ಕೆ ಕಾಣಿಕೆಯಾಗಿ ನೀಡಿದ್ದಾರೆ. ಇಷ್ಟೇ ಅಲ್ಲ, ಅವರು ತಮ್ಮ ಹಲವಾರು ಪತ್ರಗಳಲ್ಲಿ ಗಾಂಧೀಜಿಯವರ ಸ್ವದೇಶಿ ಮೊದಲಾದ ಕಾರ್ಯಕ್ರಮಗಳನ್ನು ಕಟುವಾಗಿ ಟೀಕಿಸಿದ್ದಾರೆ. ಅವರ ಬಗ್ಗೆ ಗೌರವವಿಟ್ಟುಕೊಂಡೂ ಅವರು ಮಾಡಿದ ಮಹಾತ್ಯಾಗ ವೆಂದರೆ ಆಳರಸರು ಕೊಟ್ಟ knight ಪದವಿಯನ್ನು ಆಳರಸರ ಧೋರಣೆಯನ್ನು ಧಿಕ್ಕರಿಸಿ ಎಷ್ಟೋ ವರುಷಗಳ ಮೇಲೆ ಮರಳಿ ಕೊಟ್ಟರು. ರವೀಂದ್ರರಿಗೆ ಅನ್ವಯಿಸದ ಮಾನದಂಡವನ್ನು ಬೇಂದ್ರೆಯವರಿಗೆ ಯಾಕೆ ಅನ್ವಯಿಸಬೇಕು ನನಗೆ ಅರ್ಥವಾಗುವುದಿಲ್ಲ.

ಮಾತಿನಿಂದ ಬರಹಕ್ಕೆ- ಪ್ರಹ್ಲಾದ ದಿವಾಣಜಿ

ಈ ಎಲ್ಲ ಲೇಖನಗಳು (೨೦೦೫-೨೦೦೬ರಲ್ಲಿ ಆಡಿದ ಮಾತುಗಳಿಂದ), ಸಾಹಿತ್ಯ ಭಂಡಾರ, ಬೆಂಗಳೂರು ಇವರಿಂದ ಪ್ರಕಟವಾಗುತ್ತಿರುವ 'ಕ್ರಾಂತ ದರ್ಶನ' (ಬೇಂದ್ರೆ ವ್ಯಕ್ತಿತ್ವ, ಕಾವ್ಯ ದರ್ಶನ) ಕೃತಿಯ ಕೆಲವು ಪುಟಗಳು.

ಬೇಂದ್ರೆಯವರ 'ಅನಂತ ಪ್ರಣಯ' ಕವನ ವಿವರಣೆ

■ ವಿಶ್ವ ಸ್ಯಾನ್‌ರಮೋನ್, ಕ್ಯಾಲಿಫೋರ್ನಿಯಾ

ಅನಂತ ಪ್ರಣಯ ಕವನದ ವಿಷಯ

ಅನಂತ ಪ್ರಣಯ ನಾದಲೀಲೆ ಸಂಕಲನದ ಕವನ. ಬೇಂದ್ರೆಯವರು ಈ ಕವನದ ಭಾವ ಸೂರ್ಯನಿಗೂ, ಚಂದ್ರನಿಗೂ ನಡೆದಿರುವ ಅನಂತ ಪ್ರಣಯದ ಒಂದು ನಿರಂತರ ರೂಪಕವಾಗಿ ವರ್ಣಿಸಲಾಗಿದೆ. ಈ ಸೃಷ್ಟಿಯ ಸಂಕೇತವು ಅಣುಕಣದಲ್ಲಿಯೂ ಅನುಭವ ಗೋಚರವಾಗುವುದು" ಎಂದಿದ್ದಾರೆ.[೧] ಆದ್ದರಿಂದ ಈ ಕವನದ ವಿಷಯ ಅನುಭವ ಕೊಡುವ ಸಾಧನೆ ಎಂದು ಹೇಳಬಹುದು.

ಬೇಂದ್ರೆಯವರು ಕಾವ್ಯವೈಖರಿ ಸಂಕಲನದ ಪವಮಾನ ಕವನದ ಭಾವದಲ್ಲಿ "ಸೋಮ ಎಂಬುದು ಅಮೃತಬಳ್ಳಿ, ಅದನ್ನು ಕುಟ್ಟಿ ರಸ ಮಾಡಿ, ದೇವತೆಗಳು ಋಷಿಗಳು ಕುಡಿಯುತ್ತಿದ್ದರು. ಇದು ಜ್ಞಾನಾಮೃತಕ್ಕೆ ಸಮಾನ. ಜೀವಾತ್ಮ ಮತ್ತು ಪರಮಾತ್ಮ ಜ್ಞಾನಕ್ಕೆ ಈ ಸುರಪಾನ ಸಾಧನೆಯೆ ಹೊರತು ವ್ಯಸನವಲ್ಲ. ಈ ಬಳ್ಳಿಯನ್ನು ಹತ್ತು ಬೆರಳಿನಿಂದ ಹಿಂಡುವಾಗ ಅನುಭಾವ ಸ್ಪಂದನವಾಗುತ್ತದೆ"[೨] ಎಂದಿದ್ದಾರೆ. ಇಲ್ಲಿ ವ್ಯಸನ ಪದದ ಅಪರೂಪ ಅರ್ಥ ದುರಭ್ಯಾಸ ಎಂದು. ಆದ್ದರಿಂದ ಈ ಸುರಪಾನ ಸದಭ್ಯಾಸ ಇದಕ್ಕೆ ಸದಾಕಾಲ ಹಾತೊರೆಯುತ್ತಿರಬಹುದು. ಆದ್ದರಿಂದ ಈ ಕವನದ ವಿಷಯ ಆಧ್ಯಾತ್ಮಿಕ ಅನುಭವ ಕೊಡುವ ಯೋಗಸಾಧನೆ ಎನ್ನಬಹುದು.

ಹಾಗೂ, ಈ ಪವಮಾನ ಕವನದ ಕೊನೆಯ ಚರಣದಲ್ಲಿ, "ಈ ಹತ್ತೂಬೆರಳು ತಾನೊಂದೆ ಕರುಳು ಹಿಂಡುವವು ಹಾಲುಧಾರೆ। ಮನಸಾರೆ ಮತ್ತೆ ಎದೆಯಾರೆ, ಯಾರೆ ಹಿಂಡಿರಲಿ ಹತ್ತು ಸಾ ಬಾಕುರದ ಧಮನ ಅದು ಹೃದಯ ಶಮನ ಆ ನಿರಂತರದ ನಮನ ಪ್ರಣಯವೆಂದೆ, ಓ ಪ್ರಣ ಎಂದೆ ಲವ ಮಾತ್ರ ಭೇದವಿಲ್ಲಾ." ಎಂದಿದ್ದಾರೆ. ಬೇಂದ್ರೆಯವರ ಈ ದೃಷ್ಟಿಕೋನದಲ್ಲಿ ಪ್ರಣವವು ಹಾಗೂ ಈ ಕವನದ ಶೀರ್ಷಿಕೆಯ ಪ್ರಣಯವೂ ಒಂದೇ ಎಂದು ಸಾರುತ್ತವೆ. ಹಾಗೂ ಈ ಕವನ ಅಧ್ಯಾತ್ಮಿಕ ಅನುಭವ ಸಾಧನೆಯ ನಿರೂಪಣೆ ಎನ್ನುವುದನ್ನು ದೃಡೀಕರಿಸುತ್ತದೆ.

ಕವನ ರಚನೆ

ಅಂತ್ಯ ಪ್ರಾಸದ, ಪ್ರತಿ ಪಾದದಲ್ಲು ಏಳು ಅಂಶಗಣಗಳಿರುವ ದ್ವಿಪದಿಯ ಕವನ ರಚನೆ ಏಳು ವಲಯ, ಏಳು ಲೋಕ ಇತ್ಯಾದಿ ಏಳು ಸಂಖ್ಯೆಯ ಹಾಗೂ ಅಧ್ಯಾತ್ಮ ಪ್ರಣಯಿಗಳ ಸಂಕೇತವೆಂದು ತೋರುತ್ತದೆ.

ಅನಂತ ಪ್ರಣಯ ಕವನ ಚಮತ್ಕಾರ ತುಂಬಿದ ರಚನೆ. ಕವನದ ವಿಷಯ ಆಧ್ಯಾತ್ಮ ಯೋ ಸಾಧನೆ ಎಂದು ಮೇಲೆ ದೃಡಿಕರಿಸಿದೆ. ಅನಂತ ಪ್ರಣಯ ಎಂದರೆ ಪ್ರಣಯಿಗಳು ಮಿಲನ ವಾಗುವ ತನಕ ನಡೆಯುವ ಪ್ರೇಮ ಸರಸ ಎನ್ನಬಹುದು. ಮಿಲನವಾದಮೇಲೆ ಪ್ರಣಯಿಗಳು ಒಬ್ಬರೊಳ್ಳೊಬ್ಬರು ಐಕ್ಯವಾದರೂ ಎನ್ನಬಹುದು.

ಇಲ್ಲಿ ಪ್ರಣಯವನ್ನು ಧೃವಗಳ ಮಧ್ಯೆ ಬೀಸುವ ಚುಂಬಕ ಗಾಳಿ ಹಾಗು ಸೂರ್ಯ ಚಂದ್ರ ಬಿಂಬಗಳ ರಂಭನವಾಗಿ ಬಣ್ಣಿಸಿದ್ದಾರೆ. ಪ್ರಣಯದ ಅನಂತತೆಯನ್ನು ಪ್ರಣಯಿಗಳ ಮಿಲನಕ್ಕೆ ಕುರುಹಾದ ಅನುಭವ ಇನ್ನೂ ಆಗಿಲ್ಲವೆಂದು ಬಣ್ಣಿಸಿ ತೋರಿಸುತ್ತಾರೆ. ''ಅಕ್ಷಿನೀಮಿಲನ ಮಾಡದ ನಕ್ಷತ್ರದ ಗಣ ಗಗನದಿ ಹಾರದಿದೆ'', ''ಇಂದಿಗು ಚಂದಿರನ ಬಿಂಬಾಧರದಲಿ ಮಿಲನದ ಚಿಹ್ನ ಮೂಡದಿದೆ'' ಎನ್ನುವುದು ಇನ್ನೂ ಅನುಭವವಾಗಿರದ ಬಣ್ಣನೆಗಳು. ಇವು ಜೀವನದಲ್ಲಿ ಸಾಮಾನ್ಯ ವಾಗಿ ಒದಗುವ ಮಿಲನದ ಅನುಭವಗಳಲ್ಲ. ಆದ್ದರಿಂದ ಅನಂತ ಪ್ರಣಯ ಕವನ ವಿಸ್ಮಯವಾಗಿ ಕಂಡುಬರುತ್ತದೆ.

ಪದ್ಯ ವಿವರಣೆ

ಪದ್ಯಗಳ ಪ್ರತಿ ಚರಣವೂ ಕವನದ ಅಧ್ಯಾತ್ಮ ಸಾಧನೆಯನ್ನೂ, ಪ್ರಣಯದ ವಿವರನ್ನೂ, ಈ ಪ್ರಣಯದ ಅನಂತತೆಯನ್ನೂ ಸ್ವಾರಸ್ಯವಾಗಿ ಚಿತ್ರಿಸುತ್ತವೆ. ಆ ಚಿತ್ರಣವನ್ನು ಯೋಗ ಶಾಸ್ತ್ರ ಹಾಗೂ ಉಪನಿಷತ್‌ಗಳ ಆಧಾರದ ಸಹಿತ ಇಲ್ಲಿ ವಿವರಿಸಿದೆ..

ಚರಣ-1

ಉತ್ತರಧ್ರುವದಿಂ ದಕ್ಷಿಣ ಧ್ರುವಕೂ ಚುಂಬಕ ಗಾಳಿಯು ಬೀಸುತಿದೆ.
ಸೂರ್ಯನ ಬಿಂಬಕೆ ಚಂದ್ರನ ಬಿಂಬವು ರಂಬಿಸಿ ನಗೆಯಲಿ ಮೀಸುತಿದೆ ॥

ಧೃವಗಳು ಮತ್ತು ಚುಂಬಕ ಗಾಳಿ: ಯೋಗ ಶಾಸ್ತ್ರಗಳಲ್ಲಿ ನಮ್ಮ ದೇಹದ ಬೆನ್ನೆಲುಬಿ ಮೇರು ದಂಡವೆನ್ನುತ್ತಾರೆ [೩]. ನಮ್ಮಲ್ಲಿರುವ benneಲುಬಿನ ಮೇರು ದಂಡವೇ ಮೇರುಪರ್ವತ ಈ ಪರ್ವತ ಬೆನ್ನೆಲುಬಿನ ಮೂಲಾಧಾರದಿಂದ ನಮ್ಮ ಶಿರಸ್ಸಿನ ವರೆಗೂ ವ್ಯಾಪಿಸಿದೆ. ಮೂಲಾಧಾ

ಭೂಮಿ ತತ್ತ್ವದ ಸ್ಥಾನ. ಆದ್ದರಿಂದ ನಮ್ಮ ಶಿರಸ್ಸೇ ಈ ಕವನದ ಉತ್ತರ ಧ್ರುವ ಹಾಗೂ ಬೆನ್ನೆಲುಬಿನ ಮೂಲಾಧಾರವೇ ದಕ್ಷಿಣ ಧ್ರುವ.

ಈ ಪರ್ವತದ ಉದ್ದಕ್ಕೂ ಹಲವಾರು ನದಿಗಳು ಅಥವಾ ನಾಡಿಗಳು ಹರಿಯುತ್ತವೆ. ಇವುಗಳಲ್ಲಿ ಮುಖ್ಯವಾದ ಮೂರು ನದಿಗಳನ್ನು ಇಡಾ ಅಥವಾ ಚಂದ್ರ ನಾಡಿ, ಪಿಂಗಳ ಅಥವಾ ಸೂರ್ಯ ನಾಡಿ ಹಾಗು ಸುಷುಮ್ನ ನಾಡಿ ಎನ್ನುತ್ತಾರೆ. ಇವುಗಳಿಗೆ ಕ್ರಮವಾಗಿ ಗಂಗಾ, ಯಮುನಾ ಸರಸ್ವತೀ ನದಿಗಳೆಂದೂ ಹೆಸರಿವೆ.

ಸರಸ್ವತಿ ನದಿಯೇ ನಮ್ಮಲ್ಲಿರುವ ಬ್ರಹ್ಮ ಮಾರ್ಗ. ಸುಷುಮ್ನ ಅಥವಾ ಸರಸ್ವತಿಯ ನಾಡಿಯ ದ್ವಾರ ಸಾಮಾನ್ಯವಾಗಿ ಮುಚ್ಚಿರುತ್ತದೆ. ಆದ್ದರಿಂದ ಅದು ಗುಪ್ತ ನದಿ. ಇಡಾ ಪಿಂಗಳ ನಾಡಿಗಳು ಸುಷುಮ್ನೆಯ ಎಡ ಮತ್ತು ಬಲ ಭಾಗದಲ್ಲಿ ಬೇರೆ ಬೇರೆಯಾಗಿ ಹರಿದು ಅಲ್ಲಲ್ಲಿ ಅದರೊಂದಿಗೆ ಸೇರಿ ಮತ್ತೆ ಕವಲೊಡೆಯುತ್ತವೆ. ಈ ಮೂರು ನಾಡಿಗಳು ಸೇರುವ ಜಾಗವನ್ನು ಗಂಗಾ ಯಮುನಾ ಸರಸ್ವತಿ ನದಿಗಳ ಸಂಗಮದಂತೆ, ತ್ರಿವೇಣಿ ಸಂಗಮ ಎನ್ನುತ್ತಾರೆ. ಈ ನಮೂನೆಯ ಮೂರು ಸಂಗಮಗಳಿವೆ.

ಗಾಳಿ ಎಂದರೆ ವಾಯು ಎನ್ನಬಹುದು. ಇದನ್ನು ನಮ್ಮ ಪ್ರಾಣವಾಯು ಅಥವಾ ಉಸಿರು ಎನ್ನಬಹುದು. ಸ್ವರಯೋಗ ಯೋಗಶಾಸ್ತ್ರದ ಪ್ರಕ್ರಾರ ನಮ್ಮ ಉಸಿರು ಇಡಾ ಮತ್ತು ಪಿಂಗಳ ನಾಡಿಗಳಲ್ಲಿ ಹರಿಯುತ್ತವೆ. ಉಚ್ಛ್ವಾಸ ನಿಃಶ್ವಾಸಗಳೊಂದಿಗೆ ಪ್ರಾಣಶಕ್ತಿ ಅದರೊಂದಿಗೆ ನಮ್ಮ ಉಸಿರು ಮೇಲಿಂದ ಕೆಳಗೂ, ಕೆಳಗಿಂದ ಮೇಲಕ್ಕೂ ಚಲಿಸುತ್ತದೆ.

ಧ್ರುವಗಳಿರುವುದರಿಂದ ಮೇರುವಿಗೆ ಅಯಸ್ಕಾಂತ ವೆನ್ನುತ್ತಾರೆ. ಚುಂಬಕ ಪದಕ್ಕೆ ಅಯಸ್ಕಾಂತದ ಸೆಳೆತ ಎಂದೂ ಅರ್ಥವಿದೆ. ಆದ್ದರಿಂದ "ಉತ್ತರ ಧ್ರುವದಿಂ ದಕ್ಷಿಣ ಧ್ರುವಕೂ ಚುಂಬಕ ಗಾಳಿಯು ಬೀಸುತಿದೆ" ಎಂದರೆ ನಮ್ಮ ದೇಹದ ಮೇರು ಅಯಸ್ಕಾಂತದ ಸೆಳೆತದಿಂದ ಶಿರಸ್ಸಿನಿಂದ ಮೂಲಾಧಾರದವರೆಗೆ ಚಲಿಸುವ ಪ್ರಾಣ ವಾಯುಗಳು. ಅಂದರೆ ಅಯಸ್ಕಾಂತ ಮೇರುವಿನ ಉತ್ತರ ಧ್ರುವದಿಂದ ದಕ್ಷಿಣ ಧ್ರುವಕೂ ಹರಿಯುವ ಚುಂಬಕ ಗಾಳಿ ನಮ್ಮ ಉಸಿರಾಟ.

ಸೂರ್ಯನ ಬಿಂಬ ಚಂದ್ರನ ಬಿಂಬ : ಬಿಂಬ ಎಂದರೆ ತೊಂಡೆಹಣ್ಣಿನ ಬಳ್ಳಿ ಅಥವಾ ಲತೆ ಎಂತಲೂ ಅನ್ನಬಹುದು. ಯೋಗದ ನಾಡಿಗಳನ್ನು ಬಳ್ಳಿ ಅಥವಾ ಲತೆಗೆ ಹೋಲಿಸಬಹುದು. ಆದ್ದರಿಂದ ಸೂರ್ಯಬಿಂಬಕ್ಕೆ 'ಸೂರ್ಯ ಲತೆ' ಎಂತಲೂ, ಚಂದ್ರಬಿಂಬಕ್ಕೆ 'ಚಂದ್ರ ಲತೆ' ಎಂತಲೂ ಹೇಳಬಹುದು. ರಂಬಿಸು ಪದಕ್ಕೆ ಅಪ್ಪಿಕೊ, ತಬ್ಬಿಕೊ ಎಂದು ಅರ್ಥಗಳಿವೆ. ಮೇಲೆ ಈ ಸೂರ್ಯ ಚಂದ್ರ ಲತೆಗಳು ಸಂಗಮ ಸ್ಥಾನಗಳಲ್ಲಿ ಸೇರಿವೆ ಎಂದಿದ್ದೇವೆ. ಅಂದರೆ ಈ ಸಂಗಮಗಳಲ್ಲಿ ಸೂರ್ಯ ಚಂದ್ರ ನಾಡಿಗಳು ಪರಸ್ಪರ ಅಪ್ಪಿವೆ ಎನ್ನಬಹುದು. ಆದ್ದರಿಂದ ಈ ಸಂಗಮಗಳು ಈ ಕವನದ ಸೂರ್ಯಬಿಂಬ ಚಂದ್ರಬಿಂಬಗಳ ರಂಬನ (ಅಪ್ಪುವಿಕೆ). ನಗೆ ಪದಕ್ಕೆ ವಿನೋದ ಮತ್ತು ಅರಳುವಿಕೆ ಎಂದು ಅರ್ಥಗಳಿವೆ. ಮೀಸು ಎಂದರೆ ತೊಯ್ಯಿಸು ಮುಳುಗಿಸು ಎಂದು ಅರ್ಥ. ನಗೆಯಲಿ ಮೀಸುವುದು ಎಂದರೆ ಈ ರಂಬನದಿಂದ ಜೀವನ ವಿಕಾಸವಾಗುವುವಿಕೆ ಅಥವಾ ವಿನೋದ (ದೈವ ಲೀಲೆ) ಎನ್ನಬಹುದು. ಸೂರ್ಯನ ಬಿಂಬ ಚಂದ್ರನ ಬಿಂಬ ರಂಬನದಲ್ಲಿ ಜೀವ ವಿಕಸಿಸುತಿದೆ ಎನ್ನಬಹುದು.

ಪ್ರಾಣಾಯಾಮವೆಂದರೆ ಮೂಲಾಧಾರದಿಂದ ಶಿರಸ್ಸಿನವರೆಗೂ ಇಡಾ ಮತ್ತು ಪಿಂಗಳ ನಾಡಿಗಳಲ್ಲಿ ಯೋಗಶಾಸ್ತ್ರದ ನಿಯಮಕ್ಕನುಗುಣವಾಗಿ ಚಲಿಸುವಿಕೆ. ಈ ನಿಯಮಿತ ಚಲನೆಯಿಂದ ಯೋಗಾಭ್ಯಾಸಿಗೆ ಉಲ್ಲಾಸ ತುಂಬುತ್ತದೆ ಎನ್ನುತ್ತಾರೆ. ಚುಂಬಕ ಪದಕ್ಕೆ ಪುಳಕ ಎಂದೂ ಅರ್ಥವಿದೆ. ಪ್ರಾಣಾಯಾಮದಲ್ಲಿ ಪುಳಕ ಅನುಭವವಾಗುತ್ತದೆ ಎನ್ನುತ್ತಾರೆ. ಆದ್ದರಿಂದ ಪ್ರಾಣ ನಿಯಂತ್ರಣ ಅಭ್ಯಾಸದಲ್ಲಿ ಸೂರ್ಯನ ಬಿಂಬ ಚಂದ್ರನ ಬಿಂಬ ರಂಬನದಲ್ಲಿ ಜೀವ ವಿಕಸಿಸಿ ಪುಳಕಾದಿ ಉಲ್ಲಾಸಗಳನ್ನು ತುಂಬುತ್ತಿದೆ ಎನ್ನಬಹುದು.

ಈ ವಿವರವನ್ನು ದೃಢೀಕರಿಸಲು ಬೇಂದ್ರೆಯವರು ಪವಮಾನ ಕವನದ ಎರಡನೇ ಚರಣದಲ್ಲಿ ಜೀವದ ಅವಧಿಯನ್ನು "ಅಯಸ್ಕಾಂತದಾಯುಷ್ಯದುದ್ದಕ್ಕೇ ಉಸಿರ್ ನೂಲ ನೂತು....." ೨ ಎಂದಿರುವುದನ್ನು ಗಮನಿಸಬೇಕು. ಇಲ್ಲಿ ಅಯಸ್ಕಾಂತಕ್ಕೂ ಅಯುಸ್ಸಿಗೂ ಸಬಂಧ ಹೇಳಿದ್ದಾರೆ. ಈ ನೂಲಿನ ನೂತ ಹುಟ್ಟು ಸಾವುಗಳಿರುವ ತನಕ ನಡೆಯುತ್ತವೆ. ಅಯಸ್ಕಾಂತದ ಸೆಳೆತ ಮುಗಿದರೆ ಈ ಉಸಿರನ್ನು ನೂಲುವ ಯಂತ್ರದ ಕಾರ್ಯ ನಿಲ್ಲುತ್ತದೆ. ಅಂದರೆ ಸಾವು ಬರುತ್ತದೆ. ಆದರೆ ಕರ್ಮ ಸಿದ್ಧಾಂತದ ಪ್ರಕಾರ ಮುಕ್ತಿಹೊಂದುವವರೆಗೂ ಹುಟ್ಟುಸಾವುಗಳೂ ನಿರಂತರ. ಆಂದರೆ ಮುಕ್ತಿ ಹೊಂದುವತನಕ ಈ ಪ್ರಾಣದ ಸೆಳೆತವಿರುತ್ತದೆ. ಆಂದರೆ ಮುಕ್ತಿ ಹೊಂದುವತನಕ ಈ ಅನಂತ ಪ್ರಣಯ ನಡೆಯುತ್ತಿರುತ್ತದೆ.

ಚರಣ-2

ಭೂರಂಗಕೆ ಅಭಿಸಾರಕೆ ಕರೆಯುತ ತಿಂಗಳು ತಿಂಗಳು ನವೆಯುತಿದೆ
ತುಂಬುತ ತುಳುಕುತ ತೀರುತ ತನ್ನೊಳು ತಾನೇ ಸವಿಯನು ಸವಿಯುತಿದೆ ॥

ದೇಹ ದೇವಾಲಯವೆಂದೂ, ಶಿವ ಶಕ್ತಿ ನಿಕೇತನವೆಂದೂ ಯೋಗಶಾಸ್ತ್ರಗಳು ಹೇಳುತ್ತವೆ. ಈ ದೇಗುಲದಲ್ಲಿ ಶಿವನ ಸ್ಥಾನ ಭ್ರೂಮಧ್ಯದ ಮೇಲು ಭಾಗದಲ್ಲಿದೆ. ಶಕ್ತಿಯ ಸ್ಥಾನ ಮೂಲಾಧಾರದಲ್ಲಿದೆ. ನಮ್ಮ ದೇಹದಲ್ಲೇ ಇವರಿಬ್ಬರ ಮಿಲನವಾಗುವುದು ಯೋಗದ ಗುರಿ. ಅಂದರೆ ಮೂಲಾಧರದಿಂದ ಶಕ್ತಿ ಎದ್ದು ಶಿವನನ್ನು ಸೇರಬೇಕು. ಶಕ್ತಿ ಪ್ರಯಾಣ ಮಾಡುವ ದ್ವಾರಕ್ಕೆ ಬ್ರಹ್ಮಮಾರ್ಗ ಎನ್ನುತ್ತಾರೆ. ಮೇಲೆ ಹೇಳಿದಂತೆ ತ್ರಿವೇಣಿ ಸಂಗಮಗಳು ಆ ಬ್ರಹ್ಮ ಮಾರ್ಗವನ್ನು ಬಂದು ಮಾಡಿರುತ್ತವೆ. ಬಂಧ ಎಂದರೆ ಗ್ರಂಥಿ. ಈ ಬಂಧನಗಳಿಗೆ ಬ್ರಹ್ಮ ವಿಷ್ಣು ಮತ್ತು ರುದ್ರ ಗ್ರಂಥಿಗಳು ಎನ್ನುತ್ತಾರೆ. ಬ್ರಹ್ಮಮಾರ್ಗವನ್ನು ಬಂದು ಮಾಡಿರುವ ಗ್ರಂಥಿಗಳನ್ನು ಛಧಿಸಿ (ಕತ್ತರಿಸು), ಅದರೊಳಗೆ ಸೇರುವತನಕ ಉಸಿರು ಚಂದ್ರ (ಇಡಾ) ಹಾಗೂ ಸೂರ್ಯ (ಪಿಂಗಳ) ನಾಡಿಗಳಲ್ಲಿ ಚಲಿಸುತ್ತದೆ. ಈ ಗ್ರಂಥಿಗಳ ಛಧಿಸುವಿಕೆಯೇ ಯೋಗ ಸಾಧನೆ.

ಲಲಿತಾ ಸಹಸ್ರನಾಮದಲ್ಲಿ ಮೂಲಾಧಾರ, ಮಣಿಪುರ, ಅಜ್ಞಾ ಚಕ್ರಗಳಲ್ಲಿ ಬ್ರಹ್ಮ ಗ್ರಂಥಿ, ವಿಷ್ಣು ಗ್ರಂಥಿ, ರುದ್ರ ಗ್ರಂಥಿಗಳನ್ನು ಹಾಗೂ ಅವನ್ನು ಛೇದಿಸಿ, ಶಕ್ತಿ ಶಿವನನ್ನು ಸೇರುವ ವಿಚಾರ ಹೇಳಿದ್ದಾರೆ. ಯೋಗಾಭ್ಯಾಸ ಪರಿಪಕ್ವವಾದಾಗ ಶಕ್ತಿ ತನ್ನ ಸ್ಥಾನದಿಂದೆದ್ದು ಸುಷುಮ್ನೆಯಲ್ಲಿ ಹರಿದು ಶಿವನನ್ನು ಕೂಡುತ್ತಾಳೆ. ಅದು ಪರಿಪೂರ್ಣತೆ. ಆಗ ಮುಕ್ತಿ ಮಾರ್ಗ ದೊರಕುತ್ತದೆ.

'ಅಭಿಸಾರ'ವೆಂದರೆ ಪ್ರಣಯಿಗಳು ಭೇಟಿಮಾಡುವ ಸ್ಥಳ. ಆದ್ದರಿಂದ ಈ ಕವನದ ಪದಗಳ ಸಾಮಾನ್ಯವಾದ ಅರ್ಥದಲ್ಲಿ ಇಲ್ಲಿಯ ವಿಷಯ ಪ್ರೇಮಿಗಳ ಹಾಗೂ ಆನಂತ ಪ್ರಣಯ ಎನ್ನಿಸುತ್ತದೆ.

ಮೇಲೆ ಹೇಳಿದಂತೆ ಈ ಜನ್ಮದ ಅಯಸ್ಕಾಂತದ ಆಯುಷ್ಯ ಮುಗಿಯುವ ತನಕ ಉಸಿರಾಟ ಕ್ರಿಯೆಯಲ್ಲಿ ಪ್ರಾಣ ಉತ್ತರ ಧೃವದಿಂದ ದಕ್ಷಿಣ ಧೃವದ ವರೆಗೆ ಬಂದು (ಮೂಲಾಧಾರದ ವರೆಗೆ) ಮತ್ತೆ ಉತ್ತರಕ್ಕೆ ಹೋಗುತ್ತದೆ. ನಂತರ ಈ ಜನ್ಮದ ಸಾವು ಬರುತ್ತದೆ. ಕರ್ಮ ಸಿದ್ಧಾಂತದಂತೆ ಕ್ರರ್ಮ ಮುಗಿಯುವ ತನಕ ಮತ್ತೆ ಮತ್ತೆ ಜನನ ಮರಣಗಳು ಇರುತ್ತವೆ. ಆದ್ದರಿಂದ ಜನನ, ಜೀವನ, ಮರಣ ಚಕ್ರವನ್ನು ಅನಂತ ಪ್ರಣಯ ಎನ್ನಬಹುದು.

'ಅಭಿಸಾರೆ' ಪದಕ್ಕೆ ನೀರಾಜನ; ಶೋಧನ ಕ್ರಿಯೆ, ಶುದ್ಧೀಕರಣ ಕ್ರಿಯೆ, ಎಂದು ಅಪರೂಪವಾದ ಅರ್ಥಗಳಿವೆ. ಯೋಗ ದೃಷ್ಟಿಯಲ್ಲಿ ದೇಹದಲ್ಲಿ ಶಿವ ಶಕ್ತಿ ಮಿಲನವಾಗುವ ತನಕ, ನಡೆಯುವ ಯೋಗಾಭ್ಯಾಸ ಅನಂತ ಪ್ರಣಯ. ಯೋಗಾಭ್ಯಾಸದಿಂದ ಈ ಕರ್ಮದ ಶೇಷವನ್ನು ಶುದ್ಧೀಕರಣ ಕ್ರಿಯೆಗಳಿಂದ ಶೀಘ್ರವಾಗಿ ಕಡಿಮೆ ಮಾಡಿ ಶಿವ ಶಕ್ತಿಯರ ಮಿಲನ ಅಥವಾ ಐಕ್ಯತೆಯಲ್ಲಿ ಪ್ರಣಯ ಪರಿಪೂರ್ಣತೆ ಹೊಂದುವಂತೆ ಮಾಡಬಹುದು. ಭೂರಂಗ ಎಂದರೆ ಮೂಲಾಧಾರ. ಯೋಗದ ಪ್ರಾಣಾಯಾಮ ನಮ್ಮ ಕರ್ಮ ಶೇಷದ ಶುದ್ಧೀಕರಣ ಕ್ರಿಯೆ. ಜಾಬಾಲ ಉಪನಿಷತ್ ಯೋಗದ ಪ್ರತಿ ಒಂದು ಪ್ರಾಣಯಾಮ ಕ್ರಿಯೆಯೂ ಒಂದು ತಿಂಗಳ ಕರ್ಮ ಕಳೆಯುತ್ತದೆ ಎಂದು ತಿಳಿಸುತ್ತದೆ [೫]. ಆದ್ದರಿಂದ ಚುಂಬಕಗಾಳಿಯನ್ನು ಮೂಲಾಧಾರಕ್ಕೆ ಅಭಿಸಾರಕೆ ಅಥವಾ ಶುದ್ಧಿಕರಣಕ್ಕೆ ಮತ್ತೆ ಮತ್ತೆ ಕರೆಯುವ ಪ್ರತಿ ಕ್ರಿಯೆಯಲ್ಲೂ ಒಂದು ತಿಂಗಳ ಕರ್ಮ ಕಳೆಯುತ್ತದೆ. ಆದ್ದರಿಂದ ಯೋಗಾಭ್ಯಾಸದಲ್ಲಿ ಪ್ರಾಣ ತುಂಬಿ ತುಳುಕಿ ಕರ್ಮ ಶೇಷ ತೀರುತ್ತಿದೆ ಎನ್ನಬಹುದು. ಇಡಾ ಪಿಂಗಳಗಳಲ್ಲಿ ನಾಡಿಗಳಲ್ಲಿ ಹರಿದು ಪ್ರಾಣ ಶಿರಸ್ಸನ್ನು ಮುಟ್ಟಿದಾಗ ಅದು ಆತ್ಮಕ್ರೀಡೆ ಎನ್ನುತ್ತಾರೆ. ಮುಣ್ಡಕ ಉಪನಿಷತ್ [೬] ಯೋಗಾಭ್ಯಾಸಿಗೆ ಪ್ರತಿ ಉಸಿರಿನ ಕ್ರಿಯೆಯಲ್ಲೂ ಆತ್ಮಕ್ರೀಡೆ ಗೋಚರವಾಗುತದೆ ಎಂದು ಹೇಳುತ್ತದೆ. ಇದು ಈ ಕವನದ ತನ್ನೊಳು ತಾನೆ ಸವಿಯುವ ಸವಿ.

ಭೂರಂಗವನ್ನು ಶುದ್ಧೀಕರಿಸಿ, ಕರ್ಮ ಕಳೆದಾಗ ಸಮಾಧಿ ಸ್ಥಿತಿ ಒದಗುವುದು. ಇದು ಮಿಲನದ ಅನುಭವ. ಅಲ್ಲಿಯವರೆಗೂ ಯೋಗಾಭ್ಯಾಸದಿಂದ ಈ ಕರ್ಮದ ಶುದ್ಧಿಕರಣವನ್ನೂ ಹಾಗೂ ಈ ಅಭ್ಯಾಸದಿಂದ ಆಗುವ ಉಲ್ಲಾಸ ಈ ಚರಣ ಉಲ್ಲೇಖಿಸಿದೆ.

ಚರಣ -3

ಭೂವನ ಕುಸುಮಿಸಿ ಪುಲಕಿಸಿ ಮರಳಿಸಿ ಕೋಟಿ ಕೋಟಿ ಸಲ ಹೊಸಯಿಸಿತು
ಮಿತ್ರನ ಮೈತ್ರಿಯ ಒಸಗೆ ಮಸಗದಿದೆ ಮರುಕದ ಧಾರೆಯ ಮಸೆಯಿಸಿತು ॥

ಭೂವನ ಕುಸುಮಿಸುವುದು:

ಸಂಯುಕ್ತ ಭೂವನ ಪದವನ್ನು ಭೂ ಮತ್ತು ವನ ಎಂದು ವಿಂಗಡಿಸಬಹುದು. ಭೂ ಎಂದರೆ ಭೂಮಿ, ವನ ಎಂದರೆ ನೀರು ಎಂಬ ಅರ್ಥಕೊಡುತ್ತವೆ. ಇವುಗಳು ಯೋಗದ ಮೂಲಾಧಾರ ಮತ್ತು ಸ್ವಾಧಿಷ್ಠಾನ ಚಕ್ರಗಳ ಭೂತಗಳು. ಕುಸುಮಿಸು ಎಂದರೆ ಪಕ್ವಮಾಡು, ಅರಳಿಸು ಅರ್ಥವಿದೆ. ಪುಲಕಿಸು ಅಂದರೆ ರೋಮಾಂಚನಗೊಳಿಸಿ, ಮರಳಿಸಿ ಅಂದರೆ ಮತ್ತೆ ಬರಿಸುವುದು. ಹೊಸಯಿಸಿತು ಎಂದರೆ ಮಥಿಸು ಎಂದು ಅರ್ಥ ಮಾಡಿಕೊಳ್ಳಬಹುದು. ಯೋಗಾಭ್ಯಾಸದ ಪ್ರಾಣಾಯಾಮ ಕ್ರಿಯೆ ಕೆಳ ಚಕ್ರಗಳನ್ನು ಪರಿಪಕ್ವಮಾಡುತ್ತ, ಮತ್ತೆ ಮತ್ತೆ ರೋಮಾಂಚನಗೊಳಿಸಿ ಕೋಟಿ ಕೋಟಿ ಸಲ ಮಥನ ಮಾಡುತ್ತಿದೆ ಎನ್ನಬಹುದು.

ಮಿತ್ರನ ಮೈತ್ರಿಯ ಒಸಗೆ : ಮಿತ್ರನ ಅಂದರೆ ಆದಿತ್ಯನ, ವರುಣನ ಮೈತ್ರಿಯ ಅಂದರೆ ಸ್ನೇಹದ, ಒಸಗೆ ಅಂದರೆ ಸಂತೋಷ, ಮಸಗದಿದೆ ಅಂದರೆ ಹರಡದಿದೆ ಮರುಕದ ಅಂದರೆ ಪ್ರೀತಿಯ ಧಾರೆಯು ಮಸೆಯಿಸಿತು ಅಂದರೆ ತೀವ್ರಗೊಳಿಸಿತು ಎಂದು ಪದಗಳನ್ನು ಅರ್ಥೈಸಬಹುದು. ಕೋಟಿ ಕೋಟಿ ಮಥನದಿಂದ ಮಿಲನವಾಗಿ ಅದರ ಆನಂದ ಎಲ್ಲೆಡೆಯಲ್ಲು ಇನ್ನೂ ಹರಡಿಲ್ಲ. ಆದರೂ ಪ್ರೀತಿ ತೀವ್ರವಾಗಿದೆ ಎನ್ನಬಹುದು. ಅನಂತ ಪ್ರಣಯ ಸತತವಾಗಿ ನಡೆಯುತ್ತಿದೆ ಎನ್ನಬಹುದು.

ಚರಣ -4


ಅಕ್ಷಿನಿಮೀಲನ ಮಾಡದೆ ನಕ್ಷತ್ರದ ಗಣ ಗಗನದಿ ಹಾರದಿದೆ
ಬಿದಿಗೆಯ ಬಿಂಬಾಧರದಲಿ ಇಂದಿಗು ಮಿಲನದ ಚಿನ್ಹವು ತೋರದಿದೆ ॥

ಅಕ್ಷಿನಿಮೀಲನ : ಅಕ್ಷಿನಿಮೀಲನ ಎಂದರೆ ಕಣ್ಣು ಮುಚ್ಚುವುದು ಅಥವಾ ಮಿಟುಕಿಸುವುದು. ಗಗನ ಪದಕ್ಕೆ ಆಕಾಶ, ಶೂನ್ಯ, ಶಬ್ದ ಎಂಬ ಅರ್ಥಗಳಿವೆ. ಹಾರು ಪದಕ್ಕೆ ಆಕರ್ಷಿಸುವುದು ಎನ್ನುವ ಅರ್ಥವಿದೆ. ಗಗನ ಪದಕ್ಕೆ ದಹರಾಕಾಶ (ಒಳ ಆಕಾಶ) ಎನ್ನುವ ಅರ್ಥವೂ ಇದೆ. ಇದನ್ನು ಶೂನ್ಯ ಪ್ರದೇಶ ಎನ್ನಬಹುದು.

ಯೋಗಶಾಸ್ತ್ರಗಳಲ್ಲಿ ಜ್ಯೋತಿ, ಶಾಂಭವೀ, ಷಣ್ಮುಖಿ ಮುದ್ರೆ ಮಾಡಿದಾಗ ಮಿಣುಕದ ನಕ್ಷತ್ರ ಕಾಣುತ್ತದೆ ಎನ್ನುತ್ತಾರೆ. ಹೀಗೆ ಮಿಣುಕದ ನಕ್ಷತ್ರ ಕಾಣುವುದು ಯೋಗ ಸಿದ್ಧಿಯಾದಾಗ ಮಾತ್ರ. ಅಕ್ಷಿನಿಮೀಲನ ಮಾಡದೆ ನಕ್ಷತ್ರದ ಗಣ ಗಗನದಿ ಹಾರದಿದೆ ಎಂದರೆ ದಹರಾಕಾಶದಲ್ಲಿ ನಕ್ಷತ್ರ ಕಾಣದಿದೆ ಎನ್ನಬಹುದು.

ಬಿದಿಗೆಯ ಬಿಂಬಾಧರ, ಮಿಲನದ ಚಿನ್ಹೆ

ಓಂ ಕಾರ ಅಕಾರ, ಉಕಾರ, ಮಕಾರ ಎಂಬ ಮೂರು ಮಾತ್ರೆಗಳು ಮತ್ತು ಅರ್ದಮಾತ್ರೆ ಮ್ ಕಾರದಿಂದಾಗಿದೆ ಎನ್ನುತ್ತಾರೆ. ಅಕಾರ ಉಕಾರ ಮಕಾರ ಬಿಂದುವಿನಿಂದ ಉಗಮಿಸಿದ ಜೀವಿಗಳನ್ನೂ ಅರ್ಧಮಾತ್ರೆ ಅದಿಯನ್ನೂ ಸಂಕೇತಿಸುತ್ತದೆ ಎನ್ನುತ್ತಾರೆ. ಸಂಸ್ಕೃತ ಲಿಪಿಯಲ್ಲಿ ಓಂಕಾರವನ್ನು ನಾಲ್ಕು ಅರ್ಕಗಳು ಮತ್ತು ಬಿಂದುವಿನಿಂದ (ಅಥವಾ ತಾರೆಯಿಂದ) ಸಂಕೇತಿಸುತ್ತಾರೆ. ಚಿತ್ರ ೧ ನೋಡಿ.



ಚಿತ್ರ - ೧

ಮೊದಲ ಅರ್ಕ ಜಾಗ್ರತಿ, ಎರಡನೆ ಅರ್ಕ ಸ್ವಪ್ನ, ಮೂರನೆ ಅರ್ಕ ಸುಷುಪ್ತಿ ನಾಲ್ಕನೆ ಅರ್ಕ ಮಾಯೆ ಮತ್ತು ಬಿಂದು ಆದಿಯನ್ನು ಸಂಕೇತಿಸುತ್ತವೆ. ಸುಷುಪ್ತಿಯಂದರೆ ಸ್ವಪ್ನ ವಿರದ ಗಾಢ ನಿದ್ರೆಯ ಸ್ಥಿತಿ. ತುರೀಯ ಎಂದರೆ ಯೋಗದ ಸಮಾಧಿ ಸ್ಥಿತಿ. ಲೌಕಿಕ ಜೀವನದಲ್ಲಿ ಮಾಯೆಯ ದೆಸೆಯಿಂದ ಬಿಂದುವನ್ನು ನಾವು ಕಾಣುವುದಿಲ್ಲ. ಯೋಗದಲ್ಲಿ ಮಾಯೆಯನ್ನು ಗೆದ್ದು ತುರೀಯ ಅಥವಾ ಸಮಾಧಿ ಸ್ಥಿತಿಯನ್ನುಗಳಿಸಿದರೆ ಆಗ ನಮ್ಮ ಮೂಲವಾದ ಬಿಂದುವನ್ನು ಕಾಣಬಹುದು. ನಾಲ್ಕನೇ ಅರ್ಕಕ್ಕೆ ಚಂದ್ರ ಎನ್ನುತ್ತಾರೆ. ಈ ಚಂದ್ರನನ್ನೇ ಶಿವ ಧರಿಸುವುದು. ಇದೇ ಬಿದಿಗೆಯ ಚಂದ್ರ ಎನ್ನಬಹುದು. ಶಿವ ಶಕ್ತಿ ಮಿಲನವಾಗುವುದು ತುರೀಯ ಸ್ಥಿತಿಯಲ್ಲಿ. ನಾವು ತುರೀಯ ಸ್ಥಿತಿ ಮುಟ್ಟದಿರುವ ತನಕ ಬಿಂದು ಅಥವಾ ಮಿಲನದ ಚಿನ್ಹೆ ಕಾಣವುದಿಲ್ಲ. ಅಲ್ಲಿಯವರೆಗೂ ಶಿವ ಶಕ್ತಿಯರ ಅನಂತ ಪ್ರಣಯ ನಡೆಯುತ್ತಿರುತ್ತದೆ.

ಮುಕ್ತಾಯ

ಅನಂತ ಪ್ರಣಯ ವಿಸ್ಮಯಕರವಾದ ಕವನ. ಯೋಗಾಭ್ಯಾಸದ ಪ್ರಾಣಾಯಾಮ, ಶುದ್ಧೀಕರಣ ಇವುಗಳ ಒಳತಿರುಳನ್ನು ಉತ್ತರ ದಕ್ಷಿಣ ಧ್ರುವಗಳಲ್ಲಿ ಬೀಸುವ ಗಾಳಿಯ ಉಪಮಾನದಲ್ಲಿ ತಿಳಿಸಿದ್ದಾರೆ. ಮುಕ್ತಿಯಾಗುವರೆಗೂ ಜೀವನದಲ್ಲಿ ಮತ್ತು ಯೋಗಾಭ್ಯಾಸದಲ್ಲಿ ನಡೆಯುವ ಉಸಿರಾಟದ ಉಪಮಾನದಲ್ಲಿ ಜೀವಾತ್ಮ ಪರಮಾತ್ಮರಲ್ಲಿರುವ ಪ್ರಣಯವನ್ನು ವಿವರಿಸಿದ್ದಾರೆ.

ಕವನದ ಶಬಾರ್ಥ:

ಶಬ್ದ ಗಾರುಡಿಗ ಬೇಂದ್ರೆಯವರ ಕವನಗಳ ಅರ್ಥ ತಿಳಿಯಬೇಕಾದರೆ ಪ್ರತಿ ಪದದ ಅರ್ಥವನ್ನು ನೋಡಬೇಕು ಹಾಗೂ ಮನನ ಮಾಡಬೇಕು. ಅನಂತ ಪ್ರಣಯ ಕವನದ ಪದಗಳಿಗೆ ರೆವ್ ಕಿಟ್ಟೆಲ್, ಪ್ರೊ. ಜಿ. ವಿ ಯವರ ಕ್ರಿಸ್ತ ನಿಘಂಟುಗಳಲ್ಲಿ ಕಾಣುವ ಅರ್ಥಗಳನ್ನು ಕೆಳಗೆ ಕೊಟ್ಟಿದೆ

ಅಕ್ಷಿ : ಕಣ್ಣು

ಅಧರ : ಕೀಳು; ಅಧೋಭಾಗ; ಉಡಿಯಿಂದಲೂ ಕೆಳಗೆ, ಹೀನ, ಸಮಾನ, ಕೆಳತುಟಿ, ಕೆಂಪು

ಅಭಿಸಾರ : ಪ್ರಿಯರ ಭೇಟಿಗಾಗಿ ಸಂಕೇತ ಸ್ಥಾನ; ಶುದ್ಧೀಕರಣ; ಶೋಧನ; ನಿರಾಜನ;

ಒಸಗೆ : ಸಂತೋಷ, ಹಬ್ಬ, ಶುಭ, ಮದುವೆ

ಕುಸುಮಿಸಿ : ಕುಸುಮು (ಕುಸುಬು) ಕಲ್ಲಿನ ಮೇಲೆ ಬಟ್ಟೆಬಿಗೆಯಲಿ ಕುಕ್ಕುವುದು; ಹೂವಾಗು, ಅರಳು

ಕೋಟಿ : ಕೊನೆ, ತುದಿ, ನೂರು ಲಕ್ಷ, ಲೆಕ್ಕವಿಲ್ಲದುದು, ಅಸಂಖ್ಯವಾದುದು, ತರ ಗತಿ, ವರ್ಗ, ಮೂಲೆ, ಕೋಣ.

ಗಾಳಿ : ಎಲರು, ವಾಯು, ದೆವ್ವ, ಪಿಶಾಚಿ, ವಾಸನೆ, ಸುಳಿವು, ಪ್ರಭಾವ, ವರ್ಚಸ್ಸು, ನಿಂದೆ, ಬೈಗಳು

ಚುಂಬಕ : ಅಯಸ್ಕಾಂತ (ಆಕರ್ಷಣೆಯ) ಸೆಳತ; ಮುತ್ತುಕೊಡುವ

ತಿಂಗಳು ತಿಂಗಳು : ಪ್ರತಿ ಮಾಸವೂ

ನಗೆ : ನಗು, ವಿನೋದ; ಅರಳುವಿಕೆ

ನವೆ : ತುರಿಸು, ತಗ್ಗುತ್ತಿದೆ (ಇಳಿಯುವುದು ಕಡಿಮೆ ಯಾಗುವುದು)

ತುಳುಕು : ಸೇರಿಸು
ನಿಮೀಲನ : ಮುಚ್ಚುವುದು; ರೆಪ್ಪೆ ಬಡಿಯುವುದು, ಕಣ್ಣು ಮಿಟಿಕುವುದು; ಎವೆಯಿಕ್ಕುವುದು.
ಪುಲಕಿಸಿ : ರೋಮಾಂಚನ
ಬಿಂಬ : ತೊಂಡೆಬಳ್ಳಿ, ತೊಂಡೆಹಣ್ಣು ಸೂರ್ಯ ಚಂದ್ರರ ಪ್ರಭಾವಲಯ
ಮರಳಿಸಿ : ಮತ್ತೆ ಬರಿಸುವುದು; ಕುದಿಸುವುದು, ಬಿಸಿ ನೊರೆ ಗುಳ್ಳೆ ಬರಿಸುವುದು
ಮರುಕ : ನವಿಲು; ಬೇಗುದಿ, ಅಳಲು ಅಕ್ಕರೆ, ಪ್ರೀತಿ, ದಯೆ, ಕರುಣೆ
ಮುಸಗು : ಹರಡು; ವ್ಯಾಪಿಸು
ಮಸೆಯಿಸು : ತಿಕ್ಕು; ತೀವ್ರಗೊಳಿಸು; ನಾಶಮಾಡು
ಮೀಯಿಸು : ತೊಯ್ಯಿಸು
ರಂಜಿಸು : ಅಪ್ಪು, ಸುತ್ತುಹಾಕು, ಸಮಾಧಾನ ಮಾಡು, ರಮಿಸು
ಹೊಸಮಿಟುಕು : ಮಥಿಸು, ನೂತನ ಅನುಭವ ಕೊಡಿಸು
ನಕ್ಷತ್ರ : ಚುಕ್ಕಿ

In the Gheranda Samhita (Verses 28-30) it is written:

"The Sun is in the navel and the moon in the head. The nectar that comes from the moon is consumed by the sun, and the life force is gradually used up in this way."

ಆಧಾರ

೧. ಔದುಂಬರಗಾಥೆ ಸಂಪುಟ ೨ ಪುಟ ೨೩೩.

೨. ಪವಮಾನ (೧೩.೨೦) ಔದುಂಬಗಾಥೆ ಸಂಪುಟ-೬ ಪುಟ ೯೬.

೩. ದೇಹೇಸ್ಮಿನ್ವರ್ತತೆ ಮೇರುಃ ಸಪ್ತದ್ವೀಪಸಮನ್ವಿತಃ
ಸರಿತಃ ಸಾಗರಾಃ ಶೈಲಾಃ ಕ್ಷೇತ್ರಾಣಿ ಕ್ಷೇತ್ರಪಾಲಕಾಃ ॥ ಶಿವ ಸಂಹಿತ ೨-೧ ॥

ಸೃಷ್ಟಿಸಂಹಾರಕರ್ತಾರೌ ಭ್ರಮನ್ತೌ ಶಶಿಭಾಸ್ಕರೌ
ನಭೋ ವಾಯುಶ್ಚ ವಹ್ನಿಶ್ಚ ಜಲಂ ಪೃಥ್ವೀ ತಥೈವ ಚ ॥ ಶಿವ ಸಂಹಿತ ೨.೩॥

೪. ದೆಹೊ ದೆವಾಲಯಃ ಪ್ರೋಕ್ತಃ ಸ ಜೀವಃ ಕೆವಲಃ ಶಿವಃ .
ತ್ಯಜೆದಜ್ಞಾನನಿರ್ಮಾಲ್ಯಂ ಸೊಹಂಭಾವೆನ ಪೂಜಯೆತ್ .. ೨.೧ (ಮೈತ್ರೆಯ್ಯುಪನಿಷತ್)

೫) ಜಾಬಾಲ ಉಪನಿಷತ್

೬) ಪ್ರಣೊ ಹ್ಯೆಷ ಯಃ ಸರ್ವಭೂತ್ರೈರ್ವಿಭಾತಿ
ವಿಜಾನನ್ ವಿದ್ವಾನ್ ಭವತೆ ನಾತಿವಾದೀ ।
ಆತ್ಮಕ್ರೀಡ ಆತ್ಮರತಿಃ ಕ್ರಿಯಾವಾ-
ನೆಷ ಬ್ರಹ್ಮವಿದಾಂ ವರಿಷ್ಠಃ॥ ಮುಣ್ಡಕೊಪನಿಷತ್ ೩.೧.೪

ಸಮಾಜ ನಿಷ್ಠೆ ಎಂದರೇನು?

■ ಮೂಲ : **ದ.ರಾ. ಬೇಂದ್ರೆ**

ಕನ್ನಡಕ್ಕೆ ; **ಆನಂದ ಝುಂಜರವಾಡ**

('ಸಮಾಜನಿಷ್ಠೆ ಎಂದರೇನು?' ಎಂಬ ಈ ಪ್ರಶ್ನೆಯನ್ನು ಮಹಾರಾಷ್ಟ್ರದ ಕೆಲವು ಪ್ರಖ್ಯಾತ ವಿದ್ವತ್ ಜನರಿಗೆ ಕೇಳಲಾಗಿತ್ತು. ನಮಗೆ ಬಂದ ಉತ್ತರ ರೂಪದ ಪತ್ರಗಳಲ್ಲಿ ಮಹಾರಾಷ್ಟ್ರದ ಅತ್ಯಂತ ಪ್ರಭಾವೀ ಮೂವರು ಚಿಂತಕರ ಸ್ಪಂದನಗಳನ್ನು - ದ.ರಾ. ಬೇಂದ್ರೆ, ಪಿ.ಕೆ. ಬೇಡೇಕರ ಹಾಗೂ ಆಚಾರ್ಯ ಶಂ.ದಾ. ಜಾವಡೇಕರ ಇವರ ಬರಹಗಳನ್ನು ಇಲ್ಲಿ ಸಾದರ ಪಡಿಸಿದ್ದೇನೆ. ಮುಂದಿನ ಸಂಚಿಕೆಗಳಲ್ಲಿ ಇನ್ನೂ ಹಲವು ಚಿಂತಕರ ಬರಹಗಳು ಪ್ರಕಟವಾಗಲಿವೆ.

– ಕಾರ್ಯಕಾರಿ ಸಂಪಾದಕರು, 'ಸನ್ಮತಿ' ಪತ್ರಿಕೆ)

ನಿಷ್ಠೆಯ ನೆಲೆಯಲ್ಲಿ ಸಮಾಜನಿಷ್ಠೆಯ ಸ್ವರೂಪ
(Society as such there is nothing)

ನಿಷ್ಠೆ ಎಂದರೆ ನಮ್ಮೊಳಗಿನ ಪ್ರಬಲ ಶ್ರದ್ಧೆಯೇ ಆಗಿದೆ. 'ಸಮಾಜನಿಷ್ಠೆ' ಈ ಎರಡು ಶಬ್ದಗಳಲಿ 'ನಿಷ್ಠೆ' ಈ ಶಬ್ದದ ಅರ್ಥವನ್ನು ಸರಿಯಾಗಿ ತಿಳಿದರೆ ಆಗ ಬೇರೆ ಯಾವ ಹೆಚ್ಚಿನ ಗೊಂದಲಗಳೂ ನಮ್ಮನ್ನು ಕಾಡಲಾರವು. ಬದುಕಿಗೆ ಪರಿಪೋಷಕವಾದ ಒಂದು ಮನಃಸ್ಥಿತಿಯೇ ಶ್ರದ್ಧೆ ಎನಿಸಿಕೊಳ್ಳುತ್ತದೆ. ಈ ಶ್ರದ್ಧೆಯು ಬದುಕಿನಾಚೆಗೆ ಇರುವಂತಹುದಲ್ಲ. ಅದರೊಳಗೇ ಇರುವತಂಹದು. ಈ ಶ್ರದ್ಧೆಯೇ ಗಟ್ಟಿಯಾಗಿ, ಸ್ಥಿರವಾಗಿ ಸ್ಥಾಪಿತವಾದರೆ ಅದನ್ನೇ ನಿಷ್ಠೆ ಎನ್ನುತ್ತೇವೆ. ಶ್ರದ್ಧೆಯ ಸ್ಥಾವರ-ಸ್ಥಿತಿಯೇ ನಿಷ್ಠೆ ಆಗಿದೆ.

ಆದರೆ, ಕೆಲವರು ಈ ಬಗೆಗೆ ಒಂದು ತಕರಾರು ಎತ್ತುತ್ತಾರೆ. ಶ್ರದ್ಧೆಯ ದುರುಪಯೋಗವನ್ನು ಮನುಷ್ಯರು ಅತಿಯಾಗಿ ಮಾಡಿಕೊಳ್ಳುತ್ತಾರಾದ್ದರಿಂದ ಶ್ರದ್ಧೆಗಿಂತ ತರ್ಕವೇ ಮೌಲಿಕವಾದುದು

ಎಂಬುದು ಅವರ ತರ್ಕ. ಆದರೆ ಈ ಶ್ರದ್ಧೆ ಹಾಗೂ ತರ್ಕಗಳ ಮೌಲ್ಯಾತ್ಮಕತೆ ತೀರ ಪ್ರತ್ಯೇಕವಾಗಿದೆ ಹಾಗೂ ಭಿನ್ನವೂ ಆಗಿದೆ. ನಾವು 'ತೂಲನೀಯ' ವಸ್ತುಗಳ ನಡುವೆ ತೌಲನಿಕ-ದೃಷ್ಟಿಯ ಆಕಲನ ಮಾಡಬಹುದೆ ಹೊರತು, 'ಅತೂಲನೀಯ'ವಾದುದರ ನಡುವೆ ತಾರತಮ್ಯವನ್ನು ಹುಡುಕಬಾರದು. ಶ್ರದ್ಧೆಗೆ ತನ್ನದೇ ಆದ ಸ್ವಾಯತ್ತ ಪರಿಪೂರ್ಣತೆ ಇದೆ. ತರ್ಕವೂ ತನ್ನದೇ ಆದ ಬಗೆಯಲ್ಲಿ ಪರಿಪೂರ್ಣವಾಗಿ ಮಾವಿನಗಿಡಕ್ಕೆ ಬಿಟ್ಟ ಪ್ರತಿ ಮಾವಿನ ಹಣ್ಣೂ ಪರಿಪೂರ್ಣವಾಗಿರುವಂತೆಯೇ ಇವುಗಳ ಸ್ವರೂಪವಿದೆ. ತರ್ಕದ ವಾಸ್ತವದೃಷ್ಟಿಯ ದುರುಪಯೋಗವೂ ಆಗೀಗ ಆದಂತೆಯೇ ಶ್ರದ್ಧೆಯ ದುರ್ಬಳಕೆಯೂ ಆಗೀಗ ಆಗುತ್ತದೆ. ಆದರೆ, ಅಪವಾದವು ನಿಯಮವಲ್ಲ. ಶ್ರದ್ಧೆಯ ದುರ್ಬಳಕೆ ಮಾಡುವುದು ನೀಚತನವೇ. ಆದರೆ, ಅದರಿಂದ ಶ್ರದ್ಧಾವಂತ ಶುದ್ಧ ಮನಸ್ಸುಗಳಿಗೆ ಹಾನಿಯಾಗುತ್ತದೆ ಎಂಬ ಇತ್ತೀಚಿನವರ ಮಾತೇ ಸಮರ್ಥವಾಗುವುದಿಲ್ಲ. ಹಸುಗೂಸಿಗೆ ತನ್ನ ತಾಯಿಯ ಮೇಲೆ ಇರುವ ಶ್ರದ್ಧೆಯನ್ನು 'ಮಿಥ್ಯೆ' ಎಂದು ಎನ್ನುವುದಾದರೂ ಹೇಗೆ ಸಾಧ್ಯ?

ಈ ಮನುಷ್ಯರೊಳಗಿನ ಶ್ರದ್ಧೆಯು ನಿಷ್ಠೆಯ ರೂಪದಲ್ಲಿ ಗಟ್ಟಿಯಾಗಿ ಇರಲೆಂದೇ ಪ್ರಾಚೀನ ಕಾಲದ 'ದೇವರು', 'ಗುರು' ಹಾಗೂ 'ರಾಜ' ಈ ಪರಿಕಲ್ಪನೆಗಳು ಶತಮಾನಗಳ ರೂಢಗೊಂಡು, ತಮ್ಮತ್ತ ಎಲ್ಲ ಶ್ರದ್ಧಾವಂತ ಲಕ್ಷ್ಯವೂ ಗಾಢವಾಗಿರುವಂತೆ ಪ್ರಯತ್ನಿಸಿದವು. 'ತೀರ್ಥಂಕರ' ಎಂಬ ಪದ ಕಲ್ಪನೆಯೇ ದೇವತ್ವ, ಗುರುತ್ವ ಹಾಗೂ ರಾಜತ್ವ ಈ ಮೂರೂ ಸಂಕೇತಗಳು ಒಟ್ಟಾಗಿ ಒಂದುಗೂಡಿರುವುದರ ಸಂಜ್ಞೆಯಾಗಿದೆ. ತೀರ್ಥಂಕರನು, ನರೋತ್ತಮನೂ ಆಗಿದ್ದಾನೆ. 'ದೇವೋತ್ತಮ'ನೂ ಆಗಿದ್ದಾನೆ ಹಾಗೂ 'ಗುರೋತ್ತಮ'ನೂ ಆಗಿದ್ದಾನೆ.

ಆದರೆ, ಚರಿತ್ರೆಯಲ್ಲಿ ನಾವು ಕಾಣುವುದೆಂದರೆ, ರಾಜನು ದೇವರ ಅಂಶವೇ ಆಗಿದ್ದಾನೆ. ಆದ್ದರಿಂದ, ಅವನ ಮೇಲೆ ನಿಷ್ಠೆ ಇಡಬೇಕು ಎಂಬುದೇ ಹೆಚ್ಚು ಪ್ರಚಲಿತವಾಗಿದೆ. ಇದನ್ನ 'ರಾಜನಿಷ್ಠೆ' ಎನ್ನಬಹುದು. ಕೆಲವು ಸಂದರ್ಭಗಳಲ್ಲಿ ಈ ರಾಜರನ್ನೂ ತನ್ನ ಅಂಕಿತದಲ್ಲಿಟ್ಟುಕೊಂಡು ತನ್ನ 'ಧರ್ಮನಿಷ್ಠೆ'ಯ ಹಕ್ಕನ್ನೂ ಜನರ ಶ್ರದ್ಧೆಯ ಮೇಲೆ ಹೇರಿ ತನ್ಮೂಲಕ ಲಾಭವನ್ನು ಗಿಟ್ಟಿಸಿದವರೂ ಇದ್ದಾರೆ. 'ಪಾಪ-ಮುಕ್ತಿ'ಯ ಪಾಸುಗಳನ್ನು ಮಾರಾಟ ಮಾಡುವ ದುಷ್ಟತನದವರೆಗೂ ಈ ಡಾಂಭಿಕತೆಯ ಸೀಮೆ ವಿಸ್ತತಗೊಂಡಿದೆ. ಈ ಬಗೆಯಲ್ಲಿ ಜನರ ಶ್ರದ್ಧೆಯನ್ನು ಬರಸೆಳೆದು ಅದನ್ನು ಯಾವುದಾದರೂ ಕೊಟ್ಟಿಗೆಗೆ ಕಟ್ಟಿ ಹಾಕುವ ಪ್ರಯತ್ನಗಳು ನಡೆದಿವೆ. ಅವೂ ಕೂಡ ಕೆಲವು ಸಲ ಸಫಲವಾಗಿವೆ, ಕೆಲವು ಸಲ ವಿಫಲವಾಗಿವೆ.

ಆದರೆ, ಇಂದಿನ ಕಾಲವು 'ಸಮಾಜನಿಷ್ಠ'ವಾಗಿರಲು ಮನುಷ್ಯರೆದುರು ತನ್ನ ಬೇಡಿಕೆಯನ್ನು ಚಾಚುತ್ತಿದೆ. ಒಂದರ್ಥದಲ್ಲಿ ದೇವನಿಷ್ಠೆ, ಗುರುನಿಷ್ಠೆ ಹಾಗೂ ರಾಜನಿಷ್ಠೆ ಇವುಗಳೆ ತಾವೇ ಹಿಂದೆ ಸರಿದು ನಿಂತು ಈ 'ಸಮಾಜನಿಷ್ಠೆ'ಯ ಶಕ್ತಿ ಹಾಗೂ ಇತಿಮಿತಿಗಳೇನು ಎಂಬುದನ್ನು ತಮ್ಮ ಸಾಕ್ಷಿಗಣ್ಣಿನಿಂದ ನಿರೀಕ್ಷಿಸುತ್ತಿವೆ. ಹೇಗೆ ಪೂರ್ವದ ಮೂರು ನಿಷ್ಠೆಗಳು ಕಾಲೋಚಿತವಾಗಿ ಹಿನ್ನಡೆಯನ್ನು ಪಡೆದುವೋ ಹಾಗೆಯೇ ಈ 'ಸಮಾಜನಿಷ್ಠೆ'ಯಾದರೂ ಎಷ್ಟು ದಿನ ಮುನ್ನೆಲೆಯಲ್ಲಿ ನಿಲ್ಲಬಹುದು ಎಂಬುದು ಈ ಕಾಲದ ನಮ್ಮೆಲ್ಲರ ಪ್ರಶ್ನೆಯಾಗಿದೆ.

ಇನ್ನೊಂದು ಅರ್ಥವೂ ಇಲ್ಲಿರುವ ಸಾಧ್ಯತೆ ಇದೆ. ಕದಾಚಿತ್ ಈಗ ತೀರ ಬೇಡಿಕೆ ಇರುವ

'ಸಮಾಜನಿಷ್ಠೆ'ಯ ಹಿಂದೆ ಅಡಗಿ ನಿಂತ ಆ ತ್ರಿವಳಿ-ನಿಷ್ಠೆಗಳೇ. ಜನಾಂಗಗಳು ಈಗಿನ ತಮ್ಮ ನಿಷ್ಠೆಯ ಕೇಂದ್ರದಿಂದ ತಾವೇ ಕಳೆದುಕೊಂಡದ್ದೆಲ್ಲವನ್ನೂ ಗ್ರಹಿಸುತ್ತ ಪುನಃ ತಮಗೇ ಶರಣಾಗುವವೆಂದು ಕಾಯುತ್ತಲೂ ಇರಬಹುದು. ಇದೇನು ತೀರ ಅಸಂಭವನೀಯ ಕಲ್ಪನೆ ಏನಲ್ಲ.

ಹಾಗೆ ನೋಡಿದರೆ 'ಸಮಾಜನಿಷ್ಠೆ' ಎಂಬುದು ಮೂಲದಲ್ಲಿ ಒಂದು ಆರೋಗ್ಯಪೂರ್ಣವಾದ ಮೌಲ್ಯವೇ. ಆದರೂ '' 'ಕುಟುಂಬ'ಗಳ ಮೇಲಿನ ನಿಷ್ಠೆಯ ಕಾಲ ಮುಗಿದುಹೋಯಿತು'' ಎಂದು ನಂಬುವ ಕಾಲ ಎಂದೂ ಬರಲಾರದೆಂದೇ ಎನಿಸುತ್ತದೆ. ಕುಟುಂಬದ ಮುಂದಿನ ಮೆಟ್ಟಿಲೇ ಸಮಾಜವಾಗಿದೆ. ಒಂದು ಕುಟುಂಬವೆಂದರೆ ಅದೊಂದು 'ಸಮಾಜ'ದ ಅಂಗವೇ ಆಗಿದೆ. ಮನುಷ್ಯನು ಸಾಮಾಜಿಕವಾಗಿ ಬದುಕಬೇಕಾಗಿರುವುದರಿಂದ 'ಸಮಾಜನಿಷ್ಠೆ' ಎಂಬುದು ಅವನ ಅಂಗಭೂತ ಅವಶ್ಯಕತೆಯಾಗಿಯೇ ಸಾಮಾನ್ಯವಾಗಿ ಇರುತ್ತದೆ. ಆದರೆ, ಅದು ಚಳುವಳಿಗಳ ವಾದ-ಭೂಮಿಕೆಗಳ ವಸ್ತುವಾಗಿ ಅಲ್ಲಿರುವುದಿಲ್ಲ. ಅದೊಂದು ಬಗೆಯ 'ಸಾಮಾಜಿಕ ಎಚ್ಚರ'ವಾಗಿರುತ್ತದೆ. ಆದರೆ, ಅಂತರಂಗದ 'ನಿಷ್ಠೆ'ಯನ್ನು ಎಚ್ಚರವಾಗಿಟ್ಟುಕೊಳ್ಳುವುದು ಹೇಗೆ ಎಂಬುದು ಮುಖ್ಯ ಪ್ರಶ್ನೆಯಾಗಿದೆ. ನಿಜವಾದ 'ಸಮಾಜನಿಷ್ಠೆ' ಸಾರ್ವಜನಿಕವಾಗಿಯೇ ಎಚ್ಚರಗೊಂಡರೆ ಅಲ್ಲಿ ರಾಜ್ಯತಂತ್ರದ ಅವಶ್ಯಕತೆಯೇ ಇಲ್ಲವಾಗುತ್ತದೆ. ಅದೊಂದು ಸ್ವರ್ಗ-ಭೂಮಿಯೇ ಎನ್ನಿಸೀತು.

ಇನ್ನೂ ಒಂದು ಮುಖ್ಯವಾದ ಮಾತೆಂದರೆ, ಸಮಾಜವೂ ಮೊದಲಿಗಿಂತ ತೀರ ವಿಭಿನ್ನ ರೀತಿಯದಾಗಿ ರೂಪುಗೊಳ್ಳುತ್ತದೆ. ಹೊಸ ಹೊಸ ತಂತ್ರ-ಸಲಕರಣೆಗಳೂ ಇಂದು ಉಪಲಬ್ಧವಾಗಿದ್ದು, ನಿಸರ್ಗದಲ್ಲಿಯೇ ತೀರ ಹೊಸ ಬಗೆಯ ಸಮಾಜ ರಚನೆಯ ಬೀಜಗಳು ಅಡಗಿಕೊಂಡು ಕ್ರಿಯಾಶೀಲವಾಗಿವೆ ಏನೋ ಎನ್ನಿಸುತ್ತಿದೆ. 'ರೇಡಿಯೋ'ದಂತಹ ಉಪಕರಣಗಳು ಮಾನವ ಸಮಾಜದ ಪ್ರಗತಿಯ ಮುಂದಿನ ಹೆಜ್ಜೆಗಳನ್ನು ನಡೆಸುತ್ತಿವೆ. ಜೀವನ ಪ್ರೀತಿಯಿಂದ ತುಂಬಿ ತೂಗುವ ಹೊಸ ಮಾನವ ಸಮಾಜ ಉದಯಕ್ಕಾಗಿ ನಿಸರ್ಗವೇ ಒಂದು ವ್ಯವಸ್ಥೆಯನ್ನು ಮಾಡುತ್ತಿರುವಂತಿದೆ.

ಆಕರ: ೧೯೫೪ ಅಕ್ಟೋಬರ್-ನವೆಂಬರ್‌ನ 'ಸ್ಮೃತಿ' ಮರಾಠಿ ಪತ್ರಿಕೆ

ದಲಿತ ಹೋರಾಟ ಮತ್ತು ಜಾತಿ ಪ್ರಶ್ನೆಯ ಚರ್ಚೆಗಳು

■ ನಟರಾಜ ಕೆ.ಎಸ್.

ದಲಿತ ಸಂಘರ್ಷ ಸಮಿತಿ (DSS)ಯು ೧೯೭೪ರಿಂದಲೂ ಕೆಲಸ ಮಾಡುತ್ತಿದೆ. ಕೋಲಾರ, ಬೆಂಗಳೂರು, ಮೈಸೂರು ಹೀಗೆ ರಾಜ್ಯದ ಎಲ್ಲ ಕಡೆಯೂ ಇದೆ. ದ.ಸಂ.ಸ. ಜಾತಿ ಪ್ರಶ್ನೆಯನ್ನು ಪರಿಭಾವಿಸಿದ ಮತ್ತು ಜಾತಿ ಸಮಸ್ಯೆಯನ್ನು ಎದುರಿಸಿದ ಬಗೆ. ಜಾತಿ ಸಮಸ್ಯೆಯನ್ನು ವೈಚಾರಿಕ ಮತ್ತು ಹೋರಾಟದಲ್ಲಿ ಹೇಗೆ ತಂದುಕೊಂಡರು ಎನ್ನುವುದನ್ನು ಈ ಕೆಳಗಿನಂತೆ ನೋಡಬಹುದು.

೧. ಸೈದ್ಧಾಂತಿಕವಾಗಿ ದ.ಸಂ.ಸ. ಜಾತಿ ಪ್ರಶ್ನೆ (ಸಮಸ್ಯೆ)ಯನ್ನು 'ಚಾತುರ್ವರ್ಣ ಮತ್ತು ಜಾತಿ ಅಸಮಾನತೆಯ' ನೆಲೆಯ ಎರಡೂ ಚೌಕಟ್ಟುಗಳಲ್ಲಿ ಗ್ರಹಿಸಿದೆ. ಲೋಹಿಯವಾದ / ಲೋಹಿಯಾ ಚಿಂತನೆಗಳ ಪ್ರಭಾವವು ಆರಂಭದ ದ.ಸಂ.ಸ.ಯ ಮೇಲಾಗಿತ್ತು. ಲೋಹಿಯವಾದಿ ಚಿಂತನೆಯು ಬ್ರಾಹ್ಮಣ ವಿರೋಧದಿಂದ ಕೂಡಿದೆ. ದ.ಸಂ.ಸ. ಆರಂಭದ ಹೋರಾಟಗಾರರ ಮೇಲೆ ಲೋಹಿಯಾವಾದದ ಪ್ರಭಾವ ಇದ್ದ ಕಾರಣಕ್ಕಾಗಿ ಅದು ಚಾತುರ್ವರ್ಣ ವ್ಯವಸ್ಥೆಯ ವಿರೋಧವನ್ನು ಸ್ವೀಕರಿಸಿತು. ಹಾಗಾಗಿ ದ.ಸಂ.ಸ. ವೈಚಾರಿಕ ಗ್ರಹಿಕೆಯು ವರ್ಣವಿರೋಧದ ನೆಲೆ ಪಡೆಯಿತು. ಪುರೋಹಿತಶಾಹಿ ವಿರೋಧ ಮತ್ತು ಬ್ರಾಹ್ಮಣಶಾಹಿ ವಿರೋಧವು ಪ್ರಬಲವಾಗಿತ್ತು. ಚಾತುರ್ವರ್ಣ ಗ್ರಹಿಕೆಯಿಂದಲೇ ಪುರೋಹಿತಶಾಹಿ ಮತ್ತು ಬ್ರಾಹ್ಮಣಶಾಹಿ ವಿರೋಧವಿದೆ. ಆರಂಭದ ಕೆಲವು ವರ್ಷಗಳಲ್ಲಿ ದ.ಸಂ.ಸ. ರಾಜ್ಯಮಟ್ಟದಲ್ಲಿ ಮತ್ತು ಜಿಲ್ಲಾಮಟ್ಟದಲ್ಲಿ ತರಬೇತಿ ಶಿಬಿರಗಳನ್ನು ನಡೆಸುತ್ತಿತ್ತು. ಆ ತರಬೇತಿ ಶಿಬಿರಗಳಲ್ಲಿ ದೇವರು, ಧರ್ಮ ಮತ್ತು ಪುರೋಹಿತಶಾಹಿ

ಎಂಬ ವಿಷಯಗಳು ಇರುತ್ತಿತ್ತು. ದಲಿತರ ಬೌದ್ಧಿಕ ದಾರಿದ್ರ್ಯಕ್ಕೆ ಮತ್ತು ಇವರ ವೈಚಾರಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಹಿನ್ನಡೆಗೆ ಅವರು ನಂಬಿರುವ ದೇವರು, ಧರ್ಮ ಕಾರಣ. ಈ ದೇವರು, ಧರ್ಮವನ್ನು ನಂಬಿಸಿರುವಂತಹ ಪುರೋಹಿತಶಾಹಿ ಕಾರಣ (ಬ್ರಾಹ್ಮಣರು) ಎಂಬುದು ಅವರ ಗ್ರಹಿಕೆಯಾಗಿತ್ತು. ಹಳ್ಳಿಗಳ, ನಗರದ ಕಾರ್ಯಕರ್ತರಿಗೆ ಈ ಬಗೆಯ ತರಬೇತಿ ಶಿಬಿರಗಳಲ್ಲಿ ತಿಳುವಳಿಕೆಯನ್ನು, ಒಂದು ಬಗೆಯ ದೃಷ್ಟಿಕೋನವನ್ನು ಕೊಡುತ್ತಿದ್ದರು. ಹಾಗಾಗಿ ದ.ಸಂ.ಸ. ವೈಚಾರಿಕತೆಯ ಒಂದು ಪ್ರಬಲವಾದ ಅಂಶವೆಂದರೆ ಬ್ರಾಹ್ಮಣಶಾಹಿ / ಪುರೋಹಿತಶಾಹಿ ವಿರೋಧ. ಎಲ್ಲೆಲ್ಲಿ ಬ್ರಾಹ್ಮಣ/ ಪುರೋಹಿತಶಾಹಿ ವಿರೋಧ ಬರುತ್ತದೋ ಅದು ಮೂಲಭೂತವಾಗಿ ಭಾರತದ ಸಾಮಾಜಿಕ ವ್ಯವಸ್ಥೆಯನ್ನು ಚಾತುರ್ವರ್ಣ ವ್ಯವಸ್ಥೆಯಲ್ಲಿ ಗ್ರಹಿಸಿದಾಗ ಮಾತ್ರ ಇದು ಸಾಧ್ಯ. ಇದು ದ.ಸಂ.ಸ. ವೈಚಾರಿಕತೆಯೊಳಗಡೆ ಇರುವಂತಹ ಒಂದು ವಿನ್ಯಾಸವಾಗಿದೆ.

ಆದರೆ ದ.ಸಂ.ಸ. ವೈಚಾರಿಕತೆಯಲ್ಲಿ ಚಾತುರ್ವರ್ಣ ವಿನ್ಯಾಸವೊಂದೇ ಇಲ್ಲ. ಈ ಬ್ರಾಹ್ಮಣ ಜಾತಿ, ಒಕ್ಕಲಿಗ, ಕುರುಬ ಮತ್ತು ಉಳಿದೆಲ್ಲ ಸ್ಪೃಶ್ಯ ಮತ್ತು ಅಸ್ಪೃಶ್ಯ ಜಾತಿಗಳ ನಡುವಿನ ಅಸಮಾನತೆ ಅಂದರೆ 'ಜಾತಿ ಅಸಮಾನತೆ'ಯ ಚೌಕಟ್ಟು ದ.ಸಂ.ಸ.ಯ ವೈಚಾರಿಕತೆಯಲ್ಲಿರುವುದನ್ನು ಕಾಣಬಹುದು. ಜಾತಿ ಅಸಮಾನತೆಯ ಕುರಿತು ತರಬೇತಿ ಶಿಬಿರಗಳಲ್ಲಿ ಉಪನ್ಯಾಸ ಇರುತ್ತಿತ್ತು. ಅದು ಅಂಬೇಡ್ಕರ್ ವಿಚಾರವಾದ ಎಂಬ ವಿಷಯದಲ್ಲಿ ಈ ಬಗೆಯ ಜಾತಿ ಅಸಮಾನತೆಯ ದೃಷ್ಟಿಕೋನವು ಇರುತ್ತಿತ್ತು. ಆಗ ಇದು ಆರ್ಯರು -ದ್ರಾವಿಡರಿಂದ ಶುರುವಾಗಿ ಅಂಬೇಡ್ಕರ್‌ರು ಜಾತಿಯನ್ನು ಗ್ರಹಿಸಿದ್ದು ಮತ್ತು ಜಾತಿಯ ವಿನಾಶಕ್ಕೆ ಮಾಡಿದ ಹೋರಾಟಗಳು, ಪ್ರಯತ್ನಗಳ ಚರ್ಚೆ ಹಾಗೇ ಜಾತಿ ಅಸಮಾನತೆಯ ಪ್ರಶ್ನೆಯ ಚರ್ಚೆಯೂ ಆಗ ಇರುತ್ತಿತ್ತು. ಇಲ್ಲಿನ ಚರ್ಚೆಗೆ ಸಂಬಂಧಿಸಿದ ಬಿಡಿ ಬರಹಗಳಾವುವು ಇಲ್ಲ. ಇದಕ್ಕೆ ಸಂಬಂಧಿಸಿದಂತೆ ಗಟ್ಟಿಯಾದ ಲೇಖನವೆಂದರೆ ಬಿ. ಕೃಷ್ಣಪ್ಪನವರ 'ಕುವೆಂಪು ಕೃತಿಗಳಲ್ಲಿ ದಲಿತ ಪಾತ್ರ ಚಿತ್ರಣ'. ಇದು ಕುವೆಂಪು ಕೃತಿಯ ಬಗ್ಗೆ ಬರೆದಿದ್ದರೂ ಅದರಲ್ಲಿ ಜಾತಿ ಅಸಮಾನತೆಯ ಚಿತ್ರಣವೇ ಪ್ರಬಲವಾದ ಅಂಶವಾಗಿದೆ. ಮಧ್ಯಮ ಜಾತಿಯಲ್ಲಿ ಹುಟ್ಟಿದ ಕುವೆಂಪು ಬ್ರಾಹ್ಮಣರು ಮಾಡುವ ಶೋಷಣೆಯನ್ನು ಮಾತ್ರವೇ ಚಿತ್ರಿಸುತ್ತಾರೆ ಹೊರತು ಮಧ್ಯಮ ಜಾತಿಗಳು ದಲಿತರ ಮೇಲೆ ಮಾಡುವ ಶೋಷಣೆಯನ್ನು ಕುವೆಂಪು ಗ್ರಹಿಸಲಿಕ್ಕಾಗಲಿಲ್ಲ ಎಂಬ ಅಂಶವನ್ನು ಪ್ರಧಾನವಾಗಿ ಎತ್ತಿಹಿಡಿದಿದ್ದಾರೆ. ದಲಿತ ಹೆಣ್ಣು ಪಾತ್ರಗಳನ್ನು ಅತ್ಯಂತ ನಿಕೃಷ್ಟ ಭಾಷೆಯಲ್ಲಿ ವಿವರಿಸುವ ಕುವೆಂಪು ಅವರಿಗೆ ಅದೇ ಒಕ್ಕಲಿಗ ಜಾತಿಯ ಹೆಣ್ಣುಗಳನ್ನು ಬಹಳ ನಯವಾದ ಭಾಷೆಯಲ್ಲಿ ಚಿತ್ರಿಸಿದ್ದಾರೆ ಎನ್ನುವುದನ್ನು ಕುವೆಂಪು ಕೃತಿಗಳಿಂದಲೇ ಬಿ. ಕೃಷ್ಣಪ್ಪನವರು ಆಯ್ದು ತೋರಿಸಿದ್ದಾರೆ.

ಕೃಷ್ಣಪ್ಪರವರ ಈ ಬರವಣಿಗೆಗೆ ಕಾರಣವಿರಬಹುದಾದ್ದು ಏನೆಂದರೆ ಇವರು ದ.ಸಂ.ಸ. ನಿಷ್ಠಾವಂತ ಕಾರ್ಯಕರ್ತರು ಮತ್ತು ಹೋರಾಟಗಾರರಾಗಿದ್ದರು. ಇವರು ನಾಯಕರಾಗಿದ್ದ ಕಾರಣಕ್ಕೆ ಬೇರೆ ಹಳ್ಳಿಗಳಿಂದ ಹಲವು ಪ್ರಕರಣಗಳು ಬರುತ್ತಿದ್ದವು. ಆ ಪ್ರಕರಣಗಳು ಬಹುತೇಕ ಹೊಡೆದಾಟಗಳು, ಹಲ್ಲೆ/ಕೊಲೆ, ಸಾಮಾಜಿಕ ಬಹಿಷ್ಕಾರದಂತಹವು ಬರುತ್ತಿದ್ದವು. ದಲಿತರಿಗೆ ಸಾಮಾಜಿಕ ಬಹಿಷ್ಕಾರ, ಕೂಲಿ ಕೊಡದಿರುವುದು, ಸುಳ್ಳು ಸಾಲ ಕೊಟ್ಟು ಪುಕ್ಕಟೆ ದುಡಿಸಿ ಕೊಂಡಿದ್ದಿರಬಹುದು. ಹಲ್ಲೆ / ಕೊಲೆ, ಸುಲಿಗೆಗಳನ್ನು ಮಾಡುತ್ತಿದ್ದವರು ಮಧ್ಯಮ ಜಾತಿಗಳು. ಜಮೀನ್ದಾರಿ ವರ್ಗದ ಬಲಾಢ್ಯ ಜಾತಿಗಳು. ಹಳ್ಳಿಗಳಲ್ಲಿ ಬ್ರಾಹ್ಮಣರಿಗೂ ದಲಿತರಿಗೂ ನೇರ

ಶೋಷಣೆ ಬರುತ್ತಿರಲಿಲ್ಲ. ಬ್ರಾಹ್ಮಣರೆಲ್ಲೋ ಪೂಜೆ-ಪುನಸ್ಕಾರ ಮಾಡಿಕೊಂಡು ಹಳ್ಳಿಗಳಲ್ಲಿರುತ್ತಿದ್ದರು. ಅವರು ಭೂಮಾಲಿಕರೂ ಆಗಿರಲಿಲ್ಲ. ಹಾಗಾಗಿ ಬ್ರಾಹ್ಮಣರ ಮನೆಯ ಕೂಲಿ ಕೆಲಸಕ್ಕೆ ದಲಿತರು ಹೋಗುತ್ತಿರಲಿಲ್ಲ. ಬ್ರಾಹ್ಮಣರಲ್ಲದ ಇನ್ನಿತರ ಜಾತಿಗಳಲ್ಲಿ ಭೂ ಒಡೆತನ ಇರುತ್ತಿತ್ತು. ಅಲ್ಲಿಗೆ ದಲಿತರು ಕೂಲಿ ಕೆಲಸಕ್ಕೆ ಹೋಗುತ್ತಿದ್ದರು. ಆ ಕಾರಣಕ್ಕಾಗಿ ಭೂಮಾಲಿಕರಿಗೂ ಮತ್ತು ದಲಿತರಿಗೂ ಅವಮಾನ, ಶೋಷಣೆ ಮತ್ತು ಘರ್ಷಣೆಗಳು ನಡೆಯುತ್ತಿದ್ದವು. ಈ ರೀತಿಯ ಪ್ರಕರಣಗಳು ಕೃಷ್ಣಪ್ಪನವರಿಗಿದ್ದ ಈ ಕ್ರೂರ ಅನುಭವವೂ ಕೂಡ ಕುವೆಂಪು ಕೃತಿಗಳನ್ನು ಜಾತಿ ಅಸಮಾನತೆಯ ನೆಲೆಯಲ್ಲಿ ನೋಡುವಂತೆ ಪ್ರೇರೇಪಿಸಿದೆ. ಹಾಗಾಗಿ ಬಿ. ಕೃಷ್ಣಪ್ಪನವರು ಬರೆದಿರುವ ಲೇಖನದಲ್ಲಿ ಈ ಜಾತಿ ಅಸಮಾನತೆಯ ಚಿತ್ರಣ, ಗ್ರಹಿಕೆ ಇದೆ. ದಲಿತರ ಮೇಲೆ ಇದುವರೆಗೂ ಹಲ್ಲೆ, ಕೊಲೆ, ಸುಲಿಗೆ, ಅಪಮಾನ, ದೌರ್ಜನ್ಯ ನಡೆಸಿರುವುದು ಬ್ರಾಹ್ಮಣರಲ್ಲ. ಮಧ್ಯಮ ಜಾತಿಗಳಾದ ಒಕ್ಕಲಿಗ ಮತ್ತು ಜಮೀನ್ದಾರಿ ಜಾತಿಗಳು ಎನ್ನುವುದು ಅವರ ಗ್ರಹಿಕೆ. ಆ ಲೇಖನವು ಸಾಹಿತ್ಯವನ್ನು ಕುರಿತು ಬರೆದಿದ್ದರೂ ಕೂಡ ದ.ಸಂ.ಸ.ಯೊಂದಿಗಿನ ಅವರ ಅನುಭವದಿಂದ ಹುಟ್ಟಿದ ಕಾರಣವಾಗಿ ಜಾತಿ ಅಸಮಾನತೆಯನ್ನು ದ.ಸಂ.ಸ. ಹೇಗೆ ಗ್ರಹಿಸಿತು ಎನ್ನುವುದಕ್ಕೆ ಅವರು ಮೂಲ ಮಾದರಿ. ಆ ಮಾದರಿ ಅನೇಕ ಹೋರಾಟಗಳು ಆ ಬಗೆಯ ತಿಳುವಳಿಕೆಯನ್ನು ಹುಟ್ಟು ಹಾಕಿದ್ದವು. ಇದಿಷ್ಟೂ ದ.ಸಂ.ಸ. ವೈಚಾರಿಕತೆಯ ಒಳಗಡೆಯೇ ಜಾತಿ ಪ್ರಶ್ನೆ ಚರ್ಚೆಯ ಎರಡು ವಿನ್ಯಾಸಗಳು.

ಆ ಹೊತ್ತಿಗಾಗಲೇ ಹಲವರು 'ಹಿಸ್ಟರಿ ಆಫ್ ಹಿಂದು ಇಂಪೀರಿಯಲಿಜಮ್' (ಹಿಂದು ಸಾಮ್ರಾಜ್ಯಶಾಹಿ ಇತಿಹಾಸ) ಎನ್ನುವ ಪುಸ್ತಕವನ್ನು ಓದಿದ್ದರು. ಅದರಲ್ಲಿ ಬ್ರಾಹ್ಮಣಶಾಹಿಯು ಬೌದ್ಧಧರ್ಮವನ್ನು ಹೇಗೆ ನಾಶ ಮಾಡಿತು ಎಂಬುದಿತ್ತು. ಲೋಹಿಯಾವಾದಿಗಳು ಬ್ರಾಹ್ಮಣರನ್ನು ಮತ್ತು ಬ್ರಾಹ್ಮಣಶಾಹಿಗಳನ್ನು ಮೊದಲೇ ವಿರೋಧ ಮಾಡುತ್ತಿದ್ದರು. ಅನೇಕ ಲೋಹಿಯಾವಾದಿಗಳು ದ.ಸಂ.ಸ.ಯ ಒಡನಾಟವನ್ನು ಹೊಂದಿದ್ದರು. ಅವರಲ್ಲಿ ಬಹುತೇಕರು ಭೂಮಾಲಿಕ/ಮಧ್ಯಮ ಜಾತಿಗಳಿಂದ ಬಂದವರಾಗಿದ್ದರು. ಅವರು ಗೊತ್ತಿದ್ದೊ-ಗೊತ್ತಿಲ್ಲದೆಯೋ "ದಲಿತರೇ/ ಅಸ್ಪೃಶ್ಯರೇ ನಿಮ್ಮ ಶತ್ರುಗಳು ನಾವಲ್ಲ (ಭೂಮಾಲಿಕ/ಮಾಧ್ಯಮ ಜಾತಿಗಳು). ಜಮೀನ್ದಾರಿ ವರ್ಗನೂ ಅಲ್ಲ, ನಿಮ್ಮ ಶತ್ರುಗಳು ಬ್ರಾಹ್ಮಣಶಾಹಿಗಳು / ಪುರೋಹಿತಶಾಹಿಗಳು ಅವರು ದೇವರು, ಧರ್ಮ ಎಂದು ಮಾಡಿದರು. ದೇವರು, ಧರ್ಮವನ್ನು ನಂಬಿದರೆ ನಿಮ್ಮ ಸಮಸ್ಯೆಗಳ ಪರಿಹಾರವಾಗುತ್ತೆ ಎಂದು ಮಠ-ಮಾನ್ಯಗಳನ್ನು ಕಟ್ಟಿಕೊಂಡು ಮಜಾ ಮಾಡುತ್ತಿದ್ದಾರೆ. ಅವರು ದುಡಿಯೊಲ್ಲ ಕುಳಿತು ತಿನ್ನುತ್ತಾರೆ" ಎಂದು ಹೇಳಿದರು. ಆದರೆ ಮದುವೆ -ಮುಂಜಿಗಳಿಗೆ ಸಾಲ ಕೊಟ್ಟುಕೊಂಡು, ದಲಿತರನ್ನು ಅಪಮಾನ ಮಾಡಿಕೊಂಡು -ದುಡಿಸಿಕೊಂಡವರು ಮಧ್ಯಮ ಜಾತಿಗಳು, ಜಮೀನ್ದಾರಿ ವರ್ಗದವರು. ಇದನ್ನು ಮುಚ್ಚಿಟ್ಟು ಬ್ರಾಹ್ಮಣಶಾಹಿಯನ್ನು ತೋರಿಸುವ ಕೆಲಸ ನಡೆಯಿತು. ವೈಚಾರಿಕವಾಗಿ ಅನೇಕ ದಲಿತರು ಇದನ್ನು ನಂಬಿದರು. ಹಳ್ಳಿಗಳಿಂದ ದ.ಸಂ.ಸ. ಮುಂದೆ ಬರುತ್ತಿದ್ದ ಪ್ರಕರಣಗಳಲ್ಲಿ ಬ್ರಾಹ್ಮಣರೊಂದಿನ ಘರ್ಷಣೆಯ ಪ್ರಕರಣಗಳು ಇರುತ್ತಿರಲಿಲ್ಲ. ಬ್ರಾಹ್ಮಣರಿಗೂ, ದಲಿತರಿಗೂ ಘರ್ಷಣೆಯಾದ ಒಂದೇ ಒಂದು ಪ್ರಕರಣವು ಸಿಗುವುದಿಲ್ಲ. ಮಧ್ಯಮ ಜಾತಿಗಳ ಜೊತೆಗೆ ಹೆಚ್ಚು ಘರ್ಷಣೆಯಾದ ಪ್ರಕರಣಗಳು ಕಾಣಬರುತ್ತದೆ. ಆರ್ಥಿಕ ಸಂಬಂಧದ ಕಾರಣಕ್ಕಾಗಿ ದಲಿತರು ಕೆಲಸಕ್ಕೆ ಹೋಗುವುದು ಬ್ರಾಹ್ಮಣರ ಮನೆಗಲ್ಲ. ಹಾಗೇ ಬ್ರಾಹ್ಮಣರು ಜಮೀನ್ದಾರೂ ಅಲ್ಲ ಎಂಬುದು ಸ್ಪಷ್ಟ. ಆರ್ಥಿಕ ಸಂಬಂಧಗಳು ಬರುವುದೇ ಭೂಮಿ ಇದ್ದವರ ಹತ್ತಿರ ದಲಿತರು ಕೆಲಸಕ್ಕೆ

ಹೋಗುವ ಸಂಬಂಧದಲ್ಲಿ ಈ ಎರಡು ಕಾರಣಕ್ಕಾಗಿ ದ.ಸಂ.ಸ. ಸಮಿತಿಯೊಳಗಡೆ ಜಾತಿ ಪ್ರಶ್ನೆಯು ಎರಡು ವಿಚಾರಗಳಿಂದ ಕೂಡಿದ್ದುದು ಸ್ಪಷ್ಟವಾಗಿದೆ.

ಎ. ಚಾತುರ್ವರ್ಣ: ಇದಕ್ಕೆ ಕೆಲವು ಗ್ರಂಥಗಳನ್ನು ಓದಿದ್ದು ಮತ್ತು ಲೋಹಿಯಾವಾದದ ಪ್ರಭಾವವು ಕಾರಣವಾಗಿತ್ತು.

ಬಿ. ಜಾತಿ ಸಮಾನತೆ : ಹಳ್ಳಿಗಳಲ್ಲಿ ನಡೆದ ಘಟನೆಗಳು ಮತ್ತು ಅಂಬೇಡ್ಕರ್ ವಿಚಾರಧಾರೆಯ ಪ್ರಭಾವವು ಕಾರಣವಾಗಿತ್ತು.

೨. ಮೇಲಿನವೆರಡೂ ದ.ಸಂ.ಸ. ವೈಚಾರಿಕತೆ/ ತಾತ್ವಿಕತೆಯಲ್ಲಿ ಜಾತಿ ಪ್ರಶ್ನೆಯ ವಿಚಾರದ ಸ್ವರೂಪವಾದರೆ, ಇನ್ನೊಂದು ದ.ಸಂ.ಸ. ಆಚರಣೆಯ ಒಳಗಡೆ ಅಂದರೆ ಹೋರಾಟದಲ್ಲಿ ಜಾತಿ ವಿನಾಶಕ್ಕೆ ಸಂಬಂಧಪಟ್ಟ ನಿರ್ದಿಷ್ಟವಾದ ಕಾರ್ಯಕ್ರಮವನ್ನು ಮಾಡುತ್ತಾ ಬಂದಿದ್ದು ಕಡಿಮೆ. ಜಾತಿ ವಿನಾಶದ ಕನಸು, ಜಾತಿವಿನಾಶ ಮಾಡಬೇಕು ಎಂಬಂತಹ ಗುರಿಯನ್ನು ಘೋಷಿತ/ ಅಘೋಷಿತ ರೂಪದಲ್ಲಿ ದ.ಸಂ.ಸ. ಸ್ವೀಕರಿಸಿದ್ದು ಮತ್ತು ಹೊಂದಿದ್ದು ನಿಜ. ಜಾತಿ ಅಸಮಾನತೆ ಇದೆ, ಜಾತಿ ಅಸಮಾನತೆಯ ಕಾರಣಕ್ಕಾಗಿಯೇ ದಲಿತರು ಹಿಂದುಳಿದಿದ್ದಾರೆ. ದಲಿತರಿಗೆ ಜಮೀನು ಇಲ್ಲ. ದಲಿತರಿಗೆ ಅಕ್ಷರ ಜ್ಞಾನವಿಲ್ಲ. ಸರ್ಕಾರಿ ಸೌಲಭ್ಯಗಳ ಸಿಗುತ್ತಿಲ್ಲ ಎಂದು ಹೇಳಿದ್ದು ನಿಜ. ಆದರೆ ಜಾತಿ ಶೋಷಣೆಯನ್ನು, ಅಸಮಾನತೆಯನ್ನು ಹೋಗಲಾಡಿಸುವುದು ಹೇಗೆ ಎನ್ನುವುದಕ್ಕೆ ಕ್ರಿಯಾ ಯೋಜನೆ(Action Plan)ಯನ್ನು ದ.ಸಂ.ಸ. ರೂಪಿಸಿದ್ದು ಕಡಿಮೆ. ಹೆಚ್ಚೆಂದರೆ ಅಂತರ್ಜಾತಿಯ ವಿವಾಹಗಳನ್ನು ನಡೆಸಿತು. ಅದು ಅಂತರ್ಜಾತಿಯ ವಿವಾಹಗಳನ್ನು ನಡೆಸಿದ್ದರೂ ಕೂಡ ಕ್ರಿಯಾಯೋಜನೆಯ ಫಲವಾಗಿ ನಡೆಸಿದ್ದಲ್ಲ. ಯಾರೋ ಸ್ವಲ್ಪ ಪ್ರಗತಿಪರವಾಗಿ ಯೋಚನೆ ಮಾಡುವಂತಹವರು, ಅಂತರ್ಜಾತಿಯ ವಿವಾಹಕ್ಕೆ ಮುಂದೆ ಬಂದರೆ ಅಂತಹವರನ್ನು ತನ್ನ ವೇದಿಕೆಯಲ್ಲಿ ಮದುವೆ ಮಾಡಿರುವ ಪ್ರಕರಣಗಳು ಆರಂಭ ಹಂತದಲ್ಲಿವೆ.

ಸರಳ ವಿವಾಹಗಳಾಗಿವೆ. ಅದಕ್ಕಿಂತ ಹೆಚ್ಚಾಗಿ ತಾಳಿಕಟ್ಟಿ ಮದುವೆ ಆಗುವುದು ಬ್ರಾಹ್ಮಣಶಾಹಿಯ ಕುತಂತ್ರ. ಹಾಗಾಗಿ ತಾಳಿಕಟ್ಟಬಾರದು. ಹಾರ ಬದಲಾಯಿಸಿಕೊಂಡರೆ ಸಾಕು ಎಂದು ಕೇವಲ ಹಾರ ಬದಲಾಯಿಸಿ ಮದುವೆಗಳನ್ನು ಮಾಡಿದರು. ಇಲ್ಲಿಯೂ ಕೂಡ ದಲಿತರ ಮದುವೆಗೆ ಸಾಲಕೊಟ್ಟು-ದಲಿತರನ್ನು ಶೋಷಣೆ ಮಾಡಿರುವಂತಹ ಭಾರೀ ಜಮೀನ್ದಾರರ ಬಗೆಗೆ ಯಾವ ಚಕಾರವನ್ನೂ ಎತ್ತಲಿಲ್ಲ. ಮಾತೆತ್ತಿದ್ದರೆ ಬ್ರಾಹ್ಮಣಶಾಹಿ / ಪುರೋಹಿತಶಾಹಿ ಎನ್ನುತ್ತಲೇ ತಾಳಿಕಟ್ಟದೇನೇ ಮದುವೆಗಳನ್ನು ಮಾಡಿಸಿದರು. ಇಲ್ಲಿಯೂ ಕೂಡ ಬ್ರಾಹ್ಮಣಶಾಹಿಯನ್ನು ಗುರಿಯಾಗಿಸಿದರು. ಅಂದರೆ ಜಾತಿ ವಿನಾಶಕ್ಕೆ ಒಂದು ಕಾರ್ಯಕ್ರಮವನ್ನು ರೂಪಿಸಿಕೊಂಡಿರಲಿಲ್ಲ. ಆದರೆ ಜಾತಿ ಶೋಷಣೆಯ, ಜಾತಿ ಅಪಮಾನದ, ಹಲ್ಲೆ-ಕೊಲೆ ಪ್ರಕರಣಗಳು ದ.ಸಂ.ಸಮಿತಿಗೆ ಬರುತ್ತಿದ್ದವು. ಅನೇಕ ಭಾಗಗಳಲ್ಲಿ ಜಿಲ್ಲಾ, ತಾಲ್ಲೂಕು, ದ.ಸಂ.ಸಮಿತಿಯ ನಾಯಕರ ಮೇಲೂ ಹಲ್ಲೆಗಳು ನೇರವಾಗಿ ನಡೆದವು. ಈ ರೀತಿ ಹಲ್ಲೆ ಮಾಡಿದವರು ಬ್ರಾಹ್ಮಣರಲ್ಲ ಮಧ್ಯಮ ಜಾತಿಯವರು. ಇಷ್ಟು ಕ್ರೂರವಾದ ವ್ಯವಸ್ಥೆ ಇದ್ದರೂ ಕೂಡ ಇವರು ತೆಗಳಿದ್ದು ಬ್ರಾಹ್ಮಣಶಾಹಿಗಳನ್ನು. ಅಲ್ಲದೇ ಜಾತಿ ವಿನಾಶ, ಜಾತಿ ಸಮಸ್ಯೆಯ ಅಹವಾಲುಗಳು, ಬೇಡಿಕೆಗಳು, ದೂರುಗಳು ದ.ಸಂ. ಸ.ಗೆ ಬರುತ್ತಿದ್ದವು. ಅಲ್ಲದೇ ಅನೇಕ ಕಡೆಗಳಲ್ಲಿ ದ.ಸಂ.ಸ. ನಾಯಕರ ಮೇಲೆ ಹಲ್ಲೆ, ಸಾಮಾಜಿಕ ಬಹಿಷ್ಕಾರ ಇತ್ಯಾದಿಗಳು ನಡೆದರೂ ಕೂಡ ಜಾತಿ ಅಸಮಾನತೆಯನ್ನು ಸಡಿಲಗೊಳಿಸಲು,

ಹೋಗಲಾಡಿಸಲಿಕ್ಕೆ ನಿರ್ದಿಷ್ಟವಾದ ಕಾರ್ಯಕ್ರಮಗಳಾವುವು ಎನ್ನುವುದನ್ನು ದ.ಸಂ.ಸ. ಗುರುತಿಸಲಿಲ್ಲ ಅಥವಾ ರೂಪಿಸಲಿಲ್ಲ. ನಿರ್ದಿಷ್ಟವಾದ ಕಾರ್ಯಕ್ರಮಗಳನ್ನು ರೂಪಿಸದೇ ಇದ್ದರೂ ಕೂಡ ಸಾಮಾಜಿಕ ಬಹಿಷ್ಕಾರ ನಡೆದಲ್ಲಿ ಅದನ್ನು ಸ್ವತಂತ್ರ ಸಮಸ್ಯೆ ಎಂದು ಪರಿಗಣಿಸಿ ಕಾನೂನಾತ್ಮಕ ಪರಿಹಾರಗಳ ಮೊರೆಹೋಯಿತು. ಅಂದರೆ ಕಾನೂನುಗಳ ಚೌಕಟ್ಟಿನಲ್ಲಿ ಬಗೆಹರಿಸಿಕೊಳ್ಳಲಿಕ್ಕೆ ಪ್ರಯತ್ನಿಸಿತು. ಹೆಚ್ಚೆಂದರೆ ಪ್ರತಿಭಟನೆ ಮಾಡುವುದು, ಕಾನೂನಾತ್ಮಕ ಹೋರಾಟ ಮಾಡಿತೇ ಹೊರತು ಯಾರು ಸಾಮಾಜಿಕ ಬಹಿಷ್ಕಾರ ಹಾಕಿದರಲ್ಲ ಅವರಿಗೆ ಜಾಗೃತಿ ಉಂಟುಮಾಡುವ ಯಾವುದೇ ಕಾರ್ಯ ಇವರಲ್ಲಿರಲಿಲ್ಲ. ಹಾಗಾಗಿ ಈ ಜಾತಿ ಪ್ರಶ್ನೆಯನ್ನು ಗ್ರಹಿಸಿದ ಬಗೆಯು ಸರಳವಾಗಿಲ್ಲ, ಸಂಕೀರ್ಣವಾಗಿದೆ.

೩. ಇನ್ನೊಂದು ಬೆಳವಣಿಗೆಯಲ್ಲಿ ದಲಿತರು ಆಯಾ ಹಳ್ಳಿಗಳಲ್ಲಿ ಜಮೀನ್ದಾರರಿಗೆ ಒಗ್ಗಿಕೊಂಡು, ಬಗ್ಗಿಕೊಂಡು ಹೋಗುತ್ತಿದ್ದರು. ಯಾವಾಗ ಹಳ್ಳಿಗಳಲ್ಲಿ, ತಾಲ್ಲೂಕು, ಜಿಲ್ಲಾಮಟ್ಟದಲ್ಲಿ ದ.ಸಂ.ಸ. ಹೋರಾಟ ಶುರು ಮಾಡಿತೋ ಆಗ ಜಾತಿಯ ಶೋಷಣೆ, ದಬ್ಬಾಳಿಕೆ, ಅವಮಾನ ಹೊಸ ಬಗೆಯಲ್ಲಿ ಸೃಷ್ಟಿಯಾಯಿತು. ಹೊಸ ಬಗೆಯಲ್ಲಿ ಸೃಷ್ಟಿಯಾದ ಮೇಲೆ ಇದನ್ನು ದಲಿತರು ಪ್ರತಿಭಟಿಸುವುದಕ್ಕೆ ಶುರು ಮಾಡಿದರು. ಆಗ ಜಾತಿ ಸಂಘರ್ಷವು ಸಂಘಟನಾತ್ಮಕ ರೂಪ ಪಡೆಯಿತು. ದ.ಸಂ.ಸ. ಹುಟ್ಟುವುದಕ್ಕಿಂತ ಮೊದಲು ದಲಿತರನ್ನು ಅವಮಾನ ಮಾಡಿದರೆ, ಹೊಡೆದರೆ ಆಕಸ್ಮಿಕ ಅನ್ನುವ ರೀತಿಯಲ್ಲಿ ಹೊಡೆಯುತ್ತಿದ್ದರು, ಆಕಸ್ಮಿಕ ರೀತಿಯಲ್ಲಿ ಅವಮಾನ ಮಾಡುತ್ತಿದ್ದರು. ದ.ಸಂ.ಸ. ಹುಟ್ಟಿದ ಮೇಲೆ ತುಳಿಯುವ ಜಾತಿಗಳು ಎಚ್ಚರಗೊಂಡವು (Concious) ಆಗ ಮೇಲ್ಜಾತಿಗಳು ಪ್ರತಿಯೊಂದನ್ನು ಪೂರ್ವ ಸಂಚಿನ ಮೂಲಕ, ಸಂಘಟನಾತ್ಮಕವಾಗಿ ಹೊಡೆಯುವುದಕ್ಕೆ ಆರಂಭಿಸಿದರು. ಇದು ಕುಸುಮಬಾಲೆ ಯಲ್ಲಿ ಅದ್ಭುತವಾಗಿ ಚಿತ್ರಣಗೊಂಡಿದೆ. ಎಳನೀರು ಕುಡಿಯುವ ಗಾರಸಿದ್ದಾವನಿಗೆ ಒಬ್ಬನು ಹೊಡೆಯೊಲ್ಲ, ಅಲ್ಲಿರುವ ಇಸ್ಪೀಟ್ ಆಡುವ ಅಷ್ಟು ಜನರು ಹೊಡೆಯುತ್ತಾರೆ ಅದು ಪ್ರಜ್ಞಾಪೂರ್ವಕವಾಗಿ ಹೊಡೆಯುವುದಕ್ಕೆ ಶುರು ಮಾಡಿದರು. ತಪ್ಪಿಲ್ಲದಿದ್ದರೂ ತಪ್ಪಿದೆ ಅಂತ ಆರೋಪಿಸಿ ದಂಡಿಸುವ ಕೆಲಸವಾಯಿತು. ದಲಿತ ಸಂಘರ್ಷ ಸಮಿತಿ ಹೊಸ ಬಗೆಯಲ್ಲಿ ಸಂಘಟನಾತ್ಮಕವಾಗಿ ಆರಂಭವಾದ ಅಸಮಾನತೆ, ದಬ್ಬಾಳಿಕೆಗಳನ್ನು ಎದುರಿಸಲಿಕ್ಕೆ ಕಾರ್ಯಕ್ರಮಗಳೂ ಇರಲಿಲ್ಲ ಮತ್ತು ಒಂದು ಸಿದ್ಧಾಂತದ ತಯಾರಿಯೂ ಇರಲಿಲ್ಲ. ಹೆಚ್ಚೆಂದರೆ ಅವರು ಮೊರೆ ಹೋದದ್ದು ಜಾಥ, ಅಹವಾಲು, ಕಾನೂನು. ಜಾಥ ಹೋಗಿ ಬಿಟ್ಟು ಪ್ರತಿಭಟನೆ ಮಾಡುತ್ತಾ ತಹಶಿಲ್ದಾರರಿಗೆ ಹೋಗಿ ಅಹವಾಲು, ಕೊಡುವುದು ಮತ್ತು ಅವರನ್ನು ಬಂಧಿಸಿ, ಉಗ್ರಶಿಕ್ಷೆ ಕೊಡಿ ಅಂತ ಒತ್ತಾಯ ಮಾಡುವುದು, ಮತ್ತೆ ಧರಣಿ ಮಾಡುವುದಾಗಿತ್ತು. ಆ ರೀತಿಯಲ್ಲಿ ದಲಿತರಿಗೆ ಜಾತಿ ಕಾರಣಕ್ಕಾಗಿ ಹಲ್ಲೆ ಮಾಡಿದ್ದು, ಬಹಿಷ್ಕಾರ ಹಾಕಿದ್ದು, ಇಂತಹ ಅನೇಕ ಪ್ರಕರಣಗಳು ನಡೆದಾಗಲೂ ದಲಿತರಿಗೆ ನ್ಯಾಯ ಸಿಗಲಿಲ್ಲ, ತಪ್ಪಿತಸ್ಥರಿಗೆ ಶಿಕ್ಷೆಯಾಗಲಿಲ್ಲ. ಅವತ್ತಿನಿಂದ ಇವತ್ತಿನವರೆಗೂ ದಲಿತರ ಮೇಲೆ ಬೇರೆ ಬೇರೆ ಕಾರಣಕ್ಕೆ ಜಾತಿ ಅವಮಾನಗಳು, ಹಲ್ಲೆಗಳು ಇನ್ನೂ ಮೂರ್ತ ರೂಪಗೊಂಡಿವೆ. ಇದು ಇದಮಿತ್ಥಂ ಎಂದು ಗುರುತಿಸಬಹುದಾದ, ಸಂಘಟನಾತ್ಮಕವಾಗಿ, ಎಚ್ಚರಿಕೆಯಿಂದ ನಡೆಯುತ್ತಿವೆ. ಈಗ ದಲಿತರಿಗೆ ಹೊಡೆದರೆ ಶಿಕ್ಷೆಯಾಗುತ್ತೆ. ಕಾನೂನು ಅವರ ಪರವಾಗಿವೆ ಅಂತಹ ಗೊತ್ತಿದ್ದರೂ ದಲಿತರ ಮೇಲೆ ನಡೆಯುವ ಶೋಷಣೆಗಳೇನು ಕಡಿಮೆಯಾಗಿಲ್ಲ, ಪ್ರಮಾಣ ಜಾಸ್ತಿಯಾಗಿದೆ. ಪ್ರಮಾಣ ಯಾಕೆ

ಜಾಸ್ತಿಯಾಗಿದೆಯೆಂದರೆ, ಕೆಳಜಾತಿಗಳು ಚಲನಶೀಲಗೊಳ್ಳುತ್ತಿವೆ. ಅಂದರೆ ಶಿಕ್ಷಣ, ನೌಕರಿ, ರಾಜಕೀಯ ಮುಂತಾದೆಡೆ ಬರುತ್ತಿದ್ದಾರಲ್ಲ, ಅದು ಮಧ್ಯಮ ಜಾತಿಗಳಲ್ಲಿನ ಸಾಂಪ್ರದಾಯಿಕ ಆಲೋಚನಾಕ್ರಮದವರಿಗೆ ನುಂಗಲಾರದ ತುತ್ತಾಗಿದೆ. ಈ ಕಾರಣದಿಂದ ದಲಿತರ ಈ ಸಣ್ಣಪುಟ್ಟ ಚಲನಶೀಲತೆಯ ಬಗೆಗೆ ಅವರಿಗೆ ಅಸಹನೆ. ಈ ಅಸಹನೆ ಆಕ್ರೋಶಕ್ಕೆ ತಿರುಗಿದೆ. ಹಿಂದೆ ಇದ್ದ ರೀತಿಯಲ್ಲಿ ದಲಿತರು ಎಲ್ಲದಕ್ಕೂ ಹೊಂದಿಕೊಂಡು ಹೋಗುತ್ತಿಲ್ಲ. ಒಂದು ಕಾಲದಲ್ಲಿ ಇಡೀ ಕೇರಿಯೇ ಜಮೀನ್ದಾರರ ಮನೆಗೆ ಕೆಲಸಕ್ಕೆ ಹೋಗುತ್ತಿತ್ತು. ಈಗ ಬಹುತೇಕ ಹಳ್ಳಿಗಳಲ್ಲಿ ಆಯಾ ಊರಿನ ದಲಿತರು ಜಮೀನ್ದಾರರ ಮನೆಗೆ ಕೆಲಸಕ್ಕೆ ಹೋಗೊಲ್ಲ. ಅಂದರೆ ಚಲನಶೀಲಗೊಂಡಿದ್ದಾರೆ. ಆ ಊರಿನಲ್ಲಿ ಬಿಟ್ಟು ಬೇರೆ ಊರಿಗೆ ಕೆಲಸಕ್ಕೆ ಹೋಗುತ್ತಿದ್ದಾರೆ. ಆ ಊರಿನಲ್ಲಿ ಸಾಮಾನ್ಯ ಜಮೀನ್ದಾರನಿಗೆ ಕೆಲಸಗಾರರೆಂದರೆ ದಲಿತರು. ಅವರು ಸಿಗುತ್ತಿಲ್ಲ. ಇದೂ ಒಳಗೊಂಡಂತೆ ದಲಿತರ ಬಗೆಗೆ ಅಸಮಾಧಾನ ಜಾಸ್ತಿಯಾಗಿದೆ. ಇವೆರಡೂ ಇವರ ವಿರುದ್ಧ ಆಕ್ರೋಶಕ್ಕೆ ತಿರುಗಿದೆ. ಹಾಗಾಗಿ ದಲಿತರನ್ನು ಜಾತಿ ಕಾರಣಕ್ಕಾಗಿ ಹೊಡೆಯುವ, ಅವಮಾನಿಸುವ ಪ್ರವೃತ್ತಿ ಸಂಘಟನೆ ರೂಪ ಪಡೆದುಕೊಂಡಿದೆ. ಯಾವ ಕಾನೂನುಗಳು ಈ ಹಲ್ಲೆ, ಸುಲಿಗೆಗಳನ್ನು ಸಡಿಲಗೊಳಿಸಿಲ್ಲ ಮತ್ತು ಆ ಸಂತ್ರಸ್ಥರಿಗೆ ನ್ಯಾಯ ಸಿಕ್ಕಿಲ್ಲ ಮತ್ತು ತಪ್ಪು ಮಾಡಿದವರಿಗೆ ಶಿಕ್ಷೆಯನ್ನೂ ಕೊಟ್ಟಿಲ್ಲ.

ಈ ಮೇಲೆ ನಾವು ಚರ್ಚಿಸಿದ ಅಂಶಗಳೆಂದರೆ,

೧. ದಲಿತ ಸಂಘರ್ಷ ಸಮಿತಿ ಜಾತಿ ಪ್ರಶ್ನೆ ಗ್ರಹಿಸಿದ ಬಗೆ

ಎ. ಚಾತುರ್ವರ್ಣ ವಿನ್ಯಾಸ,

ಬಿ. ಜಾತಿ ಅಸಮಾನತೆಯ ವಿನ್ಯಾಸ

೨. ದಲಿತ ಸಂಘರ್ಷ ಸಮಿತಿ ಆಚರಣಾತ್ಮಕವಾಗಿ ಜಾತಿಯನ್ನು ಗ್ರಹಿಸಿದ್ದು

೩. ದಲಿತ ಸಂಘರ್ಷ ಸಮಿತಿ ಹುಟ್ಟಿದ ಮೇಲೆ ದಲಿತರಿಗೂ ಮತ್ತು ದಲಿತೇತರರಿಗೂ ಜಾತಿ ಕಾರಣಕ್ಕಾಗಿ ಹೇಗೆ ಸಂಘರ್ಷಗಳು ಆರಂಭವಾದವು ಹಾಗೂ ದಲಿತ ಸಂಘರ್ಷ ಸಮಿತಿ ಅದನ್ನು ಗ್ರಹಿಸಿದ್ದು ಮತ್ತು ಎದುರಿಸಿದ್ದು ಯಾವ ರೀತಿ ಎಂಬ ಚರ್ಚೆ ಮಾಡಲಾಗಿದೆ.

ಪಿಎಚ್.ಡಿ. ಸಂಶೋಧನ ವಿದ್ಯಾರ್ಥಿ
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ,
ವಿದ್ಯಾರಣ್ಯ ೫೮೩ ೨೭೬
ದೂ : ೯೯೦೧೭೦೩೦೫೦



‘ಯಾನ’ದಲ್ಲಿ ಒಂದು ಸುತ್ತು

■ ಡಾ.ಸಂತೋಷ್‌ಕುಮಾರ್ ಪಿ.ಕೆ

ಯಾನ ಇತ್ತೀಚೆಗಷ್ಟೆ ಬಿಡುಗಡೆಯಾದ ಭೈರಪ್ಪನವರ ಕಾದಂಬರಿಯಾಗಿದೆ. ಹಾಟ್‌ಕೇಕ್ ರೀತಿಯಲ್ಲಿ ಮಾರಾಟವಾದ ಪುಸ್ತಕ ಅವರ ಕಿರೀಟಕ್ಕೆ ದಕ್ಕಿದ ಮತ್ತೊಂದು ಗರಿ ಎಂದರೂ ತಪ್ಪಾಗಲಾರದು. ಮಾನವೀಯ ಸಂಬಂಧಗಳ ತಾಕಲಾಟವನ್ನು ಬಿಂಬಿಸುವ ಭೈರಪ್ಪನವರ ಹಲವಾರು ಕಾದಂಬರಿಗಳಲ್ಲಿ ಇದೂ ಸಹ ಒಂದಾಗಿದೆ. ಇಡೀ ಕಾದಂಬರಿ ಉತ್ತರಾ ಮತ್ತು ಸುದರ್ಶನ್ ಎಂಬ ಇಬ್ಬರು ಪ್ರಾಯೋಗಿಕ ಅಥವಾ ಎಕ್ಸ್‌ಪೆರಿಮೆಂಟ್ ದಂಪತಿಗಳ ಸಂಬಂಧದೊಳಗಿನ ತೊಳಲಾಟವನ್ನು ಅಂದವಾಗಿ ಚಿತ್ರಿಸುತ್ತದೆ. ಬೇರೊಂದು ಗ್ರಹಕ್ಕೆ (ಪ್ರಾಕ್ಸಿಮಾ ಸೆಂಟರ್) ಚಲಿಸುವ ಮತ್ತು ಎಂದೆಂದಿಗೂ ಭೂಮಿಗೆ ಹಿಂದಿರುಗದ ರಾಕೆಟ್ ಒಳಗೆ ಒಂದು ಲೋಕವನ್ನು ಸೃಷ್ಟಿಸಿ ಆಕಾಶ್ ಮತ್ತು ಮೇದಿನಿಯರ ಮೂಲಕ ಅವರ ಪೋಷಕರ ಜೀವನಗಾಥೆಯನ್ನು ಎಳೆಎಳೆಯಾಗಿ ಬಿಡಿಸುವ ಕಾರ್ಯವನ್ನು ಲೇಖಕರು ಮಾಡುತ್ತಾರೆ.

ಯಾನವು ವೈಜ್ಞಾನಿಕ ಪ್ರಯೋಗಕ್ಕಾಗಿ ಭೂಮಿಯಿಂದ ರಾಕೇಟ್ ಮೂಲಕ ಬೇರೊಂದು ನಕ್ಷತ್ರ/ಗ್ರಹಕ್ಕೆ ಪ್ರಯಾಣಿಸುವ ಕತೆಯಾಗಿದೆ. ಯಾನ ಎಂಬುದು ಇಲ್ಲಿ ಎರಡು ಅರ್ಥಗಳನ್ನು ಒಳಗೊಳ್ಳಬಹುದು, ಒಂದು, ಬೇರೆ ಗ್ರಹಕ್ಕೆ ಮಾಡುವ ಪ್ರಯಾಣ ಮತ್ತೊಂದು ಜೀವನದಲ್ಲಿ ಒಂದು ಹಂತದಿಂದ ಮತ್ತೊಂದು ಹಂತಕ್ಕೆ ಮಾಡುವ ಪ್ರಯಾಣ. ವಿಜ್ಞಾನದ ಕುರಿತು ಕೆಲವೊಂದು ಉಪಯುಕ್ತ ಮಾಹಿತಿಗಳನ್ನೂ ಸಹ ಈ ಕಾದಂಬರಿ ಒದಗಿಸುತ್ತದೆ. ಅದರ ಒಟ್ಟಿಗೆ ಮನುಷ್ಯರ ಜೀವನದಲ್ಲಿ ಸಹಜವಾಗಿ ನಡೆಯುವ ಸರಸ ಸಲ್ಲಾಪ, ಅನ್ವೇಷಣಾಗುಣ, ವಿರಸ, ಆಧ್ಯಾತ್ಮ,

ಶರಣಾಗುವಿಕೆ, ಅಹಂ ಇನ್ನೂ ಮುಂತಾದ ಸೂಕ್ಷ್ಮ ಸಂಗತಿಗಳನ್ನು ಹಲವಾರು ಘಟನೆಗಳ ಮೂಲಕ ಕಾದಂಬರಿ ಹೊರಗೆಡಹುತ್ತದೆ. ಒಟ್ಟಿನಲ್ಲಿ ಓದುಗಾಸಕ್ತರಿಗೆ ಎಲ್ಲಿಯೂ ಬೋರ್ ಮಾಡದ ರೀತಿಯಲ್ಲಿ ತನ್ನೊಂದಿಗೆ ಕೊಂಡ್ಯೊಯ್ಯುವ ಗುಣ ಯಾನದ ವೈಶಿಷ್ಟ್ಯವಾಗಿದೆ.

ಯಾನವು ಒಂದು ರೋಚಕ ಕತೆಯಾಗಿದೆ. ಏಕೆಂದರೆ ಓದುಗರಿಗೆ ಎರಡು ಪ್ರಶ್ನೆಗಳನ್ನು ಹಾಕಿಕೊಳ್ಳುವಂತೆ ಮಾಡುವ ಮೂಲಕ ಕೊನೆಯುವರೆಗೂ ಉತ್ತರದ ರಹಸ್ಯವನ್ನು ಕಾಪಾಡಿಕೊಳ್ಳುತ್ತದೆ. ಆ ಪ್ರಶ್ನೆಗಳೆಂದರೆ, ೧. ಆಕಾಶ್ ಮತ್ತು ಮೇದಿನಿ ಎಂಬ ಸಹೋದರ ಸಹೋದರಿಯರು ವಿವಾಹವಾಗಲು ಹೇಗೆ ಸಾಧ್ಯ? ಹಾಗೂ ೨. ಆಕಾಶ್‌ನ ತಂದೆ ಯಾರು?

ಈ ಪ್ರಶ್ನೆಗಳಿಗೆ ಉತ್ತರ ನೀಡುವಲ್ಲಿಯೇ ಕಾದಂಬರಿ ಕೊನೆಯುವರೆಗೂ ಕುತೂಹಲವನ್ನು ಉಳಿಸುತ್ತದೆ. ಕಾದಂಬರಿಯನ್ನು ಓದಲು ಪ್ರಾರಂಭಿಸಿದಾಗ, ಮುಂದೆ ಏನಾಗಬಹುದು ಎಂಬ ನಿರೀಕ್ಷೆಗಳೂ ಸಹ ಓದುಗರಿಗೆ ಹುಟ್ಟದೆ ಇರಲಾರದು. ಇದಿಷ್ಟು ಕಾದಂಬರಿಯ ಮೇಲ್ನೋಟದ ವೈಶಿಷ್ಟ್ಯಗಳು. ಈ ಕಾದಂಬರಿಯಲ್ಲಿ ಇನ್ನೊಂದು ವಿಶೇಷವಿದೆ. ಅದು ಈ ಕೆಳಗಿನಂತಿದೆ.

ಮನುಷ್ಯ ಸಂಬಂಧಗಳ ತೊಳಲಾಟದ ಕುರಿತು ಆಳವಾಗಿ ಆಲೋಚಿಸುವಂತೆ ಈ ಕಾದಂಬರಿಯು ಪ್ರೇರೇಪಿಸುತ್ತದೆ. ಮನುಷ್ಯನಾದವನು ಹಲವಾರು ಸಂಗತಿಗಳನ್ನು ಒಟ್ಟಿಗೆ ಇಟ್ಟುಕೊಂಡು ಬದುಕುತ್ತಿರುತ್ತಾನೆ. ಸಂಸಾರ, ಕೆಲಸ, ಬಾಹ್ಯಜಂಜಾಟ, ಆಂತರಿಕ ತೊಳಲಾಟ, ಹಟ, ಚಟ ಇನ್ನೂ ಮುಂತಾದ ಅಂಶಗಳು ಮನುಷ್ಯನಿಗೆ ಖುಷಿ ದುಃಖಗಳನ್ನು ನೀಡುತ್ತಿರುತ್ತವೆ. ಆದರೆ, ವ್ಯಕ್ತಿಗೆ ಯಾವುದಾದರೂ ಒಂದು ಗುರಿ ಮುಟ್ಟಬೇಕೆಂಬ ಛಲ ಬಂದರೆ ತನ್ನ ಮುಂದಿರುವ ಸಂಗತಿಗಳಲ್ಲಿ ಕೆಲವೇ ಕೆಲವನ್ನು ಮಾತ್ರ ಆಯ್ದುಕೊಳ್ಳಬೇಕಾಗುತ್ತದೆ. ನಾವು ಆಯ್ಕೆ ಮಾಡಿಕೊಂಡ ಸಂಗತಿಗಳು ನಮ್ಮ ಗುರಿಯನ್ನು ಮುಟ್ಟಲು ಪೂರಕವಾಗಿರುತ್ತವೆ. ನಮ್ಮ ಆಯ್ಕೆಗಳಿಂದ ಹೊರತಾಗಿ ಹೊರಗೆ ಉಳಿದ ಸಂಗತಿಗಳೂ ಸಹ ನಮ್ಮನ್ನು ಆಗಾಗ ಭಾದಿಸುತ್ತಿರುತ್ತವೆ. ಆಗ ನಿಜವಾದ ತೊಳಲಾಟ ಪ್ರಾರಂಭವಾಗುತ್ತದೆ. ನಾವು ಆಯ್ಕೆ ಮಾಡಿಕೊಂಡ ಸಂಗತಿಗಳು ಹಾಗೂ ಆಯ್ಕೆ ಮಾಡದೆ ಬಿಟ್ಟಂತಹ ಸಂಗತಿಗಳೆರಡೂ ಒಟ್ಟೊಟ್ಟಿಗೆ ನಮ್ಮದೊಂದಿಗೆ ಬರುತ್ತಿರುತ್ತವೆ. ಆಗ ನಮ್ಮ ಆಯ್ಕೆ ಸರಿ ಇಲ್ಲವೇನೋ, ಬೇರೆ ಯಾವುದನ್ನೋ ಆಯ್ದುಕೊಳ್ಳಬಹುದಿತ್ತೇನೋ, ಅಥವಾ ಇದಕ್ಕಿಂದ ಮತ್ತೊಂದು ಉತ್ತಮವಾದ ಆಯ್ಕೆಯಾಗಿತ್ತೇನೋ ಎಂಬಂತಹ ಮಾನಸಿಕ ಗೊಂದಲಗಳು ಏಳಲು ಪ್ರಾರಂಭಿಸುತ್ತವೆ. ಉದಾಹರಣೆಗೆ ಹಣ ಮಾಡಿ ಶ್ರೀಮಂತನಾಗುವುದೇ ಗುರಿಯಿಂದಾದರೆ ಹಣ ಮಾಡುವುದೇ ಆಯ್ಕೆಯಾಗುತ್ತದೆ, ಅದಕ್ಕೋಸ್ಕರ ಹಣ ಗಳಿಸಬಹುದಾದ ವ್ಯಾಪಾರ ಉದ್ಯೋಗ ಹಾಗೂ ಸಂಬಂಧಗಳನ್ನು ಮಾತ್ರ ಒಬ್ಬ ವ್ಯಕ್ತಿ ಆಯ್ಕೆ ಮಾಡುತ್ತಾನೆ. ಆದರೆ ಅವನ ಆಯ್ಕೆಗಳ ಜೊತೆಜೊತೆಗೆ ಹಣ ಗಳಿಸದ ಕೆಲವು ಸಂಗತಿಗಳೂ ಇರುತ್ತವೆ, ಪೋಷಕರು ಮಕ್ಕಳು ಇಂತಹ ಸಂಬಂಧಗಳೂ ಇರುತ್ತವೆ, ಇವರು ಮುಖ್ಯವೋ ಅಥವಾ ಹಣ ಗಳಿಸಲು ಬೇಕಿರುವ ಸಂಬಂಧ ಮುಖ್ಯವೋ ಎಂಬ ಗೊಂದಲ ಒಂದು ಹಂತಕ್ಕೆ ಹೋದ ಮೇಲೆ ಪ್ರಾರಂಭವಾಗುತ್ತದೆ. ಇದನ್ನೇ ಆಯ್ಕೆಯ ಗೊಂದಲ ಎಂದು ಕರೆಯಬಹುದು. ಇಂತಹ ಮಾನಸಿಕ ತೊಳಲಾಟ ಅಥವಾ ಆಯ್ಕೆಯ ಗೊಂದಲ ಎಂದು ಕರೆಯಬಹುದು. ಇಂತಹ ಮಾನಸಿಕ ಸ್ಥಿತಿಯನ್ನು ಉತ್ತರಾ ಎಂಬ ಪಾತ್ರದ ಮೂಲಕ ಭೈರಪ್ಪನವರು ಸೊಗಸಾಗಿ ದಾಖಲಿಸುತ್ತಾ ಹೋಗುತ್ತಾರೆ.

ಈ ಕಾದಂಬರಿಯನ್ನು ಆಧುನಿಕ ವೈಜ್ಞಾನಿಕ ಸಮಾಜ ಮತ್ತು ನೈತಿಕ ಸಮಾಜಗಳ ನಡುವಿನ ಸಂಘರ್ಷ ಎಂಬಂತೆಯೂ ಸಹ ಮತ್ತೊಂದು ನಿಟ್ಟಿನಲ್ಲಿ ನೋಡಬಹುದು. ಉತ್ತರಾಳ ಅಂತರಿಕ್ಷಯಾನವು ವೈಜ್ಞಾನಿಕತೆಯ ಕಡೆಗೆ ನಡೆಯುವ ಹಾದಿಯಾದರೆ, ಅವಳು ಇದ್ದ ಭೂಮಿ ಹಾಗೂ ಯಾದವನೊಟ್ಟಿಗಿನ ಸಂಬಂಧವು ನೈತಿಕ ಸಮಾಜದ ಸಂಕೇತವಾಗಿದೆ. ಅವೆರಡು ಪರಸ್ಪರ ಸಂಧಿಸಿದಾಗ ಏಳಬಹುದಾದ ಗೊಂದಲಗಳನ್ನು ಯಾನವು ಚಿತ್ರಿಸುತ್ತದೆ ಎಂದೆನ್ನಬಹುದು. ವೈಜ್ಞಾನಿಕತೆಯ ಆಯ್ಕೆ ಮಾಡಿಕೊಂಡರೆ ನಮ್ಮ ನೈತಿಕ ನಿಯಮಗಳನ್ನು ಬದಿಗಿರಿಸಿ ಅದಕ್ಕೆ ಒಗ್ಗಿಕೊಳ್ಳಬೇಕಾಗುತ್ತದೆ, ಅಗತ್ಯವಿರುವ ಪ್ರಯೋಗಗಳಿಗೆ ತನ್ನನ್ನು ತೆರೆದುಕೊಳ್ಳಬೇಕಾಗುತ್ತದೆ. ಹಾಗೆಯೇ ನಮಗೆ ನೈತಿಕ ನಿಯಮಗಳೇ ಮುಖ್ಯವಾದರೆ, ವಿಜ್ಞಾನದ ಮನೋಭಾವವನ್ನು ಹೊಂದಲು ಕಷ್ಟವಾಗುತ್ತದೆ. ಅವೆರಡು ಅನುಸಂಧಾನಗೊಳ್ಳುವಲ್ಲಿ ಏಳುವ ತಾಕಲಾಟಗಳನ್ನು ಪರಿಹರಿಸಿಕೊಳ್ಳಲು ಸಾಧ್ಯವೇ ಅಥವಾ ಇಲ್ಲವೆ ಎಂಬ ಗೊಂದಲವನ್ನು ಓದುಗರಿಗೂ ಪ್ರಶ್ನೆ ಏಳುವಂತೆ ಕಾದಂಬರಿ ಮಾಡುತ್ತದೆ.

ವೈಜ್ಞಾನಿಕ ಮನೋಭಾವ ಹಾಗೂ ನೈತಿಕ ನಿಯಮಗಳು ಒಂದಕ್ಕೊಂದು ವಿರೋಧವಾದವುಗಳೆ? ಎಂಬ ಪ್ರಶ್ನೆ ಏಳುತ್ತದೆ. ಅವುಗಳ ನಡುವಿನ ಸಂಬಂಧವು ಅಷ್ಟಾಗಿ ಸ್ಪಷ್ಟವಾಗಿರದಿದ್ದರೂ ಕೆಲವು ಬಾರಿ ವೈಯಕ್ತಿಕ ನೈತಿಕತೆಗಳು ವೈಜ್ಞಾನಿಕ ಮನೋಭಾವನೆಯನ್ನು ಹತ್ತಿಕ್ಕುತ್ತವೆ ಎಂದಷ್ಟೇ ಹೇಳಬಹುದು. ಇದಕ್ಕೆ ಸಾಮಾನ್ಯವಾಗಿ ಕರ್ನಾಟಕದಲ್ಲಿ ನಡೆದ ಹಲವಾರು ಕ್ರಿಯಾವಿಧಿಗಳ ಚರ್ಚೆಯನ್ನು ಸ್ಥೂಲವಾಗಿ ಗಮನಿಸಿದರೆ ತಿಳಿದುಬರುತ್ತದೆ. ಯಾವುದೇ ಕ್ರಿಯಾವಿಧಿಯನ್ನು ವೈಜ್ಞಾನಿಕವಾಗಿಯೂ ಅರ್ಥೈಸಿಕೊಳ್ಳಬಹುದು ಎಂಬ ಸಾಧ್ಯತೆಯನ್ನೇ ಹಲವಾರು ಬುದ್ಧಿಜೀವಿಗಳ ನೈತಿಕ ನಿಯಮಗಳು ತಳ್ಳಿಹಾಕಿವೆ. ಆದ್ದರಿಂದ ಮಡೆಸ್ನಾನ, ಸಿಡಿ ಮುಂತಾದ ಆಚರಣೆಗಳ ಚರ್ಚೆಯನ್ನು ಈ ಹಿನ್ನೆಲೆಯಲ್ಲಿ ಅರಿಯಲು ಪ್ರಯತ್ನಿಸಿದರೆ ಫಲಪ್ರದವಾಗಬಹುದು.

ಯಾನ ಕಾದಂಬರಿಯಲ್ಲಿ ಒಂದು ವಿವೇಚನಾಯುತವಾದ ಪ್ರಶ್ನೆಯನ್ನು ಉತ್ತರಾ ಕೇಳುತ್ತಾಳೆಂದು ಹಲವಾರು ಜನರು ಅಭಿಪ್ರಾಯ ಪಡುತ್ತಾರೆ, ಅದೆಂದರೆ, ಭೂಮಿಯ ಮೇಲೆ ಮಾಡಿಕೊಂಡ ನಿಯಮ, ಒಪ್ಪಂದ ಹಾಗೂ ನೈತಿಕಗಳು ಭೂಮಿಯಿಂದಾಚೆಗೆ ಯಾವುದೇ ಮೌಲ್ಯವನ್ನು ಉಳಿಸಿಕೊಳ್ಳುವುದಿಲ್ಲ, ಆದ್ದರಿಂದ, ಉತ್ತರಾಳು ಸುದರ್ಶನನೊಂದಿಗೆ ಸೇರಲು ಇರುವುದಕ್ಕೆ ಇದೊಂದು ದೊಡ್ಡ ಸಮರ್ಥನೆ ಎಂದುಕೊಳ್ಳುತ್ತಾಳೆ. ಆದರೆ ಇದು ನಿಜವಾಗಿಯೂ ಭೈರಪ್ಪನವರ ಪ್ರಶ್ನೆಯಾಗಿದೆ, ಇಲ್ಲಿಯ ನೈತಿಕ ನಿಯಮಗಳು ಬೇರೆಡೆ ಸಲ್ಲುವ ಅಗತ್ಯವಾದರೂ ಏನು, ಅವುಗಳಿಗೆ ಏಕೆ ಕಟ್ಟುಬೀಳಬೇಕು? ಆದರೆ ಈ ಪ್ರಶ್ನೆಯೇ ಅವೈಚಾರಿಕವಾದುದು ಎಂದು ಹೇಳಬಹುದು, ಏಕೆಂದರೆ, ಮನುಷ್ಯನ ಯಾವುದೇ ಕಟ್ಟುಪಾಡು ನಿಯಮಗಳು ಭೂಮಿಗೆ ಸೀಮಿತವಲ್ಲ, ಕಾರಣ, ಕಟ್ಟುಪಾಡು ನಿಯಮ ಎಂಬುದು ಎಲ್ಲಿಯೋ ಕಟ್ಟಿಟ್ಟ ಒಂದು ವಸ್ತುವೂ ಅಲ್ಲ, ಅದಿರುವು ಮನುಷ್ಯನ ಯೋಚನೆಯಲ್ಲಿ ಅಥವಾ ಮನುಷ್ಯನಲ್ಲಿ ಅಂತರಂಗದಲ್ಲಿ, ಆದ್ದರಿಂದ ಆತ ಎಲ್ಲಿ ಹೋದರೂ ತನ್ನಲ್ಲಿರುವ ನಿಯಮಗಳನ್ನೇ ತೆಗೆದುಕೊಂಡು ಹೋಗುತ್ತಿರುತ್ತಾನೆ, ಅರ್ಥಾತ್ ವ್ಯಕ್ತಿಯ ಜೀವನದ ಯಾನ ಎಂದರೆ ಅವುಗಳ ಜೊತೆಜೊತೆ ಎಂದು ಹೇಳಬಹುದು. ನಾವು ರೂಪಿಸಿಕೊಂಡ ನಿಯಮಗಳು ಅಂಗಡಿಯಲ್ಲಿ ಸಿಗುವ ಯಾವುದೋ ಮಿಠಾಯಿಯಂತೂ ಖಂಡಿತ ಅಲ್ಲ, ಭೂಮಿಯಿಂದ ಹೊರಹೋಗುತ್ತಿದ್ದೇವೆ, ಆದ್ದರಿಂದ ಅಂಗಡಿಯ ಮಿಠಾಯಿ ಅಲ್ಲೇ ಬಿಟ್ಟು

ಹೋಗುವ, ಭೂಮಿಯಿಂದಾಚೆಗೆ ಮಿಠಾಯಿಗೂ ನಮಗೂ ಸಂಬಂಧವಿಲ್ಲ, ಏಕೆಂದರೆ, ಅದು ಯಾವುದೋ ಒಂದು ಅಂಗಡಿಯಲ್ಲಿ ಮಾತ್ರ ಸಿಗುವುದು ಎನ್ನುವ ಮಟ್ಟಿಗೆ ನಿಯಮಗಳ ಕುರಿತು ಮಾತನಾಡಲು ಸಾಧ್ಯವಿಲ್ಲ. ಅವೆಲ್ಲವಕ್ಕಿಂತ ಹೆಚ್ಚಾಗಿ, ಮನುಷ್ಯನ ನಿಯಮಗಳು ಭೂಮಿಯ ಗುರತ್ವಾಕರ್ಷಣೆಯಂತಹ ನಿಯಮವಂತೂ ಅಲ್ಲ. ಗುರುತ್ವಾಕರ್ಷಣೆಯಾದರೆ ಎಲ್ಲಿಯವರೆಗೆ ಅದರ ವ್ಯಾಪ್ತಿ ಇದೆ, ಎಲ್ಲಿಗೆ ಅದು ಕೊನೆಯಾಗುತ್ತದೆ ಎಂದು ನಿರ್ದಿಷ್ಟವಾಗಿ ಹೇಳಬಹುದು, ಆದರೆ ಮನುಷ್ಯನ ನಿಯಮಗಳನ್ನು ವಿವರಿಸುವ ಯಾವುದೇ ವೈಜ್ಞಾನಿಕ ಸಿದ್ಧಾಂತಗಳಂತೂ ಸದ್ಯಕ್ಕೆ ಇಲ್ಲ, ಆದ್ದರಿಂದ ಭೂಮಿಯ ಮೇಲಿನ ಮನುಷ್ಯನ ನಿಯಮಗಳು ಎಷ್ಟು ದೂರ ಬರುತ್ತವೆ, ಎಲ್ಲಿಯ ವರೆಗೆ ಇರುತ್ತವೆ ಎಂಬುದು ಒಂದು ತಪ್ಪಾದ ಪ್ರಶ್ನೆಯಾಗಿದೆ.

ಭೈರಪ್ಪನವರ ಯಾನದ ಜೊತೆಗೆ ಇನ್ನೂ ಹಲವಾರು ಕಾದಂಬರಿಗಳು ಒಂದು ವಿಶೇಷತೆಯನ್ನು ಹೊಂದಿವೆ ಎಂದು ಹಲವಾರು ಜನ ಹೇಳುವುದುಂಟು.ಅದೇಂದರೆ, ಅವರು ಕೆಲವು ಕಾದಂಬರಿಗಳನ್ನು ಬರೆಯುವಾಗ ಪೂರ್ವತಯಾರಿಯಾಗಿ ಕೆಲವು ಅಧ್ಯಯನಗಳನ್ನು ನಡೆಸಿ ಬರೆಯುತ್ತಾರೆ ಎಂಬುದೇ ಆ ವಿಶೇಷತೆ. ಆವರಣ ಕಾದಂಬರಿಯನ್ನು ಬರೆಯುವಾಗ ಇತಿಹಾಸದ ಪುಸ್ತಕಗಳನ್ನು, ಯಾನ ಬರೆಯುವಾಗ ಇಸ್ರೋದಲ್ಲಿ ವಿಜ್ಞಾನಿಗಳೊಂದಿಗೆ ಚರ್ಚಿಸಿ, ವಿಜ್ಞಾನಕ್ಕೆ ಸಂಬಂಧಿಸಿದ ಹಲವಾರು ಪುಸ್ತಕಗಳನ್ನು ಓದಿರುವುದಾಗಿ ಭೈರಪ್ಪನವರೇ ದಾಖಲಿಸುತ್ತಾರೆ. ಅದುವೇ ಬಹುದೊಡ್ಡ ವಿಶೇಷವೆಂದು ಕೆಲವರು ಕೊಂಡಾವುದೂ ಇದೆ, ಆದರೆ ಕಾದಂಬರಿ ಬರೆಯುವಾಗ ನಡೆಸುವ ಈ ಅಧ್ಯಯನಗಳ ಮಹಾತ್ಮೆ ಏನು? ಯಾವುದೇ ವಿಷಯದ ಕುರಿತು ಅಧ್ಯಯನ ನಡೆಸುವುದು ಖಾತರಿಯಾದ ಮೇಲೆ ಕಾದಂಬರಿಯನ್ನು ಬರೆಯುವ ಅಗತ್ಯವಾದರೂ ಏನು? ಅಧ್ಯಯನ ನಡೆಸಿದ ವಿಷಯದ ಕುರಿತು ಲೇಖನವನ್ನೋ ಪುಸ್ತಕವನ್ನೋ ಬರೆದರೆ ಆ ವಿಷಯದ ಕುರಿತ ಜ್ಞಾನವಾಗಿಯಾದರೂ ಅದು ಉಳಿದುಕೊಳ್ಳುತ್ತದೆ. ಆದರೆ ಕಾದಂಬರಿಗಳು ಇತಿಹಾಸ ಪಠ್ಯವೆಂದಾಗಲಿ, ಇಸ್ರೋದ ರಾಕೇಟ್‌ನ ಕೈಪಿಡಿ ಎಂದಾಗಲಿ ಪರಿಗಣಿಸಲ್ಪಡುವುದಿಲ್ಲ. ಕಾದಂಬರಿಗಳಿಗೂ ಅಧ್ಯಯನ ನಡೆಸಿ ಬರೆಯುವ ವೈಜ್ಞಾನಿಕ ಬರಹಗಳಿಗೂ ಬಹಳಷ್ಟು ವ್ಯತ್ಯಾಸಗಳಿವೆ. ಅವುಗಳಲ್ಲಿ ಮುಖ್ಯವಾದುದು, ಅಧ್ಯಯನ ನಡೆಸಿ ಬರೆಯುವ ಬರಹಗಳು ಒಂದು ವಿಷಯದ ಕುರಿತ ಜ್ಞಾನವಾಗಿ ಮಾರ್ಪಡುತ್ತವೆ. ಆದರೆ ಕಾದಂಬರಿಗಳು ಲೇಖಕರ ಕಲ್ಪನಾ ಸಾಮರ್ಥ್ಯವನ್ನು ತೋರಿಸುತ್ತವೆಯೇ ಹೊರತು ಯಾವುದೇ ಜ್ಞಾನವನ್ನಲ್ಲ.

ಯಾವುದೇ ವಿಷಯದ ಕುರಿತು ಎರಡು ರೀತಿಯಲ್ಲಿ ಬರೆಯಲು ಸಾಧ್ಯವಿದೆ. ಒಂದು ಶಿಸ್ತುಬದ್ಧವಾಗಿ ಅಧ್ಯಯನ ನಡೆಸಿ ಆ ವಿಷಯದ ಕುರಿತು ತಿಳುವಳಿಕೆಯನ್ನು ಹೆಚ್ಚಿಸುವುದು, ಹಾಗೂ ಎರಡನೆಯದು, ಒಂದು ವಿಷಯವನ್ನು ತಮ್ಮ ಮಿತಿಯೊಳಗೆ ಕಲ್ಪಿಸಿ ಕತೆಗಳನ್ನು ಹೆಣೆಯುವುದು. ಎರಡನೇ ವಿಧಾನವು ಕತೆ-ಕಾದಂಬರಿಗೆ ಸೂಕ್ತವಾದರೆ, ಮೊದಲನೆಯದು ವೈಜ್ಞಾನಿಕ ಲೇಖನ ಪುಸ್ತಕಗಳಿಗೆ ಸಂಬಂಧಿಸಿರುವುದಾಗಿದೆ. ಆದರೆ ಅವೆರಡನ್ನೂ ಮಿಶ್ರಣ ಮಾಡುವಂತೆ, ಅಧ್ಯಯನ ನಡೆಸಿ ಕಾದಂಬರಿಯನ್ನು ಬರೆಯುವುದು ಅತ್ಯಂತ ಅಸಮಂಜಸವಾದುದು, ಏಕೆಂದರೆಅವೆರಡೂಒಂದಕ್ಕೊಂದು ವಿರುದ್ಧವಾದ ಕ್ರಿಯೆ ಮತ್ತು ವಿಧಾನಗಳಾಗಿವೆ. ಹಾಗೆಂದು ಹ್ಯಾರಿ ಪಾಟರ್‌ನಂತಹ ವೈಜ್ಞಾನಿಕ ಕಟ್ಟುಕತೆಗಳು (ಸೈಂಟಿಫಿಕ್ ಫಿಕ್ಷನ್) ಇಲ್ಲವೆ ಎಂಬ ಪ್ರಶ್ನೆ ಏಳಬಹುದು, ಆದರೆ ಅದು ವೈಜ್ಞಾನಿಕ ಕಟ್ಟುಕತೆಯೇ ಹೊರತು ಆ ಕತೆಯು ವೈಜ್ಞಾನಿಕವಂತೂ

ಖಂಡಿತವಲ್ಲ, ವಿಜ್ಞಾನದ ಅನ್ವೇಷಣೆಗಳನ್ನು ಆಧರಿಸಿ ಲೇಖಕರು ತಮ್ಮ ಕಲ್ಪನೆಯ ಮೂಲಕ ಕತೆಯನ್ನು ಹೆಣೆಯುವುದು ಮಾತ್ರವಾಗಿರುತ್ತದೆ. ಆದ್ದರಿಂದ ವೈಜ್ಞಾನಿಕ ಬರಹಗಳನ್ನು ಬರೆಯುವುದು ಕಾದಂಬರಿಗಳನ್ನು ಬರೆದಂತೆ ಆಗುವುದಿಲ್ಲ, ಹಾಗೆಯೇ ಕಾದಂಬರಿಗಳಿಗೆ ವೈಜ್ಞಾನಿಕತೆಯ ಬಣ್ಣ ಹಚ್ಚುವುದಕ್ಕೂ ಸಾಧ್ಯವಿಲ್ಲ. ಇನ್ನೂ ಒರಟಾಗಿ ಹೇಳುವುದಾದರೆ, ಯಾನ ಕಾದಂಬರಿ ವೈಜ್ಞಾನಿಕ ಎಂದು ನಂಬಿ ಇಸ್ರೋದ ಯಾವ ವಿಜ್ಞಾನಿಯೂ ಅದನ್ನು ತಮ್ಮ ಪ್ರಯೋಗದ ಕೈಪಿಡಿಯನ್ನಾಗಿ ಬಳಸಿಕೊಳ್ಳುವುದಿಲ್ಲ. ಹಾಗೆಯೇ ಇಡೀ ಕಾದಂಬರಿಯಲ್ಲಿ ತಂತ್ರಜ್ಞಾನದ ಕುರಿತ ಮಾಹಿತಿಗಳನ್ನು ಒಟ್ಟಿಗೆ ಸೇರಿಸಿದರೆ ಅದು ೧೫ ಪುಟಗಳನ್ನು ದಾಟುವುದೂ ಇಲ್ಲ, ಇನ್ನುಳಿದ ಪುಟಗಳಲ್ಲಿರುವುದು ಲೇಖಕರ ಕಲ್ಪನೆಯಲ್ಲದೆ ಬೇರೇನೂ ಅಲ್ಲ ಎಂಬುದು ಸ್ಪಷ್ಟ. ಆದ್ದರಿಂದ ಇದನ್ನೊಂದು ವೈಜ್ಞಾನಿಕತೆ ಮತ್ತು ಅಧ್ಯಯನದ ಆಧಾರದ ಮೇಲೆ ಬರೆದಿರುವ ಕಾದಂಬರಿ ಎಂದು ವಾದಿಸುವವರು ವಿಜ್ಞಾನದ ಕುರಿತು ಅಜ್ಞಾನವನ್ನು ಹೊಂದಿದ್ದಾರೆಂದೇ ಅರ್ಥ.

ಯಾನ ಕಾದಂಬರಿಯನ್ನು ಆಂತರಿಕವಾಗಿ ನೋಡಿದರೆ, ಅದೊಂದು ಅದ್ಭುತ ಕತೆ ಅಥವಾ ಬರಹ ಎಂಬುದರಲ್ಲಿ ಯಾವುದೇ ಅನುಮಾನವಿಲ್ಲ, ಆದರೆ ಬಾಹ್ಯವಾಗಿ ನೋಡಿದರೆ, ಮತ್ತು ಅದಕ್ಕೆ ಹಚ್ಚುವ ಅನೇಕ ವಿಶೇಷಣಗಳು ನೋಡಿದರೆ ಅದು ಸರಿಯಲ್ಲ ಎಂಬುದು ಕಂಡುಬರುತ್ತದೆ. ಒಟ್ಟಾರೆಯಾಗಿ, ಭೈರಪ್ಪನವರು ಈ ವಯಸ್ಸಿನಲ್ಲಿಯೂ ಇಂತಹ ಅದ್ಭುತ ಬರವಣಿಗೆಗಳನ್ನು ನೀಡುತ್ತಿರುವುದು ಅಭಿನಂದನಾರ್ಹ ಎಂದೇ ಹೇಳಬಹುದು.

ಇಂಡಿಯಾ ಪ್ಲಾಟ್‌ಫಾರಂ
ಆಳ್ವಾಸ್ ಇಂಜಿನಿಯರಿಂಗ್ ಕಾಲೇಜು
ಶೋಭಾವನ ಕ್ಯಾಂಪಸ್, ಮಿಜಾರು
ಮೂಡಬಿದಿರಿ - ೫೭೪ ೨೨೫
ಮೊಬೈಲ್: ೯೪೮೧೧ ೯೧೮೮೧

ಕವಿತೆಯೆಂಬ ಮಾಯೆ

ಕವಿತೆಯನ್ನು ಅಳೆಯುವುದು, ಆರಿಸುವುದು ಎಂದರೆ ಅಂಗುಲ ಹುಳುವಿನ ಪರಕಾಯ ಪ್ರವೇಶ ಎಂಬ ಎ.ಕೆ.ರಾಮಾನುಜನ್ನರ ಪದ್ಯದ ನೆನಪಾಗುತ್ತದೆ.

ಆದರಲ್ಲೊಂದು ಸಂತೋಷವೂ ಇದೆ. ಅಂಗುಲ ಹುಳು ಕೋಗಿಲೆ ಹಾಡನ್ನು ಅಳೆಯುತ್ತ ತಾನೇ ಕರಗಿಹೋಗುತ್ತದೆ. ಕವಿತೆ ಒಂದು ಅನನ್ಯ ವಿಶಿಷ್ಟತೆ, ಪ್ರತಿಯೊಂದು ಹೂವಿಗೂ ಒಂದು ಅದರದೇ ವಿಶಿಷ್ಟ ಸುಗಂಧವಿರುವಂತೆ ಪ್ರತಿಯೊಂದು ಕವಿತೆಗೂ ಅದರದೇ ಅನನ್ಯ ವಿಶಿಷ್ಟತೆ ಇದೆ. ಯಾವ ಕವಿತೆಯನ್ನು ಬೇಡವೆಂದು ಪಕ್ಕಕ್ಕಿಡುವಾಗಲೂ, ಒಂದಿಷ್ಟು ಒಳಗಿನ ತಾಕಲಾಟಗಳಿರುವುದುಂಟು.

ನಾನು ಆರಿಸಿರುವ ಕವಿತೆಗಳಲ್ಲಿ ಕೆಲವು ಬದಲಾವಣೆಯ ಆಶಯ ಹೊತ್ತಿವೆ, ಹರಿತವಾದ ಸಾಮಾಜಿಕ ಪ್ರಜ್ಞೆ ಹೊಂದಿವೂ ಇವೆ. ಕವಿತೆಯ ಕುರಿತು ಒಂದು ಕವಿತೆಯೂ ಇದೆ.

ಅತ್ಯಂತ ವೈಯಕ್ತಿಕವಾದ ಖಾಸಗೀ ಅನುಭವಗಳಿಗೂ ಕವಿತೆ ಅಡಗುದಾಣವೇ, ಹೆಣ್ಣು ಗಂಡಿನ ಪ್ರೀತಿ, ಅಂತರಂಗದ ತುಡಿತಗಳು ಇಂಥ ಕವಿತೆಗಳ ವಸ್ತುಗಳು.

ಇಂದಿನ ಕವಿಗಳಿಗೂ ಹತಕ್ಕೆ ಬಿದ್ದು ಪದ್ಯ ಕಟ್ಟಲಾಗುವುದಿಲ್ಲ ಎಂಬುದು ಗೊತ್ತಿದೆ. ಭಾಷೆ, ಲಯ, ಕವಿತೆ ಕಟ್ಟುವ ಕ್ರಮ ಎಲ್ಲದರಲ್ಲೂ ಈ ಎಳೆಯರು ಕೈ ಪಳಗಿಸಿಕೊಳ್ಳುತ್ತಲೇ ಒಂದು ಚಿಂತನೆಯ ಎಳೆಯ ಸುತ್ತ ಕವಿತೆ ಕಟ್ಟಿದ್ದಾರೆ. ಮನೆ-ಮನ-ಜಗತ್ತುಗಳ ಸುತ್ತ ಸುತ್ತಿದ್ದಾರೆ. ಅದು ಸುವರ್ಣಗೃಧ್ರದ ವಿರುದ್ಧ ಹಮ್ಮಿಂಗ್ ಬರ್ಡ್‌ನ ಸ್ವಗತವಾಗಬಹುದು ಅಥವಾ ತನ್ನ ಸುತ್ತ ತಾನೇ ಸುತ್ತುವ ಅಂತರಂಗದ ಶೋಧವಾಗಬಹುದು.

ಕವಿತೆ ಸ್ಪರ್ಧೆಗಾಗಿ ಇಲ್ಲ ಎನ್ನುವುದು ಯಾವಾಗಲೂ ನನ್ನ ವಿಶ್ವಾಸ. ಅದರಲ್ಲಿ ತರತಮಗಳಿಲ್ಲ.

ಸಂಚಯದ ಓದುಗರಿಗೆ, ಎಲ್ಲ ಕವಿಗಳಿಗೆ ತುಂಬ ತುಂಬ ಪ್ರೀತಿ.

ನಮಸ್ಕಾರ

ಸ.ಉಷಾ

ನಲ್ಕೆ, ಸಾಗರ ರಸ್ತೆ, ಶಿವಮೊಗ್ಗ. ಮೊಬೈಲ್ : ೯೪೪೫೨೫೪೨೨೩

ನನ್ನ ದೇವರು

■ ಕಾವ್ಯಾ ಸಂತೋಷ ನಾಗರಕಟ್ಟೆ

ನಾವು ಕಂಡೇ ಇರದ ಪುರದ
ತಿರುವಿಂದ ಎದ್ದು ಬರುವನು
ನನ್ನ ದೇವರು

ರಚ್ಚೆ ಹಿಡಿವನು ನೋವು ಎಂದು
ಪಾದ ಚುಚ್ಚಿರುವ ಪಾಳು ನೆಲದ
ಮುಳ್ಳ ದೂರಿ

ಬರೆಯಿಡುವ ಝಳಕೆ ರೆಪ್ಪೆ ಮುಚ್ಚಿ
ನಭದ ಕರ್ಪೂರದುರಿಗೆ ಬೆವರಿ
ಜಾತ್ರೆಯ ಚೌಕ ಸನ್‌ಗ್ಲಾಸ್ ತೊಟ್ಟು
ಸೊಂಪಾಗುವನು ವಿಶ್ವವ್ಯಾಪಿ

ಈಗವನ ಒಂದು ಲೋಕದ ಕಣ್ಣು ತಂಪು
ಇನ್ನೊಂದಕ್ಕೆ ಇನ್ನೂ ಜೊಂಪು

ತಿಲಕ ದಿರಿಸು ಫಲಕ ದಾರ
ಗೋಡಂಬಿ ಬದಾಮು ಒಣದ್ರಾಕ್ಷಿ ಹಾರ
ನೈವೇದ್ಯದ ಹಾಲು ತುಪ್ಪ ಪಾಯಸವ
ಜರಿದು ಬಂದವ ನನ್ನ ದೇವರು

ಅರಳುವ ಪುಷ್ಪವ ಮೊದಲ ಬಾರಿ
ಬಳ್ಳಿಯಲ್ಲೇ ಕಂಡವನು

ಬೇಡ ಅವನಿಗೆ ಜೋಗುಳ ಸುಪ್ರಭಾತ
ಮನೆಯಿಲ್ಲ ಪುರವಿಲ್ಲ ಗುಡಿಯ ಗೋಪುರವಿಲ್ಲ
ಬಿಗಿದಿಟ್ಟ ಸರಪಳಿಯ ಕೊರೆದು ಬಂದವನವನು
ಕಾಲವ್ಯಾಪಿ

ಗೊಂಬೆಯಂತ ಮಗು ನಕ್ಕರೆ ಮಾತ್ರ
ಹಲ್ಲು ಕಿಸಿಯುತ್ತಾನೆ ಕುಂಟೋಬಿಲ್ಲೆಯಾಡುತ್ತ
ರೈಟಾ? ರೈಟಾ? ಎಂದು ಲೋಕ ಸುತ್ತುತ್ತಾನೆ

ಒಂಟಿಕಾಲಿನ ಅವನೂ ಜಾರುತ್ತಾನೆ ಒಮ್ಮೊಮ್ಮೆ
ಜಾರಬಾರದೆಂದರೆ ಹೇಗೆ?
ದೇವರಾದದ್ದೇ ಹಾಗೆ

ಹುಡುಕಿ ನೋಡಿದರೆ ಸಿಗಬಲ್ಲ ಫೇಸಬುಕ್ಕಿನಲ್ಲೂ
ಪ್ರೈಮ್ ಟೈಮ್ ವಾರ್ತೆಯಲ್ಲೂ ಇಣುಕಿ ನಡೆಯಬಲ್ಲ

ಸುಲಭವಲ್ಲ ಭೇದಿಸುವುದು ಲೋಕ ಕಂಡವನ
ಮೊಗದ ಗೆರೆಗಳ ಮರ್ಮ

ಒಮ್ಮೆ ಇತ್ತ ಬಂದ ಅವನು ತಿರುಗಿ
ಹೋಗಲಾರ ಚಿತ್ರದೊಳಗೆ ತೊಡಲಾರ
ಕಿರೀಟವ ಹೊಕ್ಕಲಾರ ಮೂರ್ತಿಯ
ಐಕ್ಯವಾಗಲಾರ ಸಮಾಧಿಯಲ್ಲಿ

ಕಲಶ- ಮೈಕು- ಮೆಟ್ಟಿಲುಗಳ ತೊರೆದು
ಕುಳಿತೇ ಬಿಟ್ಟಿದ್ದಾನೆ
ಊರ ಮಧ್ಯದ ಬಯಲಲ್ಲಿ

ಮುಗಿಲ ಮೊದಲ ಹಸಿರ ತುಣುಕಿಗೆ
ವಿಪರೀತ ಹಸಿದಿದ್ದಾನೆ

ನಮ್ಮ ನಿಮ್ಮಂತೆಯೇ
ಜೀನ್ಸು ತೊಟ್ಟಿದ್ದಾನೆ.

50, Maple Court, Highland Park
New Jersey - 08904
Mobile: 9845779387

ಮಾತು ಕಲಿಯಲಿ ನಡುಗಂಬ

■ ಗಿರಿಯಪ್ಪ ಆಸಂಗಿ

ವೇಷಧಾರಿಗಳ ಚಪಲ
ಚಹರೆಗೆ
ಜಂಗು ಬಡಿದು
ಅಮಾನುಷವಾಗಿ ಮಲಗುವ
ನಡುಗಂಬ
ಮಾತು ಕಲಿಯಬೇಕಿದೆ

ಪಾಳುಬಿದ್ದ ಎದೆಯ
ಕವಚಗಳಲಿ
ಆರದ ತೇವ ಖಾಲಿಯಾಗಿಸಿ
ನಿರ್ವೀರ್ಯವಾಗಿ ತೇಲುವ
ಹುಸಿ ನಗುವಿನ
ಮೌನ ಕಳಚಲು
ಮಾತು ಕಲಿಯಬೇಕಿದೆ ನಡುಗಂಬ

ನಮ್ಮಿಬ್ಬರ ಪಿಸುಮಾತಿಗೆ
ಕಿವಿಯಾದ ಗೋಡೆಗಳು
ಕಣ್ಣಾಗ ಪ್ರೀತಿಯ
ಕೊಳ ತುಂಬಿಕೊಂಡು
ಎದೆಯಾಗ ನೆಲ ಬಿಗಿದುಕೊಂಡು
ಬಂಜರು ನೆಲ ಆಗೆವ ರೆಂಬೆಗೆ
ಮಾತು ಕಲಿಸಬೇಕಿದೆ ನಡುಗಂಬ

ನಾಳೆಗಳ ನಕಾಶೆಯೊಳಗೆ
ಹೊಸ್ತಿಲ ಹೊಕ್ಕಳು
ಹುಣ್ಣು ಬೀಳದಂತೆ...

ನಿರ್ಲಿಪ್ತ ಮೌನ
ನಿರಾಧಾರದ ಯಾನದೊಳಗೆ
ರೆಕ್ಕೆಪುಕ್ಕ ಸಡಲಿಸಿ
ಗವಿಯ ಕೂಪದಿಂದ
ಕರುಳು ಹೊರಬೀಳಲು
ಮಾತು ಕಲಿಯಲಿ ನಡುಗಂಬ

ನೆಲದ ಎದೆಯ ದೀಪಗಳಾಗಿ
ಆರದ ಗಾಯಗಳು
ಸಮುದ್ರದ ಪಥದೊಳಗೆ
ನಗು ಕಳಚಿಟ್ಟು ಮಲಗುವಾಗ
ಮಾತು ಕಲಿಯಲಿ ನಡುಗಂಬ

ಶತಮಾನದ ಚಕ್ರದೊಳಗೆ
ನಮ್ರತೆಯಿಂದ ಮಲಗಿ
ಹೆದ್ದಾರಿಯ ಹೆಗ್ಗಣಗಳಿಗೆ
ಹೆಗ್ಗುರುತಾಗಿ ಬಿದ್ದ
ಮುಗಿಲ ಸ್ವರೂಪಕ್ಕೆ
ಎದೆಯೊಡ್ಡಿ ನಿಂತ ಹೊಸ್ತಿಲೇ
ಇಂದು ನೀ ಮಾತು ಕಲಿಯಬೇಕಿದೆ

ಮಾತು ಕಲಿಯಲಿ ನಡುಗಂಬ
ಮಾನಗೇಡಿ ನೆರಳುಗಳ
ನೆಲೆ ಕತ್ತರಿಸಲು
ಮೌನ ಮುರಿಯಲಿ ಹೊಸ್ತಿಲು
ಗುಪ್ತ ಗೂಳಿಗಳ ಬುಡ ಅದುರಿಸಿ
ಸ್ಥಿರವಾದ ನೆಲೆಗೆ
ನಿಟ್ಟುಸಿರ ದೀಪ ಹಚ್ಚಲು

ಕಿರಸೂರು (ಪೋಸ್ಟ್), ಬಾಲಗಲಕೋಟೆ ಜಿಲ್ಲೆ
ಮೊಬೈಲ್: ೮೧೦೫೭೮೯೦೦೭

ಹಮ್ಮಿಂಗ್ ಬರ್ಡ್‌ನ ಸ್ವಗತ

■ ಚನ್ನಪ್ಪ ಅಂಗಡಿ

ಸಣ್ಣದದೇನಿದ್ದರೂ ಚೆಂದವೆಂಬುಪಾಧಿಯಿದೆ
ಬಣ್ಣವದದೇನಿದ್ದರೂ ಸೃಷ್ಟಿಯಲದಕೊಂದು ನಿಯತಿಯಿದೆ
ನಾನೂ ಹಾರುತ್ತೇನೆ ಎಲ್ಲ ಹಕ್ಕಿಗಳಂತೆ
ರೆಕ್ಕೆಗಳಿವೆ ಹಾರುವ ನಿಯಮದಂತೆ
ತಾಯ್ನೆಲ ಕಾಯ್ವ ಯೋಧನ ಸಮವಸ್ತ್ರದಂತೆ.

ಜೇನು ಹೀರುತ್ತೇನೆ ಶಲಾಕಾಗ್ರದ ತಳದಿಂದ
ಮಧುವ ಮುಕ್ಕಳಿಸುಗುಳುವ ಮಹಾಂತನಂತೆ
ಹಾಡಿ ಹೊಗಳುತ್ತಾರೆ ಕವಿಗಣಂಗಳು
ಹೊಟ್ಟೆ ತುಂಬದಿದ್ಯಾವುದೂ ಹಸಿವಿಗಾಗಿ ಹಸಿದವಗೆ.

ಸೆಡ್ಡು ಹೊಡೆಯುತ್ತೇನೆ ಪುಟಿದೆದ್ದು
ಹಾರುವ ಹದ್ದು ಗಿಡುಗಗಳ ಸದ್ದಿಗೆ
ನೆಲದ ನೆತ್ತಿಯ ಮೇಲೆ ರೆಕ್ಕೆಗಳನಗಲಿಸಿ
ಮಸಿಗತ್ತಲೆ ಹರಡುವ ಮದೋನ್ಮತ್ತನಿಗೆ
ಝಳಪಿಸುವ ಕಿರಣದಿಂದೆದೆಗಿರಿಯುವಾಗ
ಕೊಂಕಿಸುವ ಕೊರಳಿಗೆ ಜಿಗುಪ್ಸೆಯೇ ಬೇಟೆ !

ಸಂದಿಗೊಂದಿ ಬಿರುಕಿನಲಿ ಸ್ಥಿರ-ಚರಾಸ್ತಿ, ಗಂಟು
ಹೂವಿನೊಡಲೊಳಗೆ ಬಂಡಾಯದ ಬಂಡಿನಂಟು
'ಅದಕು ಇದಕು ಎದಕೂ' ತಬ್ಬಿರುವ ನಂಟು
ಮುದ್ದಿಗೂ ಸದ್ದಿಗೂ ಬಿದ್ದಿದ್ದೆ ಜಿದ್ದು
ನನ್ನಾನಂದದ ಮುಂದೆ ನಿನ್ನಧಿಕಾರದ ದರ್ಪ
ನಿನ್ನ ಸುತ್ತಿ ಹತ್ತಿಕ್ಕಿರುವ ಏಳು ಹೆಡೆ ಸರ್ಪ.

ಕಾರುವ ಬೆಂಕಿಗೆ ಬೆಳದಿಂಗಳುಡುಗೆ ತೊಡಿಸಿ
ಎರಗಿದ ಮೈಯ ಎಡಬಲಕೆ ಕಚಗುಳಿಯಿಟ್ಟು
ಕಕ್ಕುವ ವಿಷದಲಿ ಗಂಧ ತೇಯ್ದು ಲೇಪಿಸಿ
ಕುಕ್ಕುವ ಕೊಕ್ಕಿಗೆ ಕಣ್ಣಪಾಪೆಯನು ಮುಂದಿಟ್ಟು
ನೆಗೆಯುತ್ತೇನೆ ಕ್ಷಣದಲಿನ್ನೂರು ಸಲ ರೆಕ್ಕೆ ಬಡಿದು
ಒಲವಿನೆಡೆಗೆ ಝೇಂಕಾರ ; ಬಲವ ಹೇರಲು ಬಂದರದೇ
ಹೂಂಕಾರ, ಉದಾಸೀನಕೆ ವಾಸಿಯಾಗದೆ ರೋಗ : ಅಹಂಕಾರ.

ರೆಕ್ಕೆಯಗಲಕಿದೆ ಅಲ್ಲಮನ ಬಯಲ ವ್ಯಾಪ್ತಿ
ಬಣ್ಣ-ಗಾತ್ರ ಮೀರಿ ದಶದಿಕ್ಕಿಗೆ ಬೆಳೆವ ಪ್ರಾಪ್ತಿ
ಹುರಿದು ಮುಕ್ಕಿದರು ದಕ್ಕದು ರಕ್ಕಸನ ಹೊಟ್ಟೆಗೆ
ನನ್ನ ಗಮ್ಯಸ್ಥಾನವೋ, ಇನ್ನಿಲ್ಲದ ಶೂನ್ಯಸಂಪಾದನೆ.

ಕಬ್ಬಿನ ಗದ್ದೆ ಆಡಿ ಬೆಳೆಯುವ ತೊಟ್ಟಿಲು
ಪ್ರತಿ ಗೂಡು, ಸಕ್ಕರೆ ತುಂಬಿದ ಬಟ್ಟಲು
ದೇವದೂತನೊಲುಮೆ-ದ್ವಿಗುಣಗೊಂಡ ಸಂಕುಲ
ಅಗಣಿತ ಬೇರು ಬಿಳಲುಗಳಿಗಿರುವುದೊಂದೇ ನೆಲ
ಹಸಿವು ಬಾಯಾರಿಕೆ ನೀಗಲು ರಟ್ಟೆಯೇ ಬಲ

ಸಮರಗಳದೆಷ್ಟು ನಡೆದವೊ ಭೂಗೋಳದ ತೋಳಗೆ
ಉಸಿರುಗಟ್ಟುವ ಅಹಿತಕೆ ಕೊಸಿರೇಳುವ ಕ್ರಾಂತಿ
ಸಣ್ಣದೆಂಬ ಬಣ್ಣನೆಗೆ ಉಬ್ಬಿ ಹೋಗದ ಭ್ರಾಂತಿ
ತಲೆಯೆತ್ತಿದ ಭುಜದ ಮೇಲೆ ಬದ್ಧತೆಯ ಸಿದ್ಧಾಂತ
ಚಿಗುರೊಡೆದು ಬೆಳೆದ ಚೆಂಗುಡಿ : ಚೆಗೆವಾರ

ನೇರ ದೃಷ್ಟಿಯೊಂದಿಗೆ ನೀಳ ಚುಂಚಿನ ಸಹವಿಕಾಸ
ಕೋವಿ ಕಾವ್ಯದೆದೆಗೆ ದಂಗೆಯೇಳುವ ಮಂದಹಾಸ !

ಟಿಪ್ಪಣಿ : ವಿಶ್ವದ ಅತ್ಯಂತ ಸಣ್ಣ ಹಕ್ಕಿ ಹಮ್ಮಿಂಗ್ ಬರ್ಡ್‌ನ ನೆಲೆ ಕ್ಯೂಬಾ ದೇಶ. ಸಕ್ಕರೆ ಕಣಜವಾಗಿರುವ ಕ್ಯೂಬಾ ಅಂಗೈಯಗಲದ ರಾಷ್ಟ್ರ. ಹಮ್ಮಿಂಗ್ ಬರ್ಡ್‌ನಂತ ಕ್ಯೂಬಾದ ಮೇಲೆ ಹದ್ದಿನಂತೆರಗುವ ಅಮೆರಿಕಾಕ್ಕೆ ಈ ಚಿಕ್ಕ ರಾಷ್ಟ್ರ ಸೆಡ್ಡು ಹೊಡೆಯುತ್ತದೆ, ಸ್ವಾಭಿಮಾನದಿಂದ ಬದುಕುವ ತನ್ನ ಹಕ್ಕಿಗಾಗಿ.

ಕೃಷಿ ಅಧಿಕಾರಿ 'ಕಾಯಕ'
ಕುಮಾರೇಶ್ವರನಗರ, ಬೆಳಗಾವಿ ರಸ್ತೆ,
ಧಾರವಾಡ-೮ ದೂ :೯೪೪೮೩೨೭೭೮೩
ಇಮೇಲ್ : ccangadi70@gmail.com

ಸಂತೆ ಬಿಸುಟ ಸಂತ

■ ದೀಪ್ತಿ ಭದ್ರಾವತಿ

ಬೂದುಗುಂಬಳದ ಮಜ್ಜಿಗೇ ಹುಳಿ, ಸೌತೆಯ ಮೊಸರು ಸಾಸಿವೆ
ಕಡಲೆ ಕೋಸಂಬರಿ, ಬರಿಯ ಟೊಮ್ಯಾಟೊ ಹಣ್ಣಿನ
ಸಾರು, ಕಂಡ ಕಂಡ ತರಕಾರಿಗಳ
ಹೆಚ್ಚಿ ಮಾಡಿದ ಸಾಂಬಾರು, ಚಟ್ ಎನ್ನುವ ಹುಣಿಸೇ ಗೊಜ್ಜು
ಖಾರ ಕಟ್ಟುವ ನೂರೆಂಟು ನಮೂನೆಯ ಚಟ್ನಿ
ಬಣ್ಣ ಬಣ್ಣದ ಪಲ್ಯ, ಹುಳಿದೊವ್ವೆ
ತಂಪಿನ ತಂಬಳಿ ಪದಾರ್ಥ ಯಾವುದಾದರೇನು
ಕಂಪ ಚಿತ್ತಾರಕೆ ಬೇಕು
ಕರಿಬೇವಿನ ಕುಸುರಿ
ಒಣಗಿ ಕರಿಗಟ್ಟಿದ್ದು ಉಪಯೋಗವಿಲ್ಲ
ತೀರ ಎಳೆಯದು ಪ್ರಯೋಜನವಿಲ್ಲ
ಹರೆಯದ ಹುರುಪಿನಲಿ ಅತ್ತಿತ್ತ ಹಾರುವ
ಗುಂಗಿ ಹುಳುವಿನ ಚುರುಕಿರುವ
ಒಂದೆರಡು ಎಸಳಾದರೂ ಸಾಕು..
ಹಾಕಿದ ಒಗ್ಗರಣೆಗಳಲಿ ಠಣ್ಣನೆ ಹಾರಿ ಕಮ್ಮಗೆ ಕರಗಿ
ಕಲಸಿದ ಬೆರೆಸಿದ ಸರಂಜಾಮುಗಳ ಜೊತೆಯಲ್ಲಿ

ಬೆರೆತು ,ಬೆಸೆದು ತನ್ನೆಲ್ಲ ಬಿಂಕ ಬಿಗುಮಾನಗಳ
ತೊರೆಯುತ್ತ ದಿವ್ಯ ಬಂಧದ
ತತ್ವ ಹೊಸೆಯುವಾಗ ರಸದ ಮಹಾಕಾವ್ಯವು
ಅಡುಗೆ ಮನೆಯ ಹೊಸ್ತಿಲು
ದಾಟಿ ಬಯಲು ಆಲಯದ ನರ ನಾಡಿಗಳಲ್ಲಿ
ನಿರುಮ್ಮಳ ಸಂಚರಿಸುತ್ತದೆ
ಕುದಿವ ಪರಿಕರಗಳ ಜೊತೆಯಲ್ಲಿ ಪದೇ ಪದೇ
ಕುದ್ದು, ತಣ್ಣಗೆ ಆರುವುದರ ಜೊತೆಗೆ
ಮತ್ತಷ್ಟು ಆರಿ, ಬೆರೆಯುತ್ತಲೇ ಬೇರೆಯಾಗುತ್ತ
ಸಂತೆ ಬಿಸುಟ ಸಂತನಂತೆ ಕೂತುಬಿಡುತ್ತದೆ
ಹಬೆಯ ತಟ್ಟೆಗಳ ಬೇಲಿ ದಾಟಿ
ಸಹ ಪಯಣಿಗರೆಲ್ಲ ಜೀಕುತ್ತ ಜಗಿಯುತ್ತ
ನಡುನಡುವೆ ತೊನೆಯುತ್ತ
ಉದರವೆಂಬ ಬಸ್ಸಿನಲ್ಲಿ
ರಕ್ತ, ಮಾಂಸ, ಮಜ್ಜೆಗಳೆಂಬ ಸೀಟು
ಹೆಕ್ಕುವಾಗ
ತಾನೊಬ್ಬನೇ ಅನಾಮಿಕ ಗಲ್ಲಿಯಲ್ಲಿ
ಅಲೆಯುತ್ತ
ಕೆಂಪು ದೀಪದ ಬಳ್ಳಿಗಳಿಗೆ ನೆರಳು
ಅರಸುತ್ತದೆ.

'ಸ್ನಿಗ್ಧ', ೨ನೇ ಕ್ರಾಸ್, ಬಲಗಡೆ
ಶಂಕರಮಠ ರಸ್ತೆ, ಸಿದ್ಧಾರೂಢ ನಗರ, ಭದ್ರಾವತಿ
ಮೊಬೈಲ್ : ೯೭೩೮೩೪೬೫೫೩

ಹರಕ್ಕೆ ಬಿದ್ದು ಪದ್ಯ ಕಟ್ಟಲಾಗುವುದಿಲ್ಲ

■ ಪದ್ಮನಾಭ ಭಟ್

ಇದು ಬೇಸಿಗೆ ಕಾಲ
ಮೊಸರು ಹುಳಿಯಾಗದ ಹದದಲ್ಲಿ
ಹಾಲಿಗೆ ಹೆಪ್ಪು ಹಾಕುವುದು ಬಲುಕಷ್ಟ

ದೋಸೆ ಮುರಿದು ಮೊಸರಲ್ಲದ್ದಿ
ಬಾಯಿಗಿಟ್ಟ ಕೂಡಲೇ ಮುಖ ಕಿವುಚಿ, ಹೂಂಕರಿಸಿ
ತಾಟು ಸರಿಸಿ ಅಪ್ಪ ಎದ್ದು ಹೋಗದ ಹಾಗೆ,
ಬೆಲ್ಲ ಬೇಕು ಎಂದೆಲ್ಲ ನಾನು ರಗಳೆ ಮಾಡದ ಹಾಗೆ,
ನನ್ನೊಟ್ಟಿಗೆ ತನ್ನ ತಾಟಿಗೂ ಬೀಳುವ ಬೆಲ್ಲಕ್ಕಾಗಿ
ಅಕ್ಕ ಆಸೆಗಣ್ಣಿನಿಂದ ನೋಡದ ಹಾಗೆ,
ಹೆಪ್ಪು ಹಾಕುವ ಹದ ಅಮ್ಮನಿಗಷ್ಟೇ ಗೊತ್ತಿತ್ತು

ಎಂದೆಲ್ಲ ನಿನಗೆ ಹೇಳಿದರೆ ಹಳೆಯವರ ಹಳಹಳಿಕೆ
ಎಂದು ಸಿಡುಕುತ್ತಿ

ಎಂಜಿ ರೋಡಿನ ಜೋಡಿಗಳ ಹೆಗಲಂತೆ
ಅಂಚಷ್ಟೇ ತಾಕಿಕೊಂಡ ನಮಗೆ
ಎದೆ ಮಧ್ಯವ ಬೆಸೆದುಕೊಳ್ಳುವ
ಜರೂರು ಹುಟ್ಟಲೇ ಇಲ್ಲ

ನೈಟು ಶಿಫ್ಟು, ಬಾರು ಹುಡುಗಿಯರು,
ಬಿಳಿ ತೊಡೆ, ಬಣ್ಣ ಬಣ್ಣದ ತುಟಿಗಳು
ಬೀದಿ ಬದಿ ಭಿಕ್ಷುಕ, ಡೆಡ್‌ಲೈನು, ಸಂಬಂಧ, ಸಂಭೋಗ, ಅನೈತಿಕತೆ
ಅಂತೆಲ್ಲ ಎಷ್ಟೇ ಬರೆದರೂ
ನನ್ನ ಸದ್ಯಕ್ಕೆ ತಾಳೆಯಾಗುತ್ತಿಲ್ಲ

ಆರಿದ ಬಾವಿಯ ಆಳದ ಕತ್ತಲೆಯಿಂದ
ಹೆಕ್ಕಿತಂದ ಹರುಕು ಮಾತುಗಳ
ಅಕ್ಕಪಕ್ಕ, ಲಯಬದ್ಧ ಕೂಡಿಸಿ, ಜೋಡಿಸಿ, ಹೆಣಗಿ ಹೆಣೆದರೂ
ಈ ಪದ್ಯ ಅಸಲಿಯಾಗುತ್ತಿಲ್ಲ,

ತಡರಾತ್ರಿ ನಿನ್ನ ಬೆತ್ತಲೆ ಮೈಯ ಕನಸಾಗಿ
ಬೆನ್ನಹುರಿಗುಂಟ ಮೈಥುನದ ಬೆವರು ಜಿನುಗಿ,
ಎಷ್ಟೇ ಬಿಗಿದರೂ ಮಧ್ಯ ಉಳಿದುಬಿಡುವ
ಅಂತರದ ವಿಕಾರಕ್ಕೆ ಬೆಚ್ಚಿ
ಧಕ್ಕನೇ ಎದ್ದುಕೂತಾಗ ಹೊಳೆಯಿತು
ಇದಕ್ಕೆ ಇಷ್ಟರ ಹೊರತು ಬೇರೆ ಅರ್ಥವಿಲ್ಲ.
ಹಠಕ್ಕೆ ಬಿದ್ದು ಪದ್ಯ ಕಟ್ಟಲಾಗುವುದಿಲ್ಲ.
ಬಿಡು,
ಕೆಡವಿದ್ದು ಒಳ್ಳೆಯದೇ ಆಯಿತು
ಅದು ಎಷ್ಟು ಲಘುವಿತ್ತೆಂದು ತಿಳಿಯಿತು.

ಉಪ ಸಂಪಾದಕ 'ಪ್ರಜಾವಾಣಿ' ಮೆಟ್ರೋ ವಿಭಾಗ
ನಂ. ೭೫, ಎಂ.ಜಿ. ರಸ್ತೆ, ಬೆಂಗಳೂರು - ೫೬೦ ೦೦೧
ಮೊಬೈಲ್ : ೯೪೮೧೦೦೧೩೯೯೭

ಭರವಸೆಯ ದಾರಿಯಲ್ಲಿ ಅರಳು ಮಲ್ಲಿಗೆ

■ ಮಧು ಬಿರಾದಾರ

ನಿನ್ನ ನೆಲದ ಧೂಳಿನಲ್ಲಿ
ಕಣ್ಣೀರಿಡುವ ಶಬರಿಗೆ
ಹೀಗಾಗಬಾರದಿತ್ತು ರಾಮಾ!
ಹೀಗಾಗಬಾರದಿತ್ತು

ಬೆನ್ನುಬಾಗಿದ ಮುದುಕಿಗೆಷ್ಟು ತ್ರಾಣ?
ಮುಪ್ಪೋ-ಹಸಿವೋ
ತತ್ತರಿಸುವ ಹೆಜ್ಜೆ
ಅಳಿದ ಹೆಜ್ಜೆ ನೆನಪಲ್ಲಿಯೆ
ಸವೆಸುತ್ತಿದ್ದಾಳೆ ಅಲೆಮಾರಿ ಬದುಕು

ಪರಿಚಯವಿದೆ
ಮುಖ ಸಿಂಡರಿಸುವ ಸಮಾಜದ ಬಗ್ಗೆ
ಕಣ್ಣಿನಾಳದಲ್ಲಿ ಅನಾಥ ಪ್ರಜ್ಞೆಯ ದೊಂಬರಾಟ
ಈ ಕಣ್ಣಗೋಲಿಯದು
ಸಾತ್ವಿಕ ಪಥ
ಗತ-ವರ್ತಮಾನದ
ಸಂಘರ್ಷವರಿತು
ನಡೆದಿದ್ದಾಳೆ
ಮರಕ್ಕೆ ಕಾಯಿ ಭಾರವೇಕೆ?

ತಾಂತ್ರಿಕತೆಯ ಬಗ್ಗೆ
ಧಿಕ್ಕಾರವಿದೆ ವೃದ್ಧಾಶ್ರಮಕ್ಕೆ
ಕಾಲಕಿತ್ತು ಸಣ್ಣಗೆ ನಗುತ್ತಾಳೆ
ಬಹಿಷ್ಕರಿಸಿದ ದೇವಸ್ಥಾನದ ಮುಂದೆ

ಕಸಿವಿಸಿಗೊಂಡಿದ್ದಾಳೆ
ಚಂಡ ಮಾರುತಕ್ಕೆ
ಬದುಕಿನ ಮಾನ್ಸೂನ್ ಆರ್ದ್ರತೆಗೆ
ಬೆಂದಿದ್ದಾಳೆ
ಎಲ್ಲವೂ ಸಾಗಿಬಂದ
ಬಚ್ಚ ಮುದುಕಿ
ವ್ಯವಸ್ಥಿತ ಜಾಲದ ಬೆಸುಗೆಗೆ

ಬೋರಲ ಹಣ್ಣ ಹಂಚಿದ್ದಾಳೆ
ಜೀವನವಿಡೀ ಆಯ್ದು ಆಯ್ದು
ದಾರಿ ಕಾದು ಕಾದು
ತಿಂದ ಫಕೀರ ಕೊಬ್ಬಿದ್ದಕ್ಕೆ
ಕೈ ಒಡ್ಡಬೇಕಾಗಿದೆ

ಮಾತೃ ನೆಲದ ಸತ್ವ ಹೀರಿ ಬೆಳೆದ
ಹಾಗಲ ಬಳ್ಳಿ ಇವಳು
ಸ್ವಾಭಿಮಾನದ ತೆಂಗಿನ ಮರ

ಆಸರೆ... ಬೋಳು ಮರದ ಟೊಂಗೆ ನೆರಳು
ತೆಂಕಣ ಗಾಳಿ
ನಾಚಿಗೆಟ್ಟ ತುತ್ತಿನ ಚೀಲಕ್ಕೆ
ತಣ್ಣೀರ ತೃಪ್ತಿ
ಬೆಂಕಿಯುರಿತದ ಪಾದಕ್ಕೆ
ಬಾಳೆ ಎಲೆಯ ಪಾದರಕ್ಷೆ

ಭರವಸೆಯ ದಾರಿಯಲಿ
ಅರಳು ಮಲ್ಲಿಗೆ ಕನವರಿಸುತ್ತ ಬಿರಿದ ಜುಟ್ಟ ಕೆರೆಯುತ್ತ
ಬಾಗುತ್ತ ಬಳುಕುತ್ತ ಶಬರಿ ಕ್ರಮಿಸುತ್ತಿದ್ದಾಳೆ
ಹಿಡಿಶಾಪವಿಲ್ಲದೆ.

ಕೇರಾಫ್ ಅನಿಲ್ ಪೆರಡ್ಡಿ ಬಿಲ್ಡಿಂಗ್, ಗಣೇಶ ಗುಡಿಯ ಹಿಂದೆ
ಮೊಬೈಲ್ ಟವರ್ ಹತ್ತಿರ, ೧೫ನೇ ಕ್ರಾಸ್, ನವೋದಯ ನಗರ,
ಧಾರವಾಡ - ೫೮೦ ೦೦೩, ಮೊಬೈಲ್ : ೯೬೮೬೬೪೫೭೬೩

ಫಕೀರನ ವರ್ತಮಾನ

■ ಮಹಂತೇಶ ಪಾಟೀಲ

೧

ಅವ್ವಳ ಇರುಳ ಕಂಬನಿ
ಊನು ಬೆನ್ನಿನ ಉಲ್ಲಾಸಿ ಮುದುಕ
ಉಪ್ಪಿನ ರಿಣಕ್ಕೆ
ಬೀದಿ ಜೀವಗಳ ಉದ್ಧಾರಕ್ಕೆ
ಊರುಗೋಲೂರಿ ಊರೂರು
ಗಾಣದೆತ್ತಿನಂತೆ ತಿರುಗಿದ್ದನಂತೆ

ಒಪ್ಪತ್ತುಂಡು ಒಪ್ಪಾಗಿಯೇ ಇದ್ದನಂತೆಂದು
ಅವ್ವ ಕರಿಮಣಿಯಂತೆ ಕತೆಯ ಪೋಣಿಸಿದಳು
ಪಾಪ...
ಆರಿಪ್ಪತ್ತು ಕೋಟಿ ದರಿದ್ರ ಜಂತುಗಳ
ಉದ್ಧಾಮರ ಅನಾಥ ತಂದೆಯೆಂದು
ಕಳೆದ ತಿಥಿಯೆಂದು
ಅವ್ವ ಕಣ್ಣೀರ ಬಾಯಿಗೆ ತಂದಳು

೨

ಗುಮಾನಿ ಮಕ್ಕಳು
ಹೂಮನದ, ಉಕ್ಕಿನ ಪುತ್ಥಳಿಯ ಮುಂದೆ
ಕಾಗೆ ಹಿಂಪುಚ್ಚವೆತ್ತಿದ್ದಕ್ಕೆ
ಮೂಗು ಹಿಡಿದು, ತಿಕಾ ಒರೆಸಿಕೊಳ್ಳುವ
ಬೇಬರಸಿ ಕಳ್ಳಬಳ್ಳಿಗಳು
ನಾಜೂಕಿನ ಮಾನಗೇಡಿಗಳಾದರೂ ಅನ್ನಿ;
ಅಜ್ಜನ ಪ್ರೇಯಸಿಯರ
ಹರೆಗನಸುಗಳ ಕದ್ದು ನೋಡುವುದೆಂದರೆ
ಒಮ್ಮೆಗೆ ಹತ್ತಾರು ಸಿಗರೇಟಿನ

ದಮ್ಮೆಳದಷ್ಟು ಧೂಮಾನಂದ ನಮಗೆ!
ಅಥವಾ
ಹಳೆಬೈಕಿನಲ್ಲಿ ಹೊಸ ಗೆಳತಿಯೊಡನೆ
ಜಾಲಿ ಮಾಡಿದ ನಿತ್ಯಾನಂದ ಹೈಕಳುಗಳಿಗೆ;

೩

ತಾಯಿಯಾಗದ ತಂದೆ
ಲಯವರಿಯದ ಲೋಲಕಪತಿ
ಫಕೀರನಿಗೆ ಆತ್ಮಶಾಂತಿ ಸಿಗಲೆಂದು
ಗುಂಡು ಹಾಕಿಕೊಂಡು
ಮ್ಯಾಕ್ ಡೊನಾಲ್ಡ್ ಕಂಪೆನಿಯ ತಿಂಡಿ
ಬಿಚ್ಚುತ್ತಾ: ನಾಲಗೆ ಮೇಲೆ
ಮೇಡ್ ಇನ್ ಇಂಡಿಯಾ
ಅಂತ ಅಚ್ಚು ಹಾಕಿಸಿದ್ದಾನೆ!

೪

ಬೆನ್ನ ಮುಂದಿನ ಬಂಧುಗಳು
ಅಜ್ಜನ ಗೋರಿಗಿಡದ ನೆರಳಿನಲ್ಲಿ
ಬೀದಿ ದನಗಳು ಮೈ ಜಾಡಿಸಿದಾಗ
ಹೂವಿಗೆ ಹೂವು ಚುಂಬಿಸಿದ ಪುಳಕ!
ನಟ್ಟಿರುಳಲ್ಲಿ ಬೆಳಕಿಗಂಜಿ
ನಾಯಿ ಬೊಗಳಿದಾಗ;
ಯಾವುದೋ ಅಸ್ಪಷ್ಟ ನಗುವಿನಲೆ ಎದೆಗೆ ತಾಕಿ
ತುಕ್ಕು ಹಿಡಿದ ಚಕ್ರ ತಿರುಗಿ
ಖಾದಿಯೊಳಗಣ ಖದೀಮರು ಬೆವರುತ್ತಾರೆ;

ನಮಗೆ ಹೆಣಭಾರವೆನ್ನಿಸುವ ನಗೆಯ ನೆನಪು
ತಲೆ ಎದೆಯಲ್ಲಿ ಹೂಳು ತುಂಬಾ
ಪೊರಕೆಗಳ ಕನವರಿಕೆ
ವಿಲೇವಾರಿ ಹಳವಂಡಗಳಿಗೆ
ಹಗಲುಗನಸುಗಳೇ ಆತ್ಮರತಿ!

ಸಂಶೋಧನಾ ವಿದ್ಯಾರ್ಥಿ, ಕನ್ನಡ ಅಧ್ಯಯನ ಸಂಸ್ಥೆ
ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ, ಕಡಗಂಚಿ - ೫೮೫ ೩೧೧,
ಆಳಂದ ತಾ।।, ಕಲಬುರ್ಗಿ ಜಿಲ್ಲೆ, ಮೊಬೈಲ್ : ೮೭೨೨೭೨೬೮೮೬

ಚಂದ್ರನಾಲಿಗೆ

■ ರಾಮಪ್ಪಕೋಟಿಹಾಳ್

ನಿನ್ನ ನೋಡುವ ಮುನ್ನ
ಈ ಜಗತ್ತಿನಲ್ಲಿ ಅರ್ಧ ಹೂತು ಹೋಗಿದ್ದೆ
ಮಂದ ಬೆಳಕಿನಂತೆ
ನಿನ್ನ ನೆನಪು ಮಾತ್ರ ನನ್ನೊಂದಿಗಿದ್ದವು

ಮಮತೆಯನು ಜವಾಬ್ದಾರಿಯಂತೆ
ಹಸಿವಿನ ಆಯುಧ ಹೊತ್ತು ನಡೆದವನು
ಜಗತ್ತಿನ ಬಣ್ಣಗಳೊಂದಿಗೆ

ಮುಖವಾಡದ ನಖಗಳೊಂದಿಗೆ ಹೊಂದಿಕೊಳ್ಳುವುದು
ನನಗೆ ತುಂಬ ಕಷ್ಟ!

ಚಿಗುರನು ಚಿವುಟುವ
ಕೈಗಳು ಬಲವಾಗಿವೆ
ಗಂಟಲುಗತ್ತು ಗೆಲ್ಲುತ್ತದೆ ಇಲ್ಲಿ
ನರಕದ ಬಾಗಿಲಲ್ಲಿ ನಿಂತ
ನನ್ನ ಪ್ರಾರ್ಥನೆ ಯಾರು ಕೇಳಬಲ್ಲರು?

ಜಗತ್ತು ನಾಣ್ಯದೊಂದಿಗೆ ಚಲಾವಣೆಯಾಗುತ್ತಿದೆ
ಚಂದ್ರನ ನಾಲಗೆ ಮೇಲೆಯೂ ಬೆಂಕಿ ಬಿದ್ದಿದೆ
ನಾನು ಮತ್ತು ನೀನು ನೆಪ ಮಾತ್ರ

ಉಪನ್ಯಾಸಕರು, ಲೊಯೋಲಾ ಕಾಲೇಜು, ಲೊಯೋಲಾ ನಗರ
ಪಿ.ಬಿ. ನಂ. ೮, ರಾಯಚೂರು ರಸ್ತೆ, ರಾಯಚೂರು ಜಿಲ್ಲೆ ಮಾನವಿ
ಮೊಬೈಲ್ : ೯೯೮೬೮೪೫೧೩೮

ಇದೇ ದೂಳ ನೆಲದಲ್ಲಿ

■ ರೂಪಾ ಕೋಟೇಶ್ವರ

ಚಕ್ರಗಳು ಉರುಳಿವೆ...
ಜೋತು ಬಿದ್ದ ಕನಸುಗಳು
ಘರ್ಷಣೆಗೆ ಇಳಿಯದೇ
ಹಾಗೇ ಉರುಳಿಸಿವೆ,
ಒಂದಕ್ಕೊಂದು ಸಮನಾಗಿ
ಸಾಗುವ ಚಕ್ರಗಳ

ಡಾಂಬರಿಲ್ಲದ ರಸ್ತೆಯ
ದೂಳು
ಕಿತ್ತಿಟ್ಟ ಬ್ರೇಕು
ಮೌನಕ್ಕೆ ಜಾರಿದ ಹಾರ್ನ್‌ಗಳಿಗೇನಾದರೂ
ಜೀವ ಬಂದಿದ್ದರೆ,
ಅರೆರೆ... ಉಳಿದುಬಿಡುತ್ತಿತ್ತು
ಅಳಿದುಳಿದ ದಮನಿತರ
ಪಯಣ

ಪಯಣ ಈಗಷ್ಟೆ ಆರಂಭ...
ಶಾಂತಿ ದೂತರು ಸಾಗಿಬಂದದ್ದೂ
ಇದೇ ಮಾರ್ಗದಲ್ಲಿ
ವಿಶ್ವಕವಿ ರವೀಂದ್ರರ ಆಶಯಗಳೆಲ್ಲ
ಹರಡಿಕೊಂಡಿದ್ದು ಇದೇ ದೂಳ ನೆಲದಲ್ಲಿ

ಕಡಲು ಆರ್ಭಟಿಸುವ ಸರಳ
ಸಂಧ್ಯಾಕಾಲದಲ್ಲಿ
ನೆಲ ಮುಗಿಲು ಒಂದಾದ
ಕ್ಷಿತಿಜ

ಹೊಸ ಮೂಲ ಹುಡುಕಿ
ನೆಲದ ಬಿಲದೊಳಗೆ ಹರಿದು
ಅಂತರಗಂಗೆಯಾಗಲು
ಹಸಿದ ಮೋಡಗಳು

ದೂಳ ಹಿಡಿದ ರಸ್ತೆಯಲ್ಲೇ
ಮೈಯ ಮೂಳೆಯ ಬಿಟ್ಟ
ಜೋಳಿಗೆಯ ಜಂಗಮ
ಲಲಾಟದಲ್ಲಿ ಉರಿಯುತ್ತಿರುವ
ಕೆಂಪನೀರು
ಶಾಂತಚಿತ್ತ, ತ್ರಿಕಾಲ ಜ್ಞಾನಿ
ಕಂಡವರಿಗೆ

ಒಲೆಯೇ ಉರಿಸದೆ ಪಾತ್ರೆಗಳ
ತಳಹಿಡಿದ ತುಕ್ಕು...
ಅದರ ಕರ ಕರ ಶಬ್ದಕ್ಕೊ
ಕರಳ ಉರಿಗೋ ಕನವರಿಸಿದ
ಕರದಲ್ಲೇ ನೆಲೆ ನಿಂತವರಿಗೊಂದು ಮಂತ್ರವ
ಹರಿದ ಖಾವಿ ಬಟ್ಟೆಯೊಳಗಿನ
ಮೈಯ ಕೊಳೆಯೂ
ಗಂಧದಂತೆಂದರು, ತೇದರೂ
ಪರಂಪರೆಯ
ಲೆಕ್ಕಾಚಾರದೊಳಗೆ ಸುಭದ್ರಪಡಿಸಿದರು...

ಎಂದೂ ತುಂಬದ ಜೋಳಿಗೆಯೊಳಗೆ
ಸಾವು ಸಾಷ್ಟಾಂಗ ಹಾಕಿತ್ತು
ತಣ್ಣಗುಳಿದ ಅವನ ತಾಳ್ಮೆಯಂತೆ

ಹಿಡಿ ಅನ್ನ, ಹನಿ
ನೀರು ನೀಡುವಿರಾ?
ಕಣ್ಣಲ್ಲೇ ಇಳಿಬಿಟ್ಟು, ನಿಶ್ಚಲನಾಗಿ ಹೋದ
ಜಂಗಮ ಇದೇ
ದೂಳ ನೆಲದಲ್ಲಿ...

ನಂ. ೫೧೫/೫೧೬/೨, ಶ್ರಮಜೀವಿ ಕಾಂಪ್ಲೆಕ್ಸ್
ಬಿ ರಸ್ತೆ, ದಾವಣಗೆರೆ - ೫೭೭ ೦೦೨
ಮೊಬೈಲ್ : ೯೪೪೯೩೭೯೪೦೪

ಗಜಲ್

■ ರೇಣುಕಾ ಎ ಕಠಾರಿ

ಏಕತಾರಿ ಹುರಿಗೆ ಗೆಜ್ಜೆಯೊಂದು ಕುಣಿಯದೆ ಮೌನವಾಗಿದೆ
ತುಟಿಯ ತೊಟ್ಟಲಿನ ಮಾತು ನುಡಿಯದೆ ಮೌನವಾಗಿದೆ

ಬಳೆಗಳ ಹಸಿರಲು ಉಸಿರು ನಿಲ್ಲುತ್ತಿಲ್ಲ ಅವನ ನೆನಪ ಮುಂದೆ
ಗಡಿಯಾರದ ಮುಳ್ಳುಗಳು ಸುತ್ತದೆ ಮೌನವಾಗಿದೆ

ಹಿಂದಣ ಹೆಜ್ಜೆಗಳ ಎಲೆಗಳೆಲ್ಲ ಉದುರುತ್ತಿವೆ ನೂರೆಂಟು ಕಾರಣಕೆ
ತೋರಣ ಕಟ್ಟಿದ ಬಾಗಿಲ ಮುಂದೆ ನಗುವು ಕಾಣದೆ ಮೌನವಾಗಿದೆ

ದೇವರ ಮುಂದಿನ ಹಾಡಿಗೆ ಧನಿಯಿಲ್ಲದೆ ಮೂಕವಾಗಿದೆ
ಭರವಸೆಯ ಬದುಕು ನಾಳೆಯ ನೆನೆದೆ ಮೌನವಾಗಿದೆ

ರೇಣು ನಿನ್ನ ಮನೆ ಮುಂದೆ ರಂಗೋಲಿಯ ತುಂಬ ಹನಿಗಳು ಏಳುತ್ತಿವೆ
ಖುಷಿಯ ಸಿಹಿನೀರು ಕೈಗೆ ಸಿಗದೆ ಮೌನವಾಗಿದೆ

ಲಕ್ಷ್ಮೀ ನಗರ ೧ ನೇ ಕ್ರಾಸ್, ಪೆಟ್ರೋಲ್ ಬಂಕ್ ಹತ್ತಿರ, ಕಾಕತಿ -೫೯೧೧೧೩, ತಾ.ಜಿ. ಬೆಳಗಾವಿ
ಮೊ: ೯೯೦೧೪೩೯೦೧೨ ಮಿಂಚಂಚೆ: renuka8.kathari@gmail.com

ನೀ ನನ್ನ ಗಂಡನಾಗಬಾರದಿತ್ತು

■ ಎನ್.ಆರ್. ರೂಪಶ್ರೀ

ನಿನಗೆ ನೆನಪಿದೆಯಾ
ಕೆರೆ ಏರಿ ಮೇಲೆ
ಕೈ ಕೈ ಹಿಡಿದು ನಡೆದಿದ್ದು
ಅಕ್ಕ ಪಕ್ಕ ಹೆಜ್ಜೆ ಹಾಕಿ
ಗುರುತನ್ನು ಹಿಂತಿರುಗಿ ನೋಡಿದ್ದು

ಆಗಸದ ಚುಕ್ಕಿಯನ್ನು
ಕತ್ತೆತ್ತಿ ನೋಡಿ ನಕ್ಕಿದ್ದು
ಸುಮ್ಮನೆ ಹಗಲಿನಲಿ
ಮೌನದ ತೆಕ್ಕೆಯೊಳಗೆ
ಸೇರಿ ಮಲಗಿದ್ದು
ಹೊತ್ತಲ್ಲದ ಹೊತ್ತಿನಲ್ಲಿ
ಇಲ್ಲಸಲ್ಲದ ಚರ್ಚೆ
ಮಾಡಿ ಮುನಿಸಿಕೊಂಡಿದ್ದು
ಕೊನೆಗೆ ಪ್ರೀತಿಯಿಂದ
ಸಂತೈಸಿ ಕ್ಷಮಿಸಿದ್ದು

ನಿನಗೆ ನೆನಪಿದೆಯಾ
ಯಾವ ಸಂಬಂಧವಿಲ್ಲದ
ನಮ್ಮ ಬಂಧದಲ್ಲಿ
ಹಸೆಮಣೆ ಏರಿದ್ದು

ಹಸ್ತದ ಮೇಲೆ ಹಸ್ತವನಿಟ್ಟು
ಇಬ್ಬರೂ ಕಣ್ಣಿಗೆ ಕಣ್ಣು ಸೇರಿಸಿದಾಗ
ಅಳುಕಿನಲ್ಲೂ ಸೆಳೆತದ
ಸೆರೆ ಅನುಭವಿಸಿದ್ದು

ಋಷಿಯಿಂದ ಸಪ್ತಪದಿ
ತುಳಿದು ಹೊರಬಂದು
ಹೊಸಿಲ ದಾಟಿದಾಗ
ಅನಿಸಿದ್ದು
ಗೆಳೆಯ ನೀ ನನ್ನ
ಗಂಡನಾಗಬಾರದಿತ್ತು!

ಈಗ ಮೌನವಾಗಿದ್ದೇನೆ
ನಿನ್ನಲ್ಲಿನ ಗೆಳೆತನದ
ಹೃದಯ ದೂರವಾಗಿದ್ದಕ್ಕೆ
ನನ್ನಲ್ಲಿನ ತುಂಟತನ
ಮಾಯವಾಗಿದ್ದಕ್ಕೆ
ಜೊತೆಗೆ
ಗಂಡನನ್ನು ಗೆಳೆಯನನ್ನು
ಏಕಕಾಲಕ್ಕೆ ಕಳೆದುಕೊಂಡಿದ್ದಕ್ಕೆ!

ಕೆರೆ ಏರಿ
ಹೆಜ್ಜೆ ಗುರುತು
ನಗು ಮುನಿಸು
ಮಿನುಗು ಚುಕ್ಕಿ
ಎಲ್ಲ ಹೇಳುತ್ತಿವೆ
ಗೆಳೆಯ ನೀ
ನನ್ನ ಗಂಡನಾಗಬಾರದಿತ್ತು

ಶ್ರೀಧರ ಕೃಪಾ ನಿಲಯ, ಎಲ್‌ಐಜಿ-೧೫೦, ೨ನೇ ಬ್ಲಾಕ್
ಎಂ ಬ್ಲಾಕ್, ಸಿಐಟಿಬಿ ವಲಯ, ಕುವೆಂಪುನಗರ
ಮೈಸೂರು - ೫೭೦ ೦೨೩, ಮೊಬೈಲ್: ೯೪೮೧೨೫೯೫೭೪

ಪದವಾಗುವ ಸೋಜಿಗವೇ

■ ಸತ್ಯಮಂಗಲ ಮಹದೇವ

ಹಾಲಾಗಿ ಮಾಗುತ್ತಿರುವ
ಹಸುವ ಕೆಚ್ಚಲಿನೊಳಗಣ ರಕುತವೇ

ಹೊರಗಣ ಮೈಲಿಗೆ ತೊಳೆದು
ಒಳಗಣ ತನಿರಸವಾಗುವ ಜೀವ ಜಲವೇ

ಛಲದ ಗರಡಿಯ ಪಾಠ, ಕ್ರಮದೊಳಗೊಂದು ವಿಕ್ರಮ
ತೋರಿಸೆ ಹೊರಟ, ಭೂಮಿ ತೂಕದ ಜೀವಗಳೇ

ಉಸಿರು ಚಿಗುರೊಡೆವಂತೆ
ನಾದವೇ ಮೈಮರೆತು ಹರಿವಂತೆ ಉರಿದ
ಬಿದಿರ ಜೀವಗಳೇ

ನಿಧಾನದೊಳಗೊಂದು ಸಂಚಲನದ ಪರಿಯ
ತೈಲದೊಳಗೊಂದು ತಲ್ಲಣಿಸುವ ಬೆಳಕ
ಧ್ಯಾನಿಸುವ ಆದಿಮದ ಹೂವುಗಳೇ

ರಕ್ತ ಮಾಂಸದೊಳಡಗಿ ಭಾವವಾಗುವ ಉಸಿರೇ
ಉಸಿರು ಜಿನುಗಿಸಿದ ಜೀವ, ಪದವಾಗುವ ಸೋಜಿಗವೇ

ಬೀಜವಾಗಿ, ಹೂವಾಗಿ, ಹಣ್ಣಾಗಿ, ಮತ್ತೆ
ಕಣ್ಣೊಡೆಯುವ ಅನಂತವೇ

ರುಚಿಯಾಗಿಯೇ ಮುಕ್ತವಾಗೋ
ರಸ ಕೂಡಿದ ತುಟಿಗಳೇ
ನಂಟು ಬೆಸೆದು, ಬಂಧ ತೊಡಿಸಿ ಹಾರುವಾಗ
ಬನ್ನಿ ನನ್ನ ಕವಿತೆಗೆ
ಮಾಗುವಂತ ಹಿರಿಯ ಮಾರ್ಗ
ಬರಲಿ ನನ್ನ ಕವಿತೆಗೆ

ಪ್ರತಿಕ್ರಿಯೆ

ಅನಂತಮೂರ್ತಿಯವರ ಬಗೆಗೆ ಲೇಖನಗಳಿರುವ ಸಂಚಿಕೆ (೧೦೫) ಬಂತು. ನಿಮ್ಮ ಮಾತುಗಳಲ್ಲಿ ನೀವು ಅನಂತಮೂರ್ತಿಯವರನ್ನು ಒಂದು ಬಗೆಯ ಲೋಕವು ಹೇಗೆ ಗ್ರಹಿಸಿತು? ಎನ್ನುವುದರ ಬಗೆಗೆ ಚೆನ್ನಾಗಿ ಚರ್ಚಿಸಿದ್ದೀರಿ

★

ಆದರೆ, ಒಂದು ಮಾತು ನಾವು ನೆನಪಿಡಬೇಕು. ಬಹಳ ಭಾರವಾದ, ವಿಸ್ತಾರವಾದ ವಸ್ತುವನ್ನು ತೂಗುವಾಗ ನಾವು ಕೆಲವು ಅನ್ಯಮಾತುಗಳನ್ನು ಲಕ್ಷ್ಯದಲ್ಲಿಡಬೇಕು. ಮೊದಲನೆಯದಾಗಿ ನೀವು ನಿಂತ ನೆಲ ಗಟ್ಟಿಯಾಗಿರಬೇಕು. ಹಾಗೂ ನಿಮ್ಮ ಹೆಜ್ಜೆಗಳು ಅಲ್ಲಿ ಗಟ್ಟಿಯಾಗಿ ತಳ ಊರಿರಬೇಕು. ಎರಡನೆಯದಾಗಿ ಆ ವಸ್ತುವನ್ನು ಸರಿಯಾಗಿ ಗುರುತಿಸಿಕೊಳ್ಳಬೇಕು. ಅಲ್ಲಿ ತನ್ನ 'ಎತ್ತು-ಪ್ರಜ್ಞೆ'ಯ ಬೆರಳುಗಳು ನಿಲುಕುವಂತಹ ಒಂದು 'ಪೊಜಿಶನ್' ಅನ್ನು ನಾವು ಅಂಗೀಕರಿಸಬೇಕು. ಎತ್ತುವಾಗ ತನ್ನಲ್ಲಿ ಉಂಟಾಗುತ್ತಿರುವ ದಣಿವು, ಶ್ರಮ, ಸೋಲು, ವಿಷಾದಗಳನ್ನು ಲಕ್ಷ್ಯವಿಟ್ಟು ದಾಖಲಿಸಿಕೊಳ್ಳುತ್ತಿರಬೇಕು. ಇಷ್ಟೆಲ್ಲ ಆದ ಮೇಲೂ ಎಲ್ಲಿಗೆ ತನ್ನ ಶಕ್ತಿಯು ಬರಿದಾಯಿತು ಎಂಬುದರ ಆತ್ಮ-ಪ್ರಜ್ಞೆಯ ಅರಿವೂ ಬೌದ್ಧಿಕ-ತೆರೆಗಳ ಮೇಲೆ ಸ್ಪಷ್ಟವಾಗಿ ಮೂಡುತ್ತಿರಬೇಕು.

ಇಷ್ಟೆಲ್ಲ ಎಚ್ಚರಗಳನ್ನು ವಹಿಸಿ ಒಂದು ವ್ಯಕ್ತಿತ್ವನ್ನು ಎತ್ತಲು ಹೊರಟಾಗಲೂ ದೇಶ-ಕಾಲಗಳಾಚೆಗಿನ ಎರಡು ನಿಯತ -ಸತ್ಯಗಳನ್ನು ಎತ್ತಿಕೊಳ್ಳುವ ವಸ್ತು ನಮಗೆ ಕಾಣುವುದು ನಮಗಿರುವ ನಮ್ಮ ಅನುಲ್ಲಂಘನೀಯ ಕಾಣ್ಕೆಯ ಸ್ವರೂಪಕ್ಕನುಗುಣವಾಗಿ ಮಾತ್ರ. ಅಂದರೆ 'ಜಗತ್ತು ಹೀಗಿದೆ' ಎಂದು ಹೇಳುವವನಿಗಿಂತ 'ಜಗತ್ತು ನನಗೆ ಹೀಗೆ ಕಂಡಿದೆ' ಎಂದು ಹೇಳುವವ ಹೆಚ್ಚು ಸತ್ಯಕ್ಕೆ ಹತ್ತಿರವಾದ ತೂಕವನ್ನು ನೀಡಬಲ್ಲ. ಈ ಬಗೆಯ ನೋಟದಿಂದ ಜಗತ್ತನ್ನು ನೋಡಲು ನಮಗೆ ನಿಜವಾಗಿ ಬೇಕಾಗುವುದು 'ತಾತ್ವಿಕ ಮಾಂತ್ರಿಕ ಶಕ್ತಿ'ಯೇ ಹೊರತು, 'ವೈಚಾರಿಕ ಹಸಿ-ಬಿಸಿ ಕೊಸರಾಟ'ವಲ್ಲ. ಆದರೆ, ಇದು ಒಂದು ಪ್ರಕ್ರಿಯೆ. 'ಕೊನೆಗೂ ಇದು ನಾನು 'ಕಂಡ' ಜಗತ್ತೇ ಹೊರತು, ಅದು 'ಇದ್ದ' ಜಗತ್ತಲ್ಲ' ಎನ್ನುವ ಅರಿವಿದ್ದವನೂ ತನ್ನೊಳಗಿನ ವೈಚಾರಿಕತೆ ತನ್ನದೇ ಆದ 'ತಾತ್ವಿಕತೆ'ಯಾಗಿ ಮಾಗುವವರೆಗೆ ಒಂದು 'ಹಾಜರಾತಿ-ಕಾಲ'(Transit Period)ನಲ್ಲಿ ಒಂದು ಅವಧಿಯನ್ನು ಕಳೆಯಬೇಕಾಗುತ್ತದೆ.

ತಪ್ಪಿ ವೈಚಾರಿಕ ಶಕ್ತಿಯು ತಾತ್ವಿಕಶಕ್ತಿಯಾಗುವ ಪ್ರಕ್ರಿಯೆಗೆ ಆ ವೈಚಾರಿಕ ಶಕ್ತಿಯಿಂದಲೇ ಒಂದು ವಿರೋಧಿ ಪ್ರಕ್ರಿಯೆ ಹುಟ್ಟತೊಡಗಿದರೆ ಆಗ ಆತ ಅದನ್ನೂ ತನ್ನ ವೈಚಾರಿಕ ಶಕ್ತಿಯಿಂದಲೇ ನಿಯಂತ್ರಿಸಿಕೊಳ್ಳಬೇಕಾಗುತ್ತದೆ. ಅದಾಗದಿದ್ದರೆ 'ತಾತ್ವಿಕಶಕ್ತಿ'ಯ ಸ್ಪರ್ಶವೇ ಇಲ್ಲದೆ ಅದನ್ನು ವಿರೋಧಿಸುತ್ತ ಹೋಗಬೇಕಾಗುತ್ತದೆ.

ನಿಜ ಹೇಳಬೇಕೆಂದರೆ, ಈ 'ವೈಚಾರಿಕ ಶಕ್ತಿ' ಹಾಗೂ 'ತಾತ್ವಿಕಶಕ್ತಿ'ಗಳೆಂಬ ಪದಗಳ ಅರ್ಥವ್ಯಾಪ್ತಿಯ ವಿಸ್ತಾರ, ಅಂತಹ, ವೈರುಧ್ಯ, ಹಾಗೂ ಸಂಘರ್ಷಗಳ ಬಗೆಗೆ ಬಹಳ ವಿಸ್ತಾರವಾದ ಚರ್ಚೆ ಕನ್ನಡದ ನೆಲದಲ್ಲಿ ನಡೆಯುವುದೇ ನಿಂತುಬಿಟ್ಟಿದೆ. ಹೀಗಾಗಿ ತನಗೆ ಕಂಡ ಜಗತ್ತನ್ನು ತಾನು ಕಂಡ ಸ್ಥಿತಿಯಲ್ಲೇ ಅದು 'ಇರುವ' ಜಗತ್ತನ್ನಾಗಿ ಬಿಂಬಿಸುವ, ಸ್ಥಾಪಿಸುವ ಒರಟು ಹಟಮಾರಿತನಗಳು ಅಡಿಗೋತ್ತರ ಕಾಲದಲ್ಲಿ ಪ್ರಚಂಡವಾಗಿ ಬೆಳೆದಿವೆ. ಬೇಂದ್ರೆ ಕಾಲದಲ್ಲಿ ಅದು ಇರಲಿಲ್ಲ ಎಂಬುದನ್ನು ಸಮರ್ಥಿಸಲು ಒಂದು ವಿಸ್ತೃತ ಕೃತಿ-ಸಾಕ್ಷಿಗಳ ಜಗತ್ತೇ ಇದೆ. ಆದರೆ, ಆ ಕೆಲಸ ಆಗಿಲ್ಲ.

ನೀವು ಹೇಳುವ ತೇಜಸ್ವಿ-ಲಂಕೇಶ್-ಅನಂತಮೂರ್ತಿಗಳ ನಡುವಿನ ಪರಸ್ಪರ 'ತೂಗಾಟ', ಬರಹದಲ್ಲಿ ವ್ಯಕ್ತವಾದಂತೆ, ಅದು ಅವರವರ ವೈಚಾರಿಕ-ಶಕ್ತಿಯನ್ನಷ್ಟೇ ಹಟದಿಂದ ನಂಬಿ ನಡೆಸಿದ ತೂಗಾಟ. ಅಲ್ಲಿ ಯಾವ 'ತತ್ವ-ಮಸಿ'ಯ ಅಕ್ಷರಗಳೂ ಇಲ್ಲ.ಆದರೆ, ಅಲ್ಲಿಯೂ ಲಂಕೇಶರಿಗೆ

ಮಾತ್ರ ಹೇಳಬಹುದಾದ ಒಂದು ವಿಚಿತ್ರ ಸತ್ಯವಿದೆ. ಲಂಕೇಶರಿಗೂ ತಮ್ಮ ವೈಚಾರಿಕ ಶಕ್ತಿಯು ತಾತ್ವಿಕ ಶಕ್ತಿಯಾಗಬೇಕೆಂಬ ಗುಪ್ತ ಆಶೆ ಇರುತ್ತಿತ್ತು. ಆದರೆ, ಹಲವು ಚಿಂತನೇತರ ಕಾರಣಗಳಿಂದಾಗಿ ಅವರಿಗೆ 'ಖಾಚಿತ್ಯ'ದ ಬಗೆಗೆ ಉದ್ದೇಶಪೂರ್ವಕವಾದ ಅಪನಂಬಿಕೆ ಇತ್ತು. ಅವರು ತಮ್ಮೊಳಗೆ ಇದ್ದ ಈ ಹೊಯ್ದಾಟವನ್ನೂ ತಮ್ಮ ಪ್ರಾಜ್ಞಿಕ ಹೋರಾಟದಂತೆ ಬಿಂಬಿಸಲು ಒಂದು ಉಪಾಯವನ್ನು ಕಂಡುಕೊಂಡಿದ್ದರು. ಅದನ್ನು ನಾನು 'ಸ್ವರಾಂತರಣ-ಕ್ರಿಯೆ' ಎಂದು ಕರೆಯುತ್ತೇನೆ. ಅಂದರೆ ಎದುರಿಗಿದ್ದವನನ್ನು ನಿರಾಕರಿಸಲು ಅವನು ನಿಂತ ಸ್ವರದಿಂದ ತಮ್ಮ ನಿಂತ ಸ್ವರವನ್ನು ವಿಭಿನ್ನ ದಿಕ್ಕಿನಲ್ಲಿ ಸ್ವರಾಂತರಣಗೊಳಿಸಿಕೊಂಡು ಪ್ರತಿಕ್ರಿಯಿಸುವುದು. ಒಪ್ಪಲೇಬೇಕಾದದ್ದು ಎದುರು ಬಂದ ಅನಿವಾರ್ಯ ಸಂದರ್ಭದಲ್ಲಿ ತನ್ನ ಮೂಲಭೂತ ಸ್ವರ ಭಿನ್ನವಾಗಿದ್ದರೂ ಎದುರುದಾರನ ಸ್ವರಕ್ಕೆ ಸ್ವರಾಂತರಗೊಳ್ಳುವುದು ಬಹಳಾದರೆ ಸಂರಕ್ಷಣೆಗಾಗಿ 'ಓಹೋ, ನನಗೆ ಇದು ಹೊಳೆದಿರಲೇ ಇಲ್ಲ' ಎಂಬ ಉದ್ಗಾರ ತೆಗೆಯುವುದು ಅನಂತಮೂರ್ತಿಯವರ ಬಗೆಗೆ ಮಾತ್ರವಲ್ಲ ಡಿ.ಆರ್. ರಂಥವರ ಬಗೆಗೂ ಈ ಬಗೆಯ ಪ್ರತಿಕ್ರಿಯೆಗಳು ಲಂಕೇಶರಿಂದ ದಾಖಲಿತವಾದದ್ದಿದೆ. ಹಾಗೆ ನೋಡಿದರೆ ತೇಜಸ್ವಿಯವರೆ ಹೆಚ್ಚು 'ಮಡಿವಂತ' ವೈಚಾರಿಕರು. ಅಂದರೆ, ತಮ್ಮೊಳಗಿನ 'ವೈಚಾರಿಕತೆ'ಯ ಸ್ವರೂಪದ ಬಗೆಗೆ ಅದರ ಖಚಿತ 'ಚಕಬಂದಿ' ಗೊತ್ತಿದ್ದು, ಅದರ ಭೂಗೋಲಮಿತಿಯಲ್ಲೇ ತಮ್ಮ ಬರಹಗಳನ್ನು ಎತ್ತಿ, ಬಿತ್ತಿ ಬೆಳೆದವರು.

ಹಾಗಾದರೆ, ಅನಂತಮೂರ್ತಿಯವರ ಬರಹ ಹಾಗೂ ವ್ಯಕ್ತಿತ್ವ ಇವುಗಳನ್ನು ತಾತ್ವಿಕಶಕ್ತಿಯಿಂದ ಅರ್ಥಮಾಡಿಕೊಳ್ಳುವುದೆಂದರೇನು? ಅದು ಯಾವ ಬಗೆಯ ಬಗೆತ? ಹಾಗೆ ನೋಡಿದಾಗ 'ಅವರವರ ಭಾವಕ್ಕೆ ಅವರವರ ಭಕುತಿ'ಗೆ ತಕ್ಕಂತೆ ಅನಂತಮೂರ್ತಿ ಹೇಗೆ ಕಂಡಾರು? ಎಂಬುದು ಸಹಜವಾದ ಪ್ರಶ್ನೆ. ಆದರೆ, ಮೇಲೆ ಹೇಳಿದಂತೆ ಕೊನೆಗೂ ಈ ತಾತ್ವಿಕತೆಯು ನಮ್ಮಲ್ಲಿ ಮೂಡಿಸುವ ಚಿತ್ರ ಅನಂತಮೂರ್ತಿಯವರನ್ನು ನಾವು ಕಂಡ ಬಗೆಯ ಚಿತ್ರವೇ ಹೊರತು ಅವರು 'ಇದ್ದ' ಸ್ಥಿತಿಯ ಚಿತ್ರವಲ್ಲ.

ಈ ಅರ್ಥದಲ್ಲಿ ನಾನು ಮಾಡಬಹುದಾದದ್ದೆಂದರೆ ಅನಂತಮೂರ್ತಿಯವರು ನನಗೆ ಹೇಗೆ ಕಂಡರು ಎನ್ನುವುದನ್ನು 'ಸುಮ್ಮನೆ' ವಿವರಿಸುವುದು. ಆ ಕೆಲಸಕ್ಕೆ ಒಂದು ಪ್ರತ್ಯೇಕ ಪ್ರಬಂಧದ ಪುಟಗಳೇ ಬೇಕು. ನಾನು ಆ ಕೆಲಸ ಮಾಡುವೆ. 'ಸಂಚಯ'ಕ್ಕೆ ಕಳಿಸುವೆ.

ಒಬ್ಬ ಲೇಖಕ ಏನೇನೋ ಬರೆದಿರುತ್ತಾನೆ. ಹೇಗ್ಹೇಗೋ ಬದುಕಿರುತ್ತಾನೆ. ನಮಗೆ ಎರಡೂ ಸಿಕ್ಕುವುದು 'ತೃತೀಯ-ಸಾಕ್ಷಿ'ಯ ನೆಲೆಯಲ್ಲಿ ಮಾತ್ರ. ಸಿಕ್ಕಷ್ಟನ್ನೇ ಆಧರಿಸಿ ಸಿಗದೇ ಉಳಿದದ್ದನ್ನೂ ಊಹಿಸುವುದು ಕೊನೆಗೂ ನಮ್ಮ ವೈಚಾರಿಕ ಆಟಕ್ಕೆ ನಾವೇ ದಣಿದಾಗ ನಾವೇ ನಿರ್ಮಿಸಿಕೊಳ್ಳುವ ಒಂದು ವಿವಿಧ ವಿನೋದಾವಳಿ ಮಾತ್ರವಾಗುತ್ತದೆ. ಒಂದು ಉಪಾಯವಿದೆ. ಅದೆಂದರೆ, ವ್ಯಕ್ತಿ ಮತ್ತು ಬರಹ ಎರಡನ್ನೂ ಪದ್ಯದಂತೆ ಓದಿಕೊಳ್ಳುವುದು ಈ ಅಪಾಯಗಳಿಂತ ನಮ್ಮನ್ನು ತುಸು ಪಾರು ಮಾಡಬಹುದು. ಆದರೆ, ಪದ್ಯವನ್ನೂ ಗದ್ಯದಂತೆಯೇ ಓದಿಕೊಳ್ಳುವ ಒತ್ತಡದಲ್ಲಿರುವ ಆಧುನಿಕ ಪ್ರಜ್ಞೆಗೆ, ತಮ್ಮ ಗದ್ಯ ಬರಹದಲ್ಲೂ ಪದ್ಯ ಬರೆದ ಕವಿಯಾಗಿಯೇ ಉಳಿದ ಅನಂತಮೂರ್ತಿ ಅರ್ಥಕ್ಕೆ ಮಾತ್ರ ಬೆಲೆ ಕೊಡುವ ಸಮೀಕ್ಷೆಗೆ ಅಪಾರ್ಥವಾಗುವುದು ಸಹಜ, ಅನಿವಾರ್ಯ.


★

ದೇವರಗೆಣ್ಣೂರರು ಬೇಂದ್ರೆ ನೆನಪುಗಳನ್ನು ಮಾಡಿಕೊಂಡ ಲೇಖನ ತುಂಬ ಸುಂದರವಾಗಿದೆ.

ಆನಂದ ಝುಂಜರವಾಡ

ಮುಧೋಳ, ಬಾಗಲಕೋಟೆ ಜಿಲ್ಲೆ

೯೦೦೮೨೭೪೩೬೩





ರಂಟಿಯ
ಗ್ಯಾ|ಲ|ರಿ|



SANCHAYA (Bi-Monthly), MAG(2) PRB-DECL: 309/94-95
Edited, Printed & Published by: D.V. PRAHLAD, No. 100, 2nd Main, 6th Block, 3rd Stage, 3rd Phase, Banashankari, Bangalore - 560 085, Ph: 080-2679 1925